ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 5 ಶುಕ್ರವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

46

ಸಂಪುಟ: 46 | ಸಂಚಿಕೆ: 227 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

₹4

ಮೈಸೂರು ಮಿತ್ರ ಶುಕ್ರವಾರ 5 ಡಿಸೆಂಬರ್ 2025

ವಿದ್ಯಾರ್ಥಿನಿಲಯಗಳಿಗೆ ಎಡಿಸಿ ಭೇಟಿ; ಸಮಸ್ಯೆ ಸಂಬಂಧ ವಿದ್ಯಾರ್ಥಿಗಳು, ಪೋಷಕರೊಂದಿಗೆ ಚರ್ಚೆ



ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವ್ಯಾಪ್ತಿಯ ಸರ್ಕಾರಿ ವಿದ್ಯಾರ್ಥಿ ನಿಲಯಗಳಿಗೆ ದಿಢೀರ್ ಭೇಟಿ ನೀಡಿದ ಎಡಿಸಿ ಡಾ.ಪಿ.ಶಿವರಾಜು ಪರಿಶೀಲಿಸಿದರು.

ಮೈಸೂರು, ಡಿ.4(ಎಂಕೆ)– ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವ್ಯಾಪ್ತಿಯ ಸರ್ಕಾರಿ ವಿದ್ಯಾರ್ಥಿನಿಲಯಗಳಿಗೆ ಗುರುವಾರ ದಿಢೀರ್ ಭೇಟಿ ನೀಡಿದ ಮೈಸೂರು ತಾಲೂಕಿನ ಉಸ್ತುವಾರಿಯೂ ಆದ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು, ಪರಿಶೀಲನೆ ನಡೆಸಿದರಲ್ಲದೆ ವಿದ್ಯಾರ್ಥಿಗಳ ಪೋಷಕರೊಂದಿಗೆ ಸಭೆ ನಡೆಸಿ ಕುಂದು–ಕೊರತೆ ಆಲಿಸಿದರು.

ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ಅವರ ನಿರ್ದೇಶನದ ಮೇರೆಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗಳ ಹಾಸ್ಟೆಲ್‌ಗಳಿಗೆ ಅನಿರೀಕ್ಷಿತ ಭೇಟಿ ನೀಡಿದ ಅವರು ಹಾಸ್ಟೆಲ್‌ಗಳಲ್ಲಿರುವ ಕುಂದು–ಕೊರತೆ ಹಾಗೂ ಸಮಸ್ಯೆಗಳ ಕುರಿತು ಪರಿಶೀಲನೆ ನಡೆಸಿದರು.

ಕುವೆಂಪುನಗರ, ಬೋಗಾದಿ 2ನೇ ಹಂತ ಸೇರಿದಂತೆ ಹಲವು ಹಾಸ್ಟೆಲ್‌ಗಳಿಗೆ ಭೇಟಿ ನೀಡಿದ ಅವರು, ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ಅಡುಗೆ ಕೋಣೆ ಮತ್ತು ಶೌಚಾಲಯದಲ್ಲಿ ಸ್ವಚ್ಛತೆ, ಸಾಮಗ್ರಿಗಳ ಕೊಠಡಿಗಳು ಹಾಗೂ ಆಹಾರ ಪದಾರ್ಥಗಳನ್ನು ಎಡಿಸಿ ಶಿವರಾಜು ಪರಿಶೀಲಿಸಿದರು.

ಬಳಿಕ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ, ಹಾಸ್ಟೆಲ್‌ಗಳಲ್ಲಿ ಸಮಸ್ಯೆ ಆಲಿಸಿದರಲ್ಲದೆ ಅವುಗಳನ್ನು ಕೂಡಲೇ ಬಗೆಹರಿಸುವಂತೆ ಹಾಸ್ಟೆಲ್ ಸಿಬ್ಬಂದಿ ಮತ್ತು ಅಧಿಕಾರಿಗಳಿಗೆ ಸೂಚಿಸಿದರು. ಹಾಗೆಯೆ ಹಾಸ್ಟೆಲ್‌ವೊಂದರಲ್ಲಿ ನಡೆಯುತ್ತಿದ್ದ ಪೋಷಕರ ಸಭೆಯಲ್ಲಿ ಭಾಗವಹಿಸಿ, ಅವರೊಂದಿಗೆ ಚರ್ಚಿಸಿದರು. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ರಾಘವೇಂದ್ರ, ತಾಲೂಕು ಅಧಿಕಾರಿ ಚಂದ್ರಕಲಾ ಮತ್ತಿತರರಿದ್ದರು.

ಶಾಸಕ ಶ್ರೀವತ್ಸ ವಾರ್ಡ್ ನಂ.50ರ ವ್ಯಾಪ್ತಿ ಪಾದಯಾತ್ರೆ; ಕುಂದು–ಕೊರತೆ ನಿವಾರಣೆ ಸಂಬಂಧ ಅಧಿಕಾರಿಗಳಿಗೆ ಸೂಚನೆ



ಸುಣ್ಣದಕೇರಿಯಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ ಗುರುವಾರ ಪಾದಯಾತ್ರೆ ನಡೆಸಿದರು.

ಮೈಸೂರು,ಡಿ.4(ಎಂಕೆ)– ಮೈಸೂರಿನ ವಾರ್ಡ್ ನಂ.50ರ ವ್ಯಾಪ್ತಿಯ ಸುಣ್ಣದ ಕೇರಿಯಲ್ಲಿ ಪಾದಯಾತ್ರೆ ನಡೆಸಿದ ಕೆ.ಆರ್.ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ, ಸ್ಥಳೀಯ ನಿವಾಸಿಗಳ ಕುಂದು–ಕೊರತೆ ಆಲಿಸಿದರಲ್ಲದೆ ಸ್ಥಳದಲ್ಲೇ ಕೆಲ ಸಮಸ್ಯೆಗಳನ್ನು ಬಗೆಹರಿಸಲು ಸೂಚಿಸಿದರು.

ಪಾಲಿಕೆ ಹಾಗೂ ಇನ್ನಿತರೆ ಇಲಾಖೆ ಅಧಿಕಾರಿಗಳೊಂದಿಗೆ ಗುರುವಾರ ಬೆಳಗ್ಗೆ ಸುಣ್ಣದಕೇರಿಯ 1ರಿಂದ 10ನೇ ಕ್ರಾಸ್‌ವರೆಗೆ ಪಾದಯಾತ್ರೆ ನಡೆಸಿದ ಶಾಸಕರು, ಮೋರಿಗಳಲ್ಲಿ ಕಸ ತುಂಬಿರುವುದರಿಂದ ಮಳೆ ನೀರು ರಸ್ತೆಯಲ್ಲಿ ಹರಿಯುವಂತಾಗಿದೆ. ಕೂಡಲೇ ಮೋರಿಯಲ್ಲಿ ತುಂಬಿರುವ ಹೂಳನ್ನೆ ತೆಗೆದು ಮೋರಿಗಳನ್ನು ಸ್ವಚ್ಛಗೊಳಿಸುವುದಕ್ಕೆ ಅಂದಾಜು ಪಟ್ಟಿ ಮಾಡಿ ಆಯುಕ್ತರಿಗೆ ಸಲ್ಲಿಸುವಂತೆ ಪಾಲಿಕೆ ಇಂಜಿನಿಯರ್‌ಗೆ ಸೂಚನೆ ನೀಡಿದರು.

ಹಾಗೆಯೇ ಖಾಲಿ ಸೈಟ್‌ಗಳಲ್ಲಿ ಬೆಳೆದು ನಿಂತಿರುವ ಗಿಡ–ಗಂಟಿಗಳಿಂದ ಅಕ್ಕ–ಪಕ್ಕದ ನಿವಾಸಿಗಳಿಗೆ ತೊಂದರೆಯಾಗುತ್ತಿದ್ದು, ಕೂಡಲೇ ಖಾಲಿ ನಿವೇಶನದಲ್ಲಿ ಬೆಳೆದಿರುವ ಗಿಡ–ಗಂಟಿಗಳನ್ನು ಕ್ಲೀನ್ ಮಾಡಿಸುವಂತೆ ತಿಳಿಸಿದರಲ್ಲದೆ, ಯುಜಿಡಿ ಸಮಸ್ಯೆ ಬಗೆಹರಿಸಲು ಮುಖ್ಯಮಂತ್ರಿಗಳ ವಿಶೇಷ ಅನುದಾನದಡಿಯಲ್ಲಿ 50 ಲಕ್ಷ ರೂ.ಗಳ ಮಂಜೂರಾತಿಗೆ ಮನವಿ ಮಾಡಲಾಗಿದ್ದು, ಅನುದಾನ ಮಂಜೂರಾದ ಕೂಡಲೇ ಕಾಮಗಾರಿ ಕೈಗೊಳ್ಳಲಾಗುವುದು ಎಂದು ಹೇಳಿದರು.

ಕೆಲವು ಅಡ್ಡ ರಸ್ತೆಗಳನ್ನು ಸಿಸಿ ರಸ್ತೆಗಳನ್ನಾಗಿ ಅಭಿವೃದ್ಧಿ ಮಾಡಲು ಸ್ಥಳೀಯ ನಿವಾಸಿಗಳು ಮನವಿ ಮಾಡಿದ್ದು, ಮುಂದಿನ ದಿನಗಳಲ್ಲಿ ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಮಾಜಿ ಮೇಯರ್ ಶಿವ ಕುಮಾರ್, ವಾರ್ಡ್ ಅಧ್ಯಕ್ಷ ಮಂಜು, ಮುಖಂಡರಾದ ನಂದೀಶ್ ನಾಯಕ್, ಕೃಷ್ಣ ನಾಯಕ್, ಜೋಗಪ್ಪ, ಅರುಣ, ಗಂಗಾಧರ್, ನಾಗೇಶ್, ಗಂಗಾ, ಅನಿಲ್, ಲಿಂಗರಾಜು, ಇಮ್ರಾನ್, ಫಾರೂಕ್, ಹೇಮಂತ್, ವಿನಯ್‌ಕುಮಾರ್, ಎನ್.ಪ್ರದೀಪ್ ಕುಮಾರ್, ಕಿಶೋರ್ ಮತ್ತಿತರರಿದ್ದರು.

ದ್ವಿತೀಯ ಪಿಯು ವಿದ್ಯಾರ್ಥಿಗಳಿಗೆ ಕೆರಿಯರ್ ಉತ್ಸವ

ಮೈಸೂರು, ಡಿ.4(ಜಿಎ)–ಕೆರಿಯರ್ ಉತ್ಸವ್ ಸಂಸ್ಥಾಪಕ ಶ್ರೀಪಾಲ್ ಜೈನ್ ನೇತೃತ್ವದಲ್ಲಿ ಡಿ.6ರಂದು ಬೆಳಗ್ಗೆ 9 ರಿಂದ ಸಂಜೆ 5ರವರೆಗೆ ನಗರದ ವಿಜಯನಗರದಲ್ಲಿರುವ ಜಗನ್ನಾಥ್ ಕಲಾ, ಸಾಂಸ್ಕೃತಿಕ ಕೇಂದ್ರ ಸಭಾಂಗಣದಲ್ಲಿ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗಾಗಿ ಕೆರಿಯರ್ ಉತ್ಸವ್ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾರುಕಟ್ಟೆ ಸಮಾಲೋಚಕ ಚಂದನ್ ಈ ವಿಷಯ ತಿಳಿಸಿ, ಬೋರ್ಡ್ ಪರೀಕ್ಷೆಗಳಲ್ಲಿ ಉತ್ತಮ ಅಂಕ ಗಳಿಸುವುದು ಹೇಗೆ, ವೃತ್ತಿ ನಿರ್ಧಾರ ಕೈಗೊಳ್ಳುವ ವೇಳೆ ಗಮನಿಸಬೇಕಾದ ವಿಷಯ, ತಮ್ಮ ಪರೀಕ್ಷೆಗಳ ಬಗ್ಗೆ ನಿಗದಿತ ಆಲೋಚನೆ, ನಿರ್ವಹಣಾ ತಂತ್ರ ಕುರಿತ ಸಲಹೆ, ಮಾಹಿತಿ ಇರಲಿವೆ. ಶಾಲಾ–ಕಾಲೇಜು ವಿದ್ಯಾರ್ಥಿಗಳು ಪಾಲ್ಗೊಳ್ಳಬಹುದಾಗಿದ್ದು, ಉಚಿತ ಪ್ರವೇಶವಿದೆ ಎಂದರು.

102 ಬಾರಿ ರಕ್ತದಾನ ಮಾಡಿರುವ ಮೈಸೂರಿನ ಕೆಪಿಟಿಸಿಎಲ್ ಇಂಜಿನಿಯರ್

ಮೈಸೂರು, ಡಿ.4(ಬಿಎಲ್‌ಯು)–ಮೈಸೂರಿನ ಕೆಪಿಟಿಸಿಎಲ್ ಇಂಜಿನಿಯರ್‌ವೊಬ್ಬರು ಬರೋಬ್ಬರಿ 102 ಬಾರಿ ರಕ್ತದಾನ ಮಾಡಿ ದಾಖಲೆ ಬರೆದಿದ್ದಾರೆ. ಮೈಸೂರಿನ ಬನ್ನಿಮಂಟಪದ ಕೆಪಿಟಿಸಿಎಲ್ ಇಂಜಿನಿಯರ್ ಡಾ.ಟಿ.ತ್ಯಾಗರಾಜ್ ರಕ್ತದಾನ ಮಾಡಿದವರಾಗಿದ್ದಾರೆ.



ಡಾ.ತ್ಯಾಗರಾಜ್ ಅವರು ಕಳೆದ 36 ವರ್ಷದಿಂದ 102 ಬಾರಿ ರಕ್ತದಾನ ಮಾಡಿದ್ದಾರೆ. ವರ್ಷಕ್ಕೆ 4 ಬಾರಿಯಂತೆ, ಪ್ರತಿ 3 ತಿಂಗಳಿಗೊಮ್ಮೆ ರಕ್ತದಾನ ಮಾಡುತ್ತಾರೆ. ರಕ್ತದಾನದಿಂದ ಬಹಳಷ್ಟು ರೋಗಿಗಳಿಗೆ ಅನುಕೂಲವಾಗುತ್ತದೆ ಎಂಬುದನ್ನು ಅರಿತಿರುವ ಡಾ.ತ್ಯಾಗರಾಜ್ ಅವರು ತಾವು ರಕ್ತದಾನ ಮಾಡುವುದರ ಜೊತೆಗೆ ಈ ತನಕ ಬೇರೆಯವರಿಂದ 149 ಜನರಿಗೆ ರಕ್ತದಾನ ಮಾಡಿಸಿದ್ದಾರೆ. ರಕ್ತದಾನ ಮಾಡಿರುವ ಅವರಿಗೆ ಮೈಸೂರು ಮೆಡಿಕಲ್ ಕಾಲೇಜ್ ಅಂಡ್ ರಿಸರ್ಚ್ ಇನ್ಸ್ಟಿಟ್ಯೂಟ್‌ನವರು ಸರ್ಟಿಫಿಕೇಟ್ ಕೂಡ ನೀಡಿದ್ದಾರೆ.

ರಕ್ತದಾನದಿಂದ ಆರೋಗ್ಯಕ್ಕೆ ಬಹುಪಯೋಗ

ರಕ್ತದಾನ ಮಾಡುವುದರಿಂದ ಜೀವವೊಂದನ್ನು ಉಳಿಸಬಹುದಾಗಿದೆ. ಆದರೆ ರಕ್ತ ನೀಡುವುದರಿಂದ ತಾವು ನಿಶ್ಶಕ್ತಗೊಳ್ಳುತ್ತೇವೆ, ಅನಾರೋಗ್ಯಕ್ಕೆ ಒಳಗಾಗುತ್ತೇವೆ ಎಂಬ ತಪ್ಪು ಭಾವನೆ ಇದೆ. ಇದರಿಂದ ರಕ್ತದಾನ ಮಾಡಲು ಬಹಳಷ್ಟು ಜನರು ಹಿಂದೇಟು ಹಾಕುತ್ತಿದ್ದಾರೆ.

ಆದರೆ ರಕ್ತದಾನ ಮಾಡುವುದರಿಂದ ದಾನಿಗಳ ಆರೋಗ್ಯಕ್ಕೆ ಬಹಳಷ್ಟು ಉಪಯೋಗವಿದೆ. ಹೃದಯದ ಆರೋಗ್ಯ ಸುಧಾರಿಸಲಿದೆ, ರಕ್ತದೊತ್ತಡ ಕಡಿಮೆಯಾಗಲಿದೆ, ಕ್ಯಾಲರಿಗಳನ್ನು ಬರ್ನ್ ಮಾಡಲು ಸಹಾಯಕವಾಗಲಿದೆ. ನಿಯಮಿತವಾಗಿ ರಕ್ತದಾನ ಮಾಡುವುದರಿಂದ ದೇಹದಲ್ಲಿರುವ ಕಬ್ಬಿಣದ ಮಟ್ಟ ಕಡಿಮೆಯಾಗಲಿದೆ, ಇದು ರಕ್ತದ ಸ್ನಿಗ್ಧತೆ (ದೇಹದಲ್ಲಿ ರಕ್ತದ ನಿಧಾನ ಹರಿವಿಕೆ) ಕಾರಣವಾಗಲಿದೆ, ಇದರಿಂದ ಹೃದಯಕ್ಕೆ ರಕ್ತ ಪಂಪ್ ಆಗಲು ಸುಲಭವಾಗುತ್ತದೆ. ಸಹಜವಾಗಿಯೇ ಇದರಿಂದ ಹೃದಯ ಸಂಬಂಧಿತ ಖಾಯಿಲೆ ಹಾಗೂ ರಕ್ತದೊತ್ತಡದಿಂದ ಮುಕ್ತವಾಗಬಹುದು. ಈ ಹಿನ್ನೆಲೆಯಲ್ಲಿ ಪ್ರತಿಯೊಬ್ಬರು ಆಗಾಗ್ಗೆ ರಕ್ತದಾನ ಮಾಡಬೇಕು. ಇದರಿಂದ ಆರೋಗ್ಯಕ್ಕೆ ಬಹಳಷ್ಟು ಉಪಯೋಗವಿದೆ. ಇದು ಬಿಟ್ಟು ಪೂರ್ವಾಗ್ರಹಪೀಡಿತರಾಗಿ ರಕ್ತದಾನದ ಬಗ್ಗೆ ತಪ್ಪು ಅಭಿಪ್ರಾಯ ಹೊಂದುವುದು ಬೇಡ.

ನಾಳೆ ರೇರಾ ಜಾಗೃತಿ ಕಾರ್ಯಾಗಾರ

ಮೈಸೂರು,ಡಿ.4(ಜಿಎ)–ಕ್ರೆಡೈ ಮೈಸೂರು ಮತ್ತು ಕರ್ನಾಟಕ ರೇರಾ ವತಿಯಿಂದ ಡಿ.6ರಂದು ಸಂಜೆ 4.30ಕ್ಕೆ ವಿಶ್ವೇಶ್ವರ ನಗರ ಎಂಬಿಸಿಟಿ ಹಾಲ್‌ನಲ್ಲಿ ರೇರಾ ಜಾಗೃತಿ ಕಾರ್ಯಾಗಾರ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಅಧ್ಯಕ್ಷ ಹರೀಶ್ ಶೆಣೈ ಶ್ರೀಹರಿ ಈ ವಿಷಯ ತಿಳಿಸಿ, ಬಡಾವಣೆ ನಿರ್ಮಾಣಕಾರರು, ಡೆವಲಪರ್‌ಗಳು, ರಿಯಲ್ ಎಸ್ಟೇಟ್ ಕ್ಷೇತ್ರದಲ್ಲಿರುವವರಿಗೆ ಈ ಕಾರ್ಯಾಗಾರ ಉಪಯುಕ್ತವಾದುದಾಗಿದೆ. ರೇರಾ ಕಾಯ್ದೆ ಹೊಸ ನಿಯಮ, ಅನುಸರಣೆ ಕ್ರಮ, ಪ್ರಾಯೋಗಿಕ ಅಂಶಗಳ ಬಗ್ಗೆ ಮಾಹಿತಿ ನೀಡಲಾಗುವುದು. ರೇರಾ ಕಾಯ್ದೆಯ ಅನುಷ್ಠಾನದಲ್ಲಿ ಪಾರದರ್ಶಕತೆ ಮತ್ತು ಜವಾಬ್ದಾರಿ ಅರಿವು ಮೂಡಿಸಲಾಗುವುದು ಎಂದರು.

ಕಾರ್ಯಾಗಾರದಲ್ಲಿ ಕರ್ನಾಟಕ ರೇರಾ ಮುಖ್ಯಸ್ಥರಾದ ರಾಕೇಶ್ ಸಿಂಗ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಅತಿಥಿಗಳಾಗಿ ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ, ಜಿಪಂ ಸಿಇಓ ಎಸ್.ಯುಕೇಶ್‌ಕುಮಾರ್, ಮೈಸೂರು ಮಹಾನಗರಪಾಲಿಕೆ ಆಯುಕ್ತ ಶೇಕ್ ತನ್ವೀರ್ ಆಸೀಫ್, ಮೈಸೂರು ಅಭಿವೃದ್ಧಿ ಪ್ರಾಧಿಕಾರ ಆಯುಕ್ತ ಕೆ.ಆರ್.ರಕ್ಷಿತ್ ಆಗಮಿಸಲಿದ್ದಾರೆ. ಕಾರ್ಯಾಗಾರವನ್ನು ರೇರಾ ಕಾರ್ಯದರ್ಶಿ ಡಾ.ಹೆಚ್.ಆರ್.ಶಿವಕುಮಾರ್ ನಡೆಸಿಕೊಡಲಿದ್ದಾರೆ. ರೇರಾದ ಹಿರಿಯ ಅಧಿಕಾರಿಗಳು ಭಾಗವಹಿಸಿ ಹೊಸ ಯೋಜನೆಗಳ ರೇರಾ ನೋಂದಣಿ ಪ್ರಕ್ರಿಯೆ, ವಿಸ್ತರಣೆ ಮತ್ತು ಅನುಸರಣೆ, ಗ್ರಾಹಕರ ದೂರು ನಿವಾರಣೆ, ಬಡಾವಣೆ ಅಥವಾ ಅಪಾರ್ಟ್‌ಮೆಂಟ್ ನಿರ್ಮಾಣಗಾರರು ಎದುರಿಸುವ ಸಾಮಾನ್ಯ ಸವಾಲು ಸೇರಿದಂತೆ ಅನೇಕ ವಿಷಯಗಳ ಬಗ್ಗೆ ಮಾರ್ಗದರ್ಶನ ನೀಡಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಶ್ರೀಹರಿ, ಕುಮಾರಸ್ವಾಮಿ, ನಾಗರಾಜ್ ವಿ.ಬೈರಿ, ಉದಯ್ ಎಸ್.ಕುಮಾರ್ ಉಪಸ್ಥಿತರಿದ್ದರು.

ನಾಯಕತ್ವ ಗುಣದಿಂದ ಯಶಸ್ಸು ಸಾಧ್ಯ

ಉದ್ಯಮಿ ಚಂದ್ರಕಾಂತ್ ಅಭಿಮತ




ಅಂತಾರಾಷ್ಟ್ರೀಯ ಲಿಂಗಾಯತ್ ಯೂತ್ ಫೋರಂ ಮೈಸೂರು ಘಟಕದ ವತಿಯಿಂದ ನಡೆದ 'ಐ ಲೀಡ್' ಕಾರ್ಯಕ್ರಮದಲ್ಲಿ ಕರ್ನಾಟಕ ಪೊಲೀಸ್ ಅಕಾಡೆಮಿ ನಿರ್ದೇಶಕ ಸಿ.ಚೆನ್ನಬಸವಣ್ಣ ಅವರನ್ನು ಸನ್ಮಾನಿಸಲಾಯಿತು.

ಮೈಸೂರು, ಡಿ.4(ಎಂಕೆ)– ಉದ್ಯಮದಲ್ಲಿ ಯಶಸ್ಸು ಸಾಧಿಸಬೇಕಾದರೆ, ನಾಯಕತ್ವದ ಗುಣಗಳನ್ನು ಬೆಳೆಸಿಕೊಳ್ಳುವುದು ಅವಶ್ಯ ಎಂದು ಉದ್ಯಮಿ ಚಂದ್ರಕಾಂತ್ ಅಭಿಪ್ರಾಯಪಟ್ಟರು.

ನಗರದಲ್ಲಿ ಖಾಸಗಿ ಹೋಟೆಲ್‌ನಲ್ಲಿ ಅಂತಾರಾಷ್ಟ್ರೀಯ ಲಿಂಗಾಯತ್ ಯೂತ್ ಫೋರಂ (ILYF) ಮೈಸೂರು ಘಟಕದಿಂದ ನಡೆದ 'ಐಲೀಡ್ (I-Lead)' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಯಾವುದೇ ಉದ್ಯಮ ಆರಂಭಿಸ ಬೇಕಾದರೂ ಉದ್ಯಮಿಯಾಗುವವರಲ್ಲಿ ನಾಯಕತ್ವದ ಗುಣ ಇರುವುದು ಮುಖ್ಯವಾಗುತ್ತದೆ. ಆಗ ಮಾತ್ರವೇ ಎಲ್ಲರೊಂದಿಗೆ ಸೇರಿ ನಾವೂ ಕೆಲಸ ಮಾಡುತ್ತಾ ಉದ್ಯಮವನ್ನು ಹಾಗೂ ಇಡೀ ಸಮಾಜವನ್ನು ಬೆಳೆಸಬಹುದು ಎಂದು ತಿಳಿಸಿದರು.

ಕೆಪಿಎ ನಿರ್ದೇಶಕ ಸಿ.ಚೆನ್ನಬಸವಣ್ಣ ಉದ್ಯಮ ಕ್ಷೇತ್ರದಲ್ಲಿ ಎದುರಾಗುವ ಸವಾಲುಗಳ ಬಗ್ಗೆ ತಿಳಿಸಿದರು. ಅಂತಾರಾಷ್ಟ್ರೀಯ ಲಿಂಗಾಯತ್ ಯೂತ್ ಫೋರು ಮೈಸೂರು ಘಟಕದ ಅಧ್ಯಕ್ಷ ಕೆ.ಹೆಚ್.ಕಿರಣ್, ಉಪಾಧ್ಯಕ್ಷ ಮಹೇಶ್, ಕಾರ್ಯದರ್ಶಿ ಸಂತೋಷ್, ಮಾಜಿ ಅಧ್ಯಕ್ಷ ಬಿ.ಎಸ್.ಪ್ರಶಾಂತ್, ಹೆಚ್.ಎಸ್.ವೀರೇಶ್, ಡಾ.ಧರ್ಮಪ್ರಸಾದ್, ಕೆ.ಎಸ್.ಮಹದೇವಪ್ರಸಾದ್, ಸಹ ಕಾರ್ಯದರ್ಶಿಗಳಾದ ರುದ್ರೇಶ್, ತೀರ್ಥಸ್ವಾಮಿ, ಸಂತೋಷ್ ಕೆಂಚಾಂಬ, ಅವಿನಾಶ್ ಪಾಳೆಗಾರ್, ಪದಾಧಿಕಾರಿಗಳಾದ ಮನು, ಪ್ರವೀಣ್, ಶಿವಕುಮಾರ್, ಶೀಲಾ, ಜೈಶಂಕರ, ಮಲ್ಲಿಕಾರ್ಜುನ್, ರವಿಕಿರಣ್, ಕೃಷ್ಣಮೂರ್ತಿ ಮತ್ತಿತರರಿದ್ದರು.

ಧನಸಹಾಯ...



ಮೈಸೂರು ಕೆ.ಜಿ.ಕೊಪ್ಪಲಲ್ಲಿ ಶ್ರೀ ಶನೈಶ್ಚರಸ್ವಾಮಿ ದೇವಸ್ಥಾನ ನಿರ್ಮಾಣ ಕಾಮಗಾರಿಗೆ ಶ್ರೀಮತಿ ಬಸಮ್ಮ ಮತ್ತು ಸೋನಿ ಎಂ.ಕರೀಗೌಡರ ಕುಟುಂಬ ಹಾಗೂ ಬಸವಮಾರ್ಗ ಸಂಸ್ಥೆಯ ಸಂಸ್ಥಾಪಕ ಎಸ್.ಬಸವರಾಜು ಸ್ನೇಹ ಬಳಗದಿಂದ ದೇವಸ್ಥಾನದ ಆಡಳಿತ ಮಂಡಳಿ ಮುಖ್ಯಸ್ಥರಿಗೆ ಧನಸಹಾಯ ನೀಡಲಾಯಿತು. ಈ ವೇಳೆ ಬಸವಮಾರ್ಗ ಸಂಸ್ಥೆಯ ಸಂಸ್ಥಾಪಕ ಬಸವರಾಜು, ಇಂಡಿಯನ್ ಟಿವಿ ಮುಖ್ಯಸ್ಥ ಎಸ್.ವೆಂಕಟೇಶ್, ರಾಜು, ಆಡಳಿತ ಮಂಡಳಿಯ ವೆಂಕಟೇಶ್, ಕುಮಾರ್, ವಿಶ್ವ, ಚೆಲುವ ಇನ್ನಿತರರು ಉಪಸ್ಥಿತರಿದ್ದರು.

ಉಚಿತ ಆರೋಗ್ಯ ತಪಾಸಣಾ ಶಿಬಿರ


ಮೈಸೂರು,ಡಿ.4–ಎನ್‌ಜೆಎಸ್ ಚಾರಿಟಬಲ್ ಟ್ರಸ್ಟ್, ಮೈಸೂರು ವೀರಶೈವ ಸಜ್ಜನ ಸಂಘದ ಸಂಯುಕ್ತಾಶ್ರಯದಲ್ಲಿ ಡಿ.9ರಂದು ಬೆಳಗ್ಗೆ 9.30ರಿಂದ ಮಧ್ಯಾಹ್ನ 2 ರವರೆಗೆ ಮಂಡಿ ಮೊಹಲ್ಲಾದ ಕಬೀರ ರಸ್ತೆ, ಮಂಡಿ ಪೊಲೀಸ್ ಸ್ಟೇಷನ್ ಹತ್ತಿರವಿರುವ ಕಂಠಿ ಮಲ್ಲಣ್ಣನವರ ಕಲ್ಯಾಣ ಮಂದಿರದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ಹೆಚ್.ಎಸ್. ಬಸವರಾಜ್, ಮೊ. 94487 53597, ಎಂ.ಎನ್. ಜೈಪ್ರಕಾಶ್, ಮೊ. 99161 55453, 94487 38657 ಸಂಪರ್ಕಿಸಬಹುದು.

ಡಿ.6ಕ್ಕೆ ಶಿಕ್ಷಕರಿಗೆ ಸಹಪಠ್ಯ ಚುಟುವಟಿಕೆ ಸ್ಪರ್ಧೆ

ಮೈಸೂರು,ಡಿ.4(ಎಂಕೆ)–ಮೈಸೂರಿನ ಮಹಾರಾಜ ಸರ್ಕಾರಿ ಪ್ರೌಢಶಾಲೆಯಲ್ಲಿ ಡಿ.6ರಂದು ಕ್ಷೇತ್ರ ಶಿಕ್ಷಣಾಧಿಕಾರಿ ಮೈಸೂರು ದಕ್ಷಿಣ ವಲಯ ಹಾಗೂ 2025–26ನೇ ಸಾಲಿನ ಶಿಕ್ಷಕರ ಕಲ್ಯಾಣ ನಿಧಿ ಸಹಯೋಗದಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರಿಗೆ ವಿವಿಧ ಸಹಪಠ್ಯ ಚಟುವಟಿಕೆ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ಭಕ್ತಿಗೀತೆ, ಆಶುಭಾಷಣ ಸ್ಪರ್ಧೆ, ಪ್ರಬಂಧ, ಸ್ಥಳದಲ್ಲೇ ಪಾಠೋಪಕರಣ ತಯಾರಿಕೆ, ಚಿತ್ರಕಲೆ, ರಸ ಪ್ರಶ್ನೆ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ.

ನಿಧನ

ಎಸ್.ರಾಮಚಂದ್ರ



ಮೈಸೂರು, ಡಿ. 4–ಬನುಮಯ್ಯ ಪಾಲಿಟೆಕ್ನಿಕ್ ಕಾಲೇಜಿನ ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥರಾಗಿದ್ದ ಎಸ್.ರಾಮಚಂದ್ರ (58) ಹೃದಯಾಘಾತದಿಂದ ಬುಧವಾರ ರಾತ್ರಿ ನಿಧನರಾದರು. ಅವರು ಪತ್ನಿ ಉಮಾ, ಇಬ್ಬರು ಪುತ್ರರು ಅಪಾರ ಬಂಧು ವರ್ಗ, ಮಿತ್ರರ ಅಗಲಿದ್ದಾರೆ. ಇವರು ನಗರದ ಚಾಮರಾಜಪುರಂನ ಲಕ್ಷ್ಮಿ ರಾಮಸ್ವಾಮಿ ಸೌಧ ಅಪಾರ್ಟ್‌ಮೆಂಟ್ ನಿವಾಸಿಯಾಗಿದ್ದರು. ಅಂತ್ಯಕ್ರಿಯೆ ನಾಳೆ (ಶುಕ್ರವಾರ) ಬೆಳಿಗ್ಗೆ 11 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನ ಚಿತಾಗಾರದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

5.12.2025 ಶುಕ್ರವಾರ, ಮಳೆ ನಕ್ಷತ್ರ: ಜ್ಯೇಷ್ಠ 03.12.2025 ರಿಂದ 15.12.2025
ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಶುಕ್ಲ ಪಕ್ಷ,
ತಿಥಿ: ಪಾಡ್ಯ, ನಕ್ಷತ್ರ: ರೋಹಿಣಿ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಹುಣ್ಣಿಮೆ – ಶ್ರೀ ದತ್ತಾತ್ರೇಯ ಜಯಂತಿ, ಬೆಳಗ್ಗೆ 9 ಗಂಟೆಗೆ ಮಂತ್ರ ಉಪದೇಶ ಕಾರ್ಯಕ್ರಮ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.

■ **ದೀಪಾ ಶಿಕ್ಷಣ ಮತ್ತು ಸೇವಾ ಟ್ರಸ್ಟ್ :** ಶಾಲಾ ವಾರ್ಷಿಕ ಕ್ರೀಡಾಕೂಟ, ಅಧ್ಯಕ್ಷತೆ : ಟ್ರಸ್ಟ್ ಅಧ್ಯಕ್ಷ ಎಂ. ರಾಮಪ್ಪ, ಮುಖ್ಯ ಅತಿಥಿಗಳು : ಶಾಸಕ ದರ್ಶನ್ ಧ್ರುವನಾರಾಯಣ್, ಅತಿಥಿಗಳು : ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ಉದಯ್ ಕುಮಾರ್, ಸ್ಥಳ: ದೀಪಾ ಶಾಲೆ ಕ್ರೀಡಾಂಗಣ, ರೂಪಾನಗರ, ಬೆಳಗ್ಗೆ 9ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ರೇಷ್ಮೆ ಕೃಷಿ ವಿಜ್ಞಾನ ಅಧ್ಯಯನ ವಿಭಾಗ, ಮಾಳವಿಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರ :** ರೇಷ್ಮೆ ಕೃಷಿಯಲ್ಲಿ ಕೌಶಲ್ಯಾಭಿವೃದ್ಧಿ ಕುರಿತು ರಾಷ್ಟ್ರೀಯ ಕಾರ್ಯಾಗಾರ, ಅಧ್ಯಾಪಕರ ಅಭಿವೃದ್ಧಿ ಕಾರ್ಯಕ್ರಮ, ರಾಷ್ಟ್ರೀಯ ಉಚ್ಚತರ್ ಶಿಕ್ಷಾ ಅಭಿಯಾನ್–2.0, ಉದ್ಘಾಟನೆ : ಪೊಲೀಸ್ ಉಪ ಮಹಾನಿರೀಕ್ಷಕ ಡಾ. ಎಂ.ಬಿ. ಬೋರಲಿಂಗಯ್ಯ, ಮುಖ್ಯ ಅತಿಥಿಗಳು : ಕೇಂದ್ರ ರೇಷ್ಮೆ ಮಂಡಳಿ ನಿರ್ದೇಶಕ ಡಾ. ಎಸ್. ಮಂಥಿರಮೂರ್ತಿ, ಅಧ್ಯಕ್ಷತೆ : ರೇಷ್ಮೆ ಕೃಷಿ ವಿಜ್ಞಾನ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ. ಬಿ. ಸಣ್ಣಪ್ಪ, ಸ್ಥಳ: ವಿಚಾರ ಸಂಕಿರಣ ಕೊಠಡಿ, ಮಾನಸಗಂಗೋತ್ರಿ, ಬೆಳಗ್ಗೆ 9.30ಕ್ಕೆ.

■ **ಶ್ರೀ ಗೀತಾ ಪ್ರಚಾರಿಣಿ ಸಭಾ ಟ್ರಸ್ಟ್ (ಬ್ರಹ್ಮೀಭೂತ ಶ್ರೀ ಶಂಕರಾನಂದ ಭಾರತೀ ಸ್ವಾಮಿಗಳಿಂದ ಸ್ಥಾಪಿತ ಗೀತಾಮಂದಿರ, ಮೈಸೂರು:** 91ನೇ ವರ್ಷದ ಶ್ರೀ ಗೀತಾ ಜಯಂತಿ ಮಹೋತ್ಸವ, ಬೆಳಗ್ಗೆ 8ಕ್ಕೆ ಸಾಮೂಹಿಕ ಭಗವದ್ಗೀತೆ ಪಾರಾಯಣ, 8.30ಕ್ಕೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ. ಸಂಜೆ 5.45ಕ್ಕೆ ಶ್ರೀ ವಿದ್ಯಾವಿಷ್ಣು ಸಭಾ ಟ್ರಸ್ಟ್ ಇವರಿಂದ ವಿಷ್ಣು ಸಹಸ್ರನಾಮ ಪಾರಾಯಣ, ಸಂಜೆ 6.30ರಿಂದ ಬಿ.ಎನ್. ಮಾಧವಾಚಾರ್ ಅವರಿಂದ ಶ್ರೀ ರಾಮಚಾರಿತ್ರ ಮಂಜರೀ. ಸ್ಥಳ: ಗೀತಾ ಮಂದಿರ, ಅಶೋಕ ರಸ್ತೆ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ. ಬೆಳಗ್ಗೆ 10 ರಿಂದ.

■ **ಮೈಸೂರು ವಿಶ್ವವಿದ್ಯಾನಿಲಯ :** ಆಡಳಿತಾತ್ಮಕ ಸಿಬ್ಬಂದಿಗೆ ಮೈಕ್ರೋಸಾಫ್ಟ್ ಎಕ್ಸೆಲ್ ಕುರಿತು ಕಾರ್ಯಾಗಾರ, ಉದ್ಘಾಟನೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಉಪಸ್ಥಿತರು : ಕುಲಸಚಿವೆ ಎಂ.ಕೆ.ಸವಿತಾ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ. ಎನ್.ಎಸ್. ಹರಿನಾರಾಯಣ, ಸ್ಥಳ: ಯೂನಿವರ್ಸಿಟಿ ಕೆರಿಯರ್ ಹಬ್, ಮಾನಸಗಂಗೋತ್ರಿ, ಬೆಳಗ್ಗೆ 10ಕ್ಕೆ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ತಲೆ ಕೂದಲು, ಗಂಟಲು, ದಂತ ಮತ್ತು ಆಮವಾತಕ್ಕೆ ಚಿಕಿತ್ಸಾ ಶಿಬಿರ. ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್. ಬೆಳಗ್ಗೆ 10 ರಿಂದ.

■ **ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ :** ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಸಂಸ್ಮರಣಾ 30ನೇ ಸಂಗೀತ ಸಮ್ಮೇಳನ, ಬೆಳಗ್ಗೆ 10 ರಿಂದ ವಿದ್ವಾನ್ ಬಳ್ಳಾರಿ ಎಂ. ರಾಘವೇಂದ್ರರವರ ಶಿಷ್ಯ ವೃಂದದವರಿಂದ ಸಂಗೀತಾಂಜಲಿ, ಬೆಳಗ್ಗೆ 10.30ಕ್ಕೆ ವಿದ್ವತ್ ಗೋಷ್ಠಿ, ವಿದುಷಿ ಅರ್ಚನಾ ಎಲ್. ರಾವ್–ಪಲ್ಲವಿ ಗಾಯನದ ವಿವಿಧ ಆಯಾಮಗಳು, ನಡೆ–ಪಲ್ಲವಿಗಳು, ರಾಗಮಾಲಿಕೆ, ಗ್ರಹಭೇದ ಪಲ್ಲವಿಗಳು ಇತ್ಯಾದಿ, ಬೆಳಗ್ಗೆ 11.30ಕ್ಕೆ ವಿದುಷಿ ಹಿರಣ್ಮಯೀ ಶ್ರೀನಿಧಿ–ರಾಗಭಾವದಲ್ಲಿ ಗಮಕಗಳ ಪಾತ್ರ, ಸಂಜೆ 5.30 ರಿಂದ ವಿದ್ವಾನ್ ಅಚ್ಯುತ ಆತ್ರೇಯ ಅವರಿಂದ ಕೊಳಲು, ವಿದ್ವಾನ್ ರೂಪನಗುಡಿ ರತ್ನತೇಜ–ವಯೋಲಿನ್, ವಿದ್ವಾನ್ ನಂದನ್ ಕಶ್ಯಪ್–ಮೃದಂಗ, ಸಂಜೆ 6.30 ರಿಂದ ವಿದ್ವಾನ್ ವಿಷ್ಣುದೇವ ನಂಬೂದಿರಿ ಅವರಿಂದ ಗಾಯನ, ವಿದುಷಿ ಚಾರುಲತಾ ರಾಮಾನುಜಂ–ವಯೋಲಿನ್, ವಿದ್ವಾನ್ ಅರ್ಜುನ್ ಕುಮಾರ್–ಮೃದಂಗ, ವಿದ್ವಾನ್ ರಘುನಂದನ್ ರಾವ್–ಘಟಂ, ಸ್ಥಳ: ನವಜ್ಯೋತಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಕಾಲೇಜು, ಸರಸ್ವತಿಪುರಂ.

■ **ಮೈಸೂರು ವಿಶ್ವವಿದ್ಯಾನಿಲಯ, ಭೂ ವಿಜ್ಞಾನ ಅಧ್ಯಯನ ವಿಭಾಗ:** ಕೈಗಾರಿಕಾ ಮಹತ್ವದ ಖನಿಜ ಸಂಪನ್ಮೂಲಗಳು ಕುರಿತು ಕಾರ್ಯಕ್ರಮ, ಉದ್ಘಾಟನೆ: ಮೈಸೂರು ವಿವಿ ಕುಲಸಚಿವೆ ಎಂ.ಕೆ.ಸವಿತಾ, ಉಪಸ್ಥಿತರು: ಪ್ರೊ.ನಾಗರಾಜು, ಪ್ರೊ.ಸುರೇಶ್‌ಕುಮಾರ್, ಸ್ಥಳ: ಎಂಎನ್‌ವಿ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್ :** ಡಾ.ಆರ್.ಉಷಾರಾಣಿ ಅವರು ರಚಿಸಿರುವ ಕನ್ನಡ ಸ್ಪರ್ಧಾ ಕೈಪಿಡಿ ಕೃತಿ ಲೋಕಾರ್ಪಣೆ ಸಮಾರಂಭ, ಕೃತಿ ಬಿಡುಗಡೆ: ಹಿರಿಯ ಪತ್ರಕರ್ತ ಸಿ.ಕೆ.ಮಹೇಂದ್ರ, ಕೃತಿ ಕುರಿತು: ಆಡಳಿತಾಧಿಕಾರಿ ಡಾ.ಟಿ.ತಿಮ್ಮಯ್ಯ, ಪ್ರಾಸ್ತಾವಿಕ ನುಡಿ: ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ.ಚಂದ್ರಶೇಖರ್, ಉಪಸ್ಥಿತರು: ಡಾ.ಆರ್.ಉಷಾರಾಣಿ, ಪ್ರಕಾಶಕ ಡಿ.ಎನ್. ಲೋಕಪ್ಪ, ಸ್ಥಳ: ಮೈಸೂರು ಜಿಲ್ಲಾ ಪತ್ರಕರ್ತರ ಸಂಘ, ತ್ಯಾಗರಾಜ ರಸ್ತೆ, ಬೆಳಗ್ಗೆ 11ಕ್ಕೆ.

■ **ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಮೈಸೂರು ಜಿಲ್ಲಾ ಸಹಕಾರ ಒಕ್ಕೂಟ :** ಪ್ರಬಂಧ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣಾ ಕಾರ್ಯಕ್ರಮ, ಬಹುಮಾನ ವಿತರಣೆ : ಶಾಸಕ ಜಿ.ಡಿ. ಹರೀಶ್‌ಗೌಡ, ಅಧ್ಯಕ್ಷತೆ : ಮಾಜಿ ಮುಡಾ ಅಧ್ಯಕ್ಷ ಹೆಚ್.ವಿ. ರಾಜೀವ್, ಮುಖ್ಯ ಅತಿಥಿಗಳು : ಬಿ.ಎನ್. ಸದಾನಂದ, ಕೆ. ಉಮಾಶಂಕರ್, ಸ್ಥಳ: ಮೈಸೂರು ಜಿಲ್ಲಾ ಸಹಕಾರ ಯೂನಿಯನ್ ಸಭಾಂಗಣ, ಮಧ್ಯಾಹ್ನ 1ಕ್ಕೆ.

■ **ಶ್ರೀ ಪಂಚಮುಖಿ ಆಂಜನೇಯಸ್ವಾಮಿ ದೇವಸ್ಥಾನ :** 25ನೇ ವರ್ಷದ ಹನುಮಜಯಂತಿ ಮಹೋತ್ಸವ, ವಿಶೇಷ ಪೂಜೆ, ಅಲಂಕಾರ, ಅಭಿಷೇಕ, ಪ್ರಸಾದ ಸೇವೆ, ಧಾರ್ಮಿಕ ಪೂಜಾ ಕಾರ್ಯಕ್ರಮ, ಸ್ಥಳ: ಶ್ರೀ ಪಂಚಮುಖಿ ಆಂಜನೇಯಸ್ವಾಮಿ ದೇವಸ್ಥಾನ, ಇರ್ವಿನ್ ರಸ್ತೆ.

■ **ಮೈಸೂರು ವಿಶ್ವವಿದ್ಯಾನಿಲಯ ಕನಕ ನೌಕರರ ಸಂಘ ವಿದ್ಯಾರ್ಥಿಗಳು ಮತ್ತು ಸಂಶೋಧಕರ ಸಂಘ** : 538ನೇ ಶ್ರೀ ಕನಕದಾಸ ಜಯಂತ್ಯೋತ್ಸವ, ಉದ್ಘಾಟನೆ: ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ, ಮುಖ್ಯ ಭಾಷಣಕಾರರು: ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಉಪಾಧ್ಯಕ್ಷ ನಿಕೇತ್‌ರಾಜ್ ಮೌರ್ಯ, ಮುಖ್ಯ ಅತಿಥಿಗಳು: ಶಾಸಕರಾದ ಜಿ.ಟಿ.ದೇವೇಗೌಡ, ಅನಿಲ್ ಚಿಕ್ಕಮಾದು, ಕೆ. ಹರೀಶ್‌ಗೌಡ, ಡಿ. ರವಿಶಂಕರ್, ದರ್ಶನ್ ಧ್ರುವನಾರಾಯಣ್, ಸಂಸದ ಸುನೀಲ್ ಬೋಸ್, ಮೈಸೂರು ವಿವಿ ಕುಲಪತಿ ಪ್ರೊ. ಲೋಕನಾಥ್, ಕುಲಸಚಿವೆ ಎಂ.ಕೆ. ಸವಿತಾ, ಡಾಎನ್. ನಾಗರಾಜ, ಅಧ್ಯಕ್ಷತೆ : ಕನಕ ನೌಕರರ ಸಂಘದ ಅಧ್ಯಕ್ಷ ಕೃಷ್ಣಮಲ್ಲೇಗೌಡ, ಸ್ಥಳ:ರಾಣಿ ಬಹದ್ದೂರ್ ಸಭಾಂಗಣ, ಮಾನಸಗಂಗೋತ್ರಿ, ಮಧ್ಯಾಹ್ನ 3ಕ್ಕೆ

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಪಂಡಿತ್ ವ್ಯಾಸತೀರ್ಥಚಾರ್ಯ ಅವರಿಂದ ಮಹಾಭಾರತ ತಾತ್ಪರ್ಯ ನಿರ್ಣಯ ಕುರಿತು ಪ್ರವಚನ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿ ಮಠ, ಜಯಲಕ್ಷ್ಮಿಪುರಂ, ಸಂಜೆ 5 ರಿಂದ.

■ **ಗಾನಭಾರತೀ :** ಶ್ರೀ ಶ್ರೀನಿವಾಸ ರಾಘವನ್ ಮತ್ತು ಶ್ರೀಮತಿ ಲಲಿತಾ ರಾಘವನ್ ಅವರ ನೆನಪಿನಲ್ಲಿ ವಿದುಷಿ ಹೆಚ್.ಜಿ. ಅಮೃತವರ್ಷಿಣಿ ಅವರಿಂದ ಗಾಯನ, ವಿದ್ವಾನ್ ಅವೋಘ್ ನಡಾದುರ್–ಪಿಟೀಲು, ವಿದುಷಿ ರಂಜನಿ ಸಿದ್ಧಾಂತಿ ವೆಂಕಟೇಶ್–ಮೃದಂಗ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.

■ **ಸೂತ್ರ ಫೌಂಡೇಷನ್ :** ದೃಶ್ಯ ರಾಗ ರಂಗ ಸಂಗಮ, ಉಚಿತ ರಂಗ ತರಬೇತಿ ಶಿಬಿರದ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಎನ್‌ಎಸ್‌ಡಿ ಕೇಂದ್ರ ನಿರ್ದೇಶಕರಾದ ಡಾ. ವೀಣಾ ಶರ್ಮ ಭೂಸನೂರ ಮಠ, ಕರ್ನಾಟಕ ನಾಟಕ ಅಕಾಡೆಮಿ ರಿಜಿಸ್ಟ್ರಾರ್ ಶ್ರೀಮತಿ ನೀಲಮ್ಮ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ಕರ್ನಾಟಕ ನಾಟಕ ಅಕಾಡೆಮಿ ಸದಸ್ಯರಾದ ಎ.ಎಸ್. ಚಂದ್ರಶೇಖರ್, ರವೀಂದ್ರನಾಥ ಸಿರಿವರ, ರಂಗ ನಿರ್ದೇಶಕ ದಿನೇಶ್ ಚಮ್ಮಾಳಿಗೆ, ಸೂತ್ರ ಫೌಂಡೇಷನ್ ಸಂಸ್ಥಾಪಕ ಕಾರ್ಯದರ್ಶಿ ಜಿ. ಜಗದೀಶ್ ಕುಮಾರ್, ಸ್ಥಳ: ಕಿರು ರಂಗ ಮಂದಿರ, ಸಂಜೆ 6.30ಕ್ಕೆ.

■ **ರಾಗಮಾಲಾ, ಚಾರು ಪ್ರತಿಷ್ಠಾನ, ಕಲಾಸುರುಚಿ :** ದಶಕದ ರಾಗಮಾಲ, ಪಂಡಿತ್ ಸಚಿನ್ ಹಂಪಿ ಅವರಿಂದ ಸರೋದ್ ವಾದನ, ಪಂಡಿತ್ ಭೀಮಾಶಂಕರ–ತಬಲಾ, ವಿದುಷಿ ಎಸ್.ವಿ. ಸಹನಾ ಅವರಿಂದ ವೀಣಾವಾದನ, ವಿದ್ವಾನ್ ಜಿ.ಎಸ್. ರಾಮಾನುಜಂ–ಮೃದಂಗ, ಸ್ಥಳ:ಚಾರು ಪ್ರತಿಷ್ಠಾನ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸ್ವಾತಂತ್ರ್ಯ ದೀಪ ಸ್ವರಾಜ್ಯ ಸೇನಾನಿಗಳ ಕುರಿತ ಬಾನುಲಿ ಸರಣಿ, ಪ್ರಸ್ತುತಿ : ನಿತೀಶ್ ಡಂಬಳ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ– ಅಂಬಯ್ಯನುಲಿ ಹಾಗೂ ಕೆ.ಪಿ. ರೇವತಿ, ವ್ಯಾಖ್ಯಾನ–ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಕನ್ನಡ ಚಿತ್ರಗೀತೆಗಳು, 9.00 ನಮ್ಮ ಆರೋಗ್ಯ–ವಿಶ್ವ ಏಡ್ಸ್ ದಿನಾಚರಣೆಯ ಸಂದೇಶ ಮತ್ತು ಮಹತ್ವ ಕುರಿತು ತಿಳಿಸಿಕೊಡಲಿದ್ದಾರೆ ಮೈಸೂರಿನ ಆಶಾಕಿರಣ ಛಾರಿಟಬಲ್ ಟ್ರಸ್ಟ್ ಮತ್ತು ಆಸ್ಪತ್ರೆಯ ವೈದ್ಯಾಧಿಕಾರಿ ಮತ್ತು ಸಂಶೋಧನಾಧಿಕಾರಿ ಡಾ. ಶ್ರೀರಾಮ. ನಂತರ ಏಡ್ಸ್ ವ್ಯಾಧಿಗೆ ತುತ್ತಾಗಿ ಗುಣಮುಖರಾದವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 9.30 ಗಾಂಧೀ ಸ್ಮೃತಿ, 9.35 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, ಕಾಮನ ಬಿಲ್ಲು–ಬದುಕಿನ ಬಣ್ಣಗಳ ಚಿತ್ತಾರ, ಪ್ರಸ್ತುತಿ : ಜಿ.ಎನ್. ಮಂಜುನಾಥ್

ಮಧ್ಯಾಹ್ನ: 12.35 ದೇವರನಾಮ, 12.45 ಕಾದಂಬರಿ ವಿಹಾರ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ–ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ.ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, 4.00 ಮಹಿಳಾರಂಗ, 4.30 ವೃತ್ತಿ ಮಾರ್ಗದರ್ಶನ, ವಿಶೇಷ ಚೇತನ ವಿದ್ಯಾರ್ಥಿಗಳಿಗೆ ತಾಂತ್ರಿಕ ಶಿಕ್ಷಣದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಮೈಸೂರಿನ ಜೆ.ಎಸ್.ಎಸ್. ವಿಶೇಷ ಚೇತನರ ಪಾಲಿಟೆಕ್ನಿಕ್‌ನ ಪ್ರಾಂಶುಪಾಲರಾದ ಬಿ.ಇಲಂಗೋವನ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ, 6.50 ಕೃಷಿರಂಗ–ಹಲೋ ಕೃಷಿರಂಗ, ಪ್ರಾಯೋಜಿತ ನೇರ ಫೋನ್–ಇನ್ ಕಾರ್ಯಕ್ರಮ, ಪ್ರಾಯೋಜಕರು–ಕೃಷಿ ಇಲಾಖೆ, ಕರ್ನಾಟಕ ಸರ್ಕಾರ, ವಿಷಯ–ಕಾಡು ಪ್ರಾಣಿಗಳ ಹಾವಳಿ ಮತ್ತು ನಿರ್ವಹಣಾ ಕ್ರಮಗಳು, ಭಾಗವಹಿಸುತ್ತಾರೆ–ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಡಾ. ಶ್ರೀನಿವಾಸಲು, ಪರಾಗ–ಬೇಸಾಯದ ಬದುಕು ಸರಾಗ, 7.45 ಕನ್ನಡದಲ್ಲಿ ಭಾಷಣ –ವಚನ ಸಾಹಿತ್ಯದಲ್ಲಿ ಕಾಯಕನಿರತ ಮಹಿಳೆಯರು ಈ ಕುರಿತು ಮಾತನಾಡುತ್ತಾರೆ, ಬರಹಗಾರ್ತಿ ಡಾ. ಎಲ್. ದಿವ್ಯಶ್ರೀ, 8.00 ವಿಜ್ಞಾನ ಭಾರತಿ, ನಾಲಗೆಯ ಆಚಾರ–ವಿಚಾರ, ಮಾತನಾಡುತ್ತಾರೆ–ಕೊಳ್ಳೇಗಾಲ ಶರ್ಮ ಮತ್ತು ತ್ಯಾಜ್ಯ ತ್ಯಾಜ್ಯವೆಂದು ಹೀಗಳೆಯದಿರಿ, ಮಾತನಾಡುತ್ತಾರೆ–ಸಾತನೂರು ದೇವರಾಜ್, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, 10.00 ಜನಪದ ಸಂಗೀತ, 10.30 ಸವಿನೆನಪು

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 5 ಶುಕ್ರವಾರ 2025

46

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 227 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಶಾಲಾ ಶಿಕ್ಷಕರಿಗೆ ಟಿಇಟಿ ಪ್ರಮಾಣಪತ್ರ ಕಡ್ಡಾಯವಿಲ್ಲ

- 800 ಶಾಲೆಗಳ ಸರ್ಕಾರಿ ಕರ್ನಾಟಕ ಪಬ್ಲಿಕ್ ಶಾಲೆಗಳಾಗಿ ಮೇಲ್ದರ್ಜೆಗೆ
- ರಾಜ್ಯಾದ್ಯಂತ 334 ಆಯುಷ್ಮಾನ್ ಆರೋಗ್ಯ ಮಂದಿರ ಸ್ಥಾಪನೆ
- ಮೈಸೂರು ಸೇರಿ 7 ನಗರದಲ್ಲಿ ಕೌಶಲ್ಯ ಪ್ರಯೋಗಾಲಯ ಆರಂಭ

ಬೆಂಗಳೂರು, ಡಿ.4(ಕೆಎಂಶಿ)– ಒಂದರಿಂದ ಐದನೇ ತರಗತಿಯ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಟಿಇಟಿ ಪ್ರಮಾಣಪತ್ರ ಕೈಬಿಡುವ ಮಹತ್ವದ ನಿರ್ಧಾರವನ್ನು ರಾಜ್ಯ ಸಚಿವ ಸಂಪುಟ ಇಂದಿಲ್ಲಿ ಕೈಗೊಂಡಿದೆ.





ಈ ಶಿಕ್ಷಕರು ಅಗತ್ಯ ವಿಷಯದಲ್ಲಿ ಪದವಿ ಪಡೆದಿರಲೇಬೇಕೆಂಬ ನಿಯಮ ರೂಪಿಸಿರುವ ಸರ್ಕಾರ 6 ಮತ್ತು 7ನೇ ತರಗತಿಗೆ ಬೋಧಿಸಲು ಅನುವಾಗುವಂತೆ ತಿದ್ದುಪಡಿಗೆ ಸಭೆ ಅನುಮೋದನೆ ನೀಡಿದೆ. ರಾಜ್ಯಾದ್ಯಂತ 800 ಸರ್ಕಾರಿ ಶಾಲೆಗಳನ್ನು ಕರ್ನಾಟಕ ಪಬ್ಲಿಕ್ ಶಾಲೆಗಳನ್ನಾಗಿ ಉನ್ನತೀಕರಿಸಲು ಅಗತ್ಯವಿರುವ ಡಿಪಿಆರ್ ಸಿದ್ಧಪಡಿಸಲು ಸಮ್ಮತಿಸಿದೆ.

ಕಳೆದ 2 ವರ್ಷಗಳಲ್ಲಿ ಫಾರ್ಮಸಿ ಡಿಪ್ಲೋಮಾ ತೇರ್ಗಡೆ ಆಗಿರುವ ಸುಮಾರು 1,000 ವಿದ್ಯಾರ್ಥಿಗಳನ್ನು ಮಂಜೂರಾಗಿರುವ ಖಾಲಿ ಹುದ್ದೆಗಳಿಗೆ ಪಾರದರ್ಶಕ ಆಯ್ಕೆ ಮೂಲಕ 11 ತಿಂಗಳ ಅವಧಿಗೆ ನೇಮಕಾತಿ ಮಾಡಲು ಸಭೆ ಅನುಮೋದನೆ ನೀಡಿದೆ. ಈ ಅವಧಿಯಲ್ಲಿ ನಿಗದಿತ ಸ್ಟೈಫೆಂಡ್ ಪಾವತಿ ಮೇಲೆ ಅಪ್ರೆಂಟಿಸ್‌ಗಳಾಗಿ ತೊಡಗಿಸಿಕೊಳ್ಳಬಹುದಾಗಿದೆ.

108 ಆರೋಗ್ಯ ಕವಚ ಸೇವೆಯಡಿ ನೇಮಕಗೊಳ್ಳಲಿರುವ ತುರ್ತು ವೈದ್ಯಕೀಯ ಸಿಬ್ಬಂದಿ ಮತ್ತು ಚಾಲಕರಿಗೆ ಚಾಲ್ತಿಯಲ್ಲಿರುವ ಮೂಲವೇತನವನ್ನು ಕನಿಷ್ಠ ವೇತನ ದರದಲ್ಲಿ ಹಾಗೂ ಪ್ರತಿ ವರ್ಷದ ಹಿಂದಿನ ಸೇವಾ ಅನುಭವಕ್ಕಾಗಿ ಶೇ.1 ರಷ್ಟು ದರದಲ್ಲಿ 15 ವರ್ಷದವರೆಗೆ ಅನುಭವ ಕಾರ್ಯಕ್ಷಮತೆ ಆಧಾರಿತ ಪ್ರೋತ್ಸಾಹಧನವನ್ನು ಶೇ.10ರವರೆಗೆ ನೀಡಲು ಆಡಳಿತಾತ್ಮಕ ಅನುಮೋದನೆ ನೀಡಿದೆ. ರಾಜ್ಯಾದ್ಯಂತ 334 ಆಯುಷ್ಮಾನ್ ಆರೋಗ್ಯ ಮಂದಿರಗಳನ್ನು 217 ಕೋಟಿ ರೂ. ಮೊತ್ತದಲ್ಲಿ ನಿರ್ಮಿಸಲು ಆಡಳಿತಾತ್ಮಕ ಅನುಮೋದನೆ ನೀಡಿರುವ ಸಂಪುಟ, 22 ಕೋಟಿ ರೂ.ಗಳ ಅಂದಾಜು ಮೊತ್ತದಲ್ಲಿ 22 ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ತೆರೆಯಲು ಸಮ್ಮತಿಸಿದೆ.

ಇಪ್ಪತ್ತೈದು ಪ್ರಾಥಮಿಕ ಆರೋಗ್ಯ ಕೇಂದ್ರಗಳ ನಿರ್ಮಾಣ ಕಾಮಗಾರಿಯನ್ನು 80 ಕೋಟಿ ರೂ. ಅಂದಾಜು ಮೊತ್ತದಲ್ಲಿ ಕೈಗೊಳ್ಳಲಿದೆ. ನಗರದ ನಿರಾಶ್ರಿತರ ಪರಿಹಾರ ಕೇಂದ್ರದ 3 ಎಕರೆ ಜಮೀನಿನಲ್ಲಿ ನೆಫ್ರೋ ಯುರಾಲಜಿ ಆಸ್ಪತ್ರೆ ನಿರ್ಮಿಸಲು ತೀರ್ಮಾನಿಸಲಾಗಿದೆ. ಮೈಸೂರು, ದಾವಣಗೆರೆ ಸೇರಿದಂತೆ ■6ನೇ ಪುಟಕ್ಕೆ

ದ್ವೇಷ ಭಾಷಣ ಮಾಡಿದರೆ 3 ವರ್ಷ ಜೈಲು

ಬೆಂಗಳೂರು: ಇನ್ನು ಮುಂದೆ ದ್ವೇಷ ಭಾಷಣ ಮಾಡಿದರೆ 3 ವರ್ಷ ಜೈಲು ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ. ರಾಜ್ಯದಲ್ಲಿ ದ್ವೇಷ ಭಾಷಣ ಹಾಗೂ ದ್ವೇಷದ ಅಪರಾಧ ತಡೆಗೆ ಪ್ರತ್ಯೇಕ ಕಾಯಿದೆ ಜಾರಿ ಮಾಡಲು ಗುರುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ (ಪ್ರತಿಬಂಧಕ) ವಿಧೇಯಕ 2025ಕ್ಕೆ ಅನುಮೋದನೆ ನೀಡಲಾಗಿದೆ. ಬೆಳಗಾವಿ ಅಧಿವೇಶನದಲ್ಲಿ ಉಭಯ ಸದನಗಳಲ್ಲಿ ಈ ■6ನೇ ಪುಟಕ್ಕೆ

ಮೈಸೂರಲ್ಲಿ ಕೊಡವರ ಸುಗ್ಗಿ ಸಂಭ್ರಮ



ಮೈಸೂರಿನ ಕುವೆಂಪುನಗರದಲ್ಲಿರುವ ಶ್ರೀ ಕಾವೇರಿ ಶಿಕ್ಷಣ ಸಂಸ್ಥೆ ಆವರಣದಲ್ಲಿ ಗುರುವಾರ ಕೊಡವ ಸಮಾಜದ ವತಿಯಿಂದ ಸಂಭ್ರಮ, ಸಡಗರದಿಂದ 'ಪುತ್ತರಿ ನಮ್ಮೆ(ಹುತ್ತರಿ ಹಬ್ಬ) ಆಚರಿಸಲಾಯಿತು. ಆರಾಧ್ಯ ದೇವರಾದ ಇಗ್ಗುತಪ್ಪ ಹಾಗೂ ಕಾವೇರಿ ಮಾತೆಯನ್ನು ಪ್ರಾರ್ಥಿಸಿ, ನೆರೆ ಕಟ್ಟಿ(ಭತ್ತದ ಕದಿರು ಕೊಯ್ದು) ಧಾನ್ಯ ಲಕ್ಷ್ಮಿಯನ್ನು ಮನೆ ಮನೆಗೆ ಒಯ್ದರು. ಸಾಂಪ್ರದಾಯಿಕ ಹಾಡು–ನೃತ್ಯ ಹಬ್ಬದ ಸಂಭ್ರಮವನ್ನು ಇಮ್ಮಡಿಗೊಳಿಸಿತ್ತು.

ಮನೆಗಳ್ಳತನ ಸಂಬಂಧ ಇಂಜಿನಿಯರ್ ಬಂಧನ

250 ಗ್ರಾಂ ಚಿನ್ನಾಭರಣ, 35 ಸಾವಿರ ರೂ. ನಗದು ಕದ್ದು ಕಾರು ಖರೀದಿಸಿದ್ದ!



ಎಸ್.ಪಿ. ಕಿರಣ್



ಮೈಸೂರು, ಡಿ.4(ಆರ್‌ಕೆ)– ಕಿಟಕಿ ಗಾಜು ಒಡೆದು ಮನೆಗೆ ನುಸುಳಿ 250 ಗ್ರಾಂ ಚಿನ್ನಾಭರಣ ಹಾಗೂ ನಗದು ಕಳವು ಮಾಡಿದ್ದ ಮೆಕ್ಯಾನಿಕಲ್ ಇಂಜಿನಿಯರ್‌ನನ್ನು ಆರು ತಿಂಗಳ ನಂತರ ವಿದ್ಯಾರಣ್ಯಪುರಂ ಪೊಲೀಸರು ಬಂಧಿಸಿದ್ದಾರೆ.

ಮೈಸೂರಿನ ವಿದ್ಯಾರಣ್ಯಪುರಂ ನಿವಾಸಿ ಎಸ್‌ಪಿ ಕಿರಣ್ (39) ಬಂಧಿತ ಆರೋಪಿಯಾಗಿದ್ದು ಆತನಿಂದ 250 ಗ್ರಾಂ ಚಿನ್ನಾಭರಣ ಹಾಗೂ 35 ಸಾವಿರ ರೂ. ನಗದು ವಶಪಡಿಸಿಕೊಳ್ಳಲಾಗಿದೆ. ವಿದ್ಯಾರಣ್ಯಪುರಂನ 4ನೇ ಮೇನ್, 26ನೇ ಕ್ರಾಸ್‌ನ ಮನೆ ಸಂಖ್ಯೆ 860ರ ನಿವಾಸಿ ವೀಣಾ ನಟರಾಜ್ ಎಂಬುವರ ಮನೆಯಲ್ಲಿ 2025 ರ ಮೇ ಮಾಹೆಯಲ್ಲಿ ಕಳವು ಮಾಡಲಾಗಿತ್ತು. ವೀಣಾ ಅವರು ತಮ್ಮ ತಾಯಿ ಹಾಗೂ ಪುತ್ರನೊಂದಿಗೆ ಮೇ 3ರಂದು ಸಂಬಂಧಿಕರ ಮದುವೆಗೆಂದು ಮಂಡ್ಯಕ್ಕೆ ತೆರಳಿ ಮೇ 7ರಂದು ಮಧ್ಯಾಹ್ನ 2.30 ಗಂಟೆ ವೇಳೆಗೆ ಹಿಂದಿರುಗಿದ್ದರು.

ಆಗ ಮನೆಯ ಮುಂಬಾಗಿಲ ಕಿಟಕಿ ಗಾಜು ಹೊಡೆದಿದ್ದು, ಬಾಗಿಲು ತೆರೆದಿತ್ತು ಗಾಬರಿಯಿಂದ ಒಳ ಹೋಗಿ ನೋಡಿದಾಗ ಬೆಡ್ ರೂಂನ ಅಲ್ಮೆರಾದಲ್ಲಿದ್ದ 2 ನೆಕ್ಲೇಸ್, 1 ಮುತ್ತಿನ ಸರ, 2 ಬ್ರೇಸ್‌ಲೆಟ್, 4 ಚೈನ್, 8 ಉಂಗುರ, 8 ಜೊತೆ ಕಿವಿಯೋಲೆ ಸೇರಿದಂತೆ ■6ನೇ ಪುಟಕ್ಕೆ

ಭಾರತಕ್ಕೆ ಬಂದ ರಷ್ಯಾ ಅಧ್ಯಕ್ಷ ಪುಟಿನ್; ದೆಹಲಿ ವಿಮಾನ ನಿಲ್ದಾಣದಲ್ಲಿ ಖುದ್ದು ಸ್ವಾಗತಿಸಿದ ಪ್ರಧಾನಿ ಮೋದಿ



ನವದೆಹಲಿ, ಡಿ.4– ಎರಡು ದಿನಗಳ ಭಾರತ ಭೇಟಿಗಾಗಿ ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ವಿಶೇಷ ವಿಮಾನದಲ್ಲಿ ಗುರುವಾರ ರಾತ್ರಿ ದೆಹಲಿಯ ಪಾಲಂ ವಿಮಾನ ನಿಲ್ದಾಣಕ್ಕೆ ಆಗಮಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ಖುದ್ದು ಪಾಲಂ ವಿಮಾನ ನಿಲ್ದಾಣಕ್ಕೆ ತೆರಳಿ ಭಾರತ–ರಷ್ಯಾ 23ನೇ ವಾರ್ಷಿಕ ಶೃಂಗಸಭೆಗಾಗಿ ದೆಹಲಿಗೆ ಆಗಮಿಸಿದ ಪುಟಿನ್ ಅವರಿಗೆ ಅಪ್ಪುಗೆಯ ಆತ್ಮೀಯ ಸ್ವಾಗತ ಕೋರಿದರು. ರಷ್ಯಾ ಅಧ್ಯಕ್ಷರಿಗೆ ಸಾಂಪ್ರದಾಯಿಕ ಸ್ವಾಗತ ಕೋರಲಾಯಿತು. ಬಳಿಕ ಒಂದೇ ಕಾರಿನಲ್ಲಿ ಮೋದಿ ಮತ್ತು ■6ನೇ ಪುಟಕ್ಕೆ

ದೇಶದ ಅತ್ಯಂತ ಭ್ರಷ್ಟ 5 ರಾಜ್ಯಗಳಲ್ಲಿ ಕರ್ನಾಟಕವೂ ಸೇರ್ಪಡೆ!

ರಾಜ್ಯದಲ್ಲಿ ಶೇ.63ರಷ್ಟು ಭ್ರಷ್ಟಾಚಾರವಿದೆ; ಉಪ ಲೋಕಾಯುಕ್ತ ನ್ಯಾ. ಬಿ.ವೀರಪ್ಪ



ಬೆಂಗಳೂರು, ಡಿ.4– ದೇಶದ ಐದು ಅತ್ಯಂತ ಭ್ರಷ್ಟ ರಾಜ್ಯಗಳಲ್ಲಿ ಕರ್ನಾಟಕ ಸ್ಥಾನ ಪಡೆದಿದೆ ಎಂದು ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ. ವೀರಪ್ಪ ಹೇಳಿದ್ದಾರೆ.

ದೂರುಗಳು ಮತ್ತು ನಡೆಯುತ್ತಿರುವ ತನಿಖೆಗಳನ್ನು ಉಲ್ಲೇಖಿಸಿ, ರಾಜ್ಯದಲ್ಲಿ ಭ್ರಷ್ಟಾಚಾರವು ಆತಂಕಕಾರಿ ಮಟ್ಟ ಶೇ.63 ರಷ್ಟಿದ್ದು, ಆಡಳಿತ ಮತ್ತು ಅಭಿವೃದ್ಧಿಯ ಮೇಲೆ ತೀವ್ರ ಪರಿಣಾಮ ಬೀರುತ್ತಿದೆ ಎಂದು ಹೇಳಿದ್ದಾರೆ. ಪೊಲೀಸ್ ತನಿಖೆ ಮತ್ತು ವಿಚಾರಣೆಯ ಕುರಿತ ಕಾರ್ಯಾಗಾರ ಮತ್ತು ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಅವರು, ಹೊಣೆಗಾರಿಕೆಯನ್ನು ಪುನಃಸ್ಥಾಪಿಸಲು ಮತ್ತು ಕರ್ನಾಟಕದ ಪ್ರಗತಿಯನ್ನು ರಕ್ಷಿಸಲು ತುರ್ತು ಸರಿಪಡಿಸುವ ಕ್ರಮಗಳನ್ನು ಒತ್ತಾಯಿಸಿದರು. ಭ್ರಷ್ಟಾಚಾರವನ್ನು ನಿರ್ಮೂಲನೆ ■6ನೇ ಪುಟಕ್ಕೆ

100ಕ್ಕೆ 63 ಜನ ಸರ್ಕಾರಿ ಕಚೇರಿಯಲ್ಲಿ ಲಂಚ ಕೊಡುತ್ತಿದ್ದಾರೆ



ಬೆಂಗಳೂರು, ಡಿ.4– ನಮ್ಮ ರಾಜ್ಯ ಎಷ್ಟೇ ಅಭಿವೃದ್ಧಿ ಆಗಿದೆ ಎಂದು ನಾವು ಹೇಳಿಕೊಂಡರೂ, 100ಕ್ಕೆ 63ರಷ್ಟು ಜನ ಸರ್ಕಾರಿ ಕಚೇರಿ ಕೆಲಸ ಮಾಡಿಸಿಕೊಳ್ಳಲು ಲಂಚ ಕೊಡುತ್ತಾರೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಹೆಚ್.ಕೆ. ಪಾಟೀಲ್ ಅವರು ಸೆ.10 ರಂದೇ ಬೇಸರ ವ್ಯಕ್ತಪಡಿಸಿದ್ದರು. ಜನ ಸಾಮಾನ್ಯರನ್ನು ಕಿತ್ತು ತಿನ್ನುವ, ಲೂಟಿ ಹೊಡೆಯುವ ಸಂಘಟಿತ ಭ್ರಷ್ಟಾಚಾರವನ್ನು ಇಡೀ ವ್ಯವಸ್ಥೆಯಾಗಿ ನಾವು ತಡೆಯದಿದ್ದರೆ ಪ್ರಜಾಪ್ರಭುತ್ವಕ್ಕೆ ಅಪಾಯ ಎಂದು ಅವರು ಹೇಳಿದ್ದರು.

ಸಿಎಂ ಸಿದ್ದರಾಮಯ್ಯ ವಿರುದ್ಧದ ಮುಡಾ ಕೇಸ್

ಪ್ರಾಸಿಕ್ಯೂಷನ್ ಮನವಿ ತಿರಸ್ಕರಿಸಿ, ಅಂತಿಮ ವರದಿ ಸಲ್ಲಿಕೆಗೆ ಡಿ.18 ಗಡುವು ನೀಡಿದ ಕೋರ್ಟ್

ಬೆಂಗಳೂರು, ಡಿ.4– ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಅವರ ಕುಟುಂಬದ ವಿರುದ್ಧದ ಮುಡಾ (ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ) ಹಗರಣ ಸಂಬಂಧ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಸಲ್ಲಿಸಿರುವ ಖಾಸಗಿ ದೂರು ಅರ್ಜಿ ಹಿನ್ನೆಲೆಯಲ್ಲಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲಿ ಮಹತ್ವದ ವಿಚಾರಣೆ ನಡೆಯಿತು. ಈ ಪ್ರಕರಣದಲ್ಲಿ ಅಂತಿಮ ವರದಿ ಸಲ್ಲಿಸಲು ಪ್ರಾಸಿಕ್ಯೂಷನ್ ಮತ್ತೆ ಸಮಯ ಕೋರಿ ನ್ಯಾಯಾಲಯದ ಮುಂದೆ ಮನವಿ ಮಾಡಿತ್ತು. ಆದರೆ, ನ್ಯಾಯಾಲಯ ಪ್ರಾಸಿಕ್ಯೂಷನ್‌ಗೆ ಮತ್ತಷ್ಟು ಸಮಯ ನೀಡುವುದಕ್ಕೆ ನಿರಾಕರಿಸಿ, ವಿಚಾರಣೆಗೆ ಹೊಸ ಗಡುವು ಸೂಚಿಸಿದೆ. ■6ನೇ ಪುಟಕ್ಕೆ

ಸದ್ಗುರು ಅಂಕಣ



ಇಶಾ ಫೌಂಡೇಶನ್ ಸಂಸ್ಥಾಪಕರಾದ ಸದ್ಗುರು ಜಗ್ಗಿ ವಾಸುದೇವ್ ಅವರ 'ಅನುಭಾವದ ಚಿಂತನೆಗಳು' ಅಂಕಣ 'ಮೈಸೂರು ಮಿತ್ರ'ದಲ್ಲಿ ಪ್ರತಿ ಶುಕ್ರವಾರ ಪ್ರಕಟವಾಗಲಿದೆ. –ಸಂ

ಹುಣಸೂರಲ್ಲಿ ಅದ್ದೂರಿ ಯಶಸ್ವಿ ಹನುಮಂತೋತ್ಸವ

● ಸೌಹಾರ್ದತೆ ಮೆರೆದ ಹನುಮನ ವಿಜೃಂಭಣೆಯ ಮೆರವಣಿಗೆ ● ಸಾವಿರಾರು ಮಂದಿ ಭಾಗಿ, ಎಲ್ಲೆಲ್ಲೂ ರಾರಾಜಿಸಿದ ಕೇಸರಿ ಧ್ವಜ, ಮೊಳಗಿದ ಘೋಷಣೆ ● ಮೆರಗು ನೀಡಿದ ಸ್ತಬ್ಧ ಚಿತ್ರಗಳು, ಜಾನಪದ ಕಲಾತಂಡಗಳು, ಶ್ರೀರಾಮ–ಸೀತಾಮಾತೆ, ದತ್ತಾತ್ರೇಯ ಮೂರ್ತಿಗಳು





ಹುಣಸೂರಲ್ಲಿ ಗುರುವಾರ ಹನುಮ ಜಯಂತಿ ಉತ್ಸವಕ್ಕೆ ಗಾವಡಗೆರೆ ಗುರುಲಿಂಗ ಜಂಗಮ ಮಠದ ನಟರಾಜ ಸ್ವಾಮೀಜಿ, ಮಾದಳ್ಳಿ ಉಕ್ಕಿನಕಂತೆ ಮಠದ ಸಾಂಬಸದಾಶಿವ ಸ್ವಾಮೀಜಿ ಸಮ್ಮುಖದಲ್ಲಿ ಚಾಲನೆ ನೀಡಲಾಯಿತು. ಬಲಚಿತ್ರದಲ್ಲಿ ಅದ್ದೂರಿ ಮೆರವಣಿಗೆ ಕಾಣಬಹುದು.

ಹುಣಸೂರು, ಡಿ.4(ಕೆಕೆ)– ಹನುಮ ಜಯಂತಿ ಅಂಗವಾಗಿ ಹುಣಸೂರಿನಲ್ಲಿ ಹನುಮಂತೋತ್ಸವ ಸಮಿತಿ ಮತ್ತು ಅಂಜನಾದ್ರಿ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ 31ನೇ ವರ್ಷದ ಹನುಮ ಜಯಂತಿಯ ಹನುಮಂತೋತ್ಸವ ಅದ್ದೂರಿ ಮೆರವಣಿಗೆ ಸಾವಿರಾರು ಹನುಮ ಭಕ್ತರ ಜಯ–ಘೋಷದೊಂದಿಗೆ ಯಶಸ್ವಿಯಾಗಿ ನೆರವೇರಿತು.

ನಗರದಾದ್ಯಂತ ಹನುಮನ ಬಾವುಟವನ್ನು ಹಾಕಲಾಗಿತ್ತು. ಕೇಸರಿ ಧ್ವಜಗಳು ರಾರಾಜಿಸಿದವು. ಈ ಬಾರಿಯ ಮೆರವಣಿಗೆಯಲ್ಲಿ ರಾಜಕಾರಣಿಗಳು ಹಾಗೂ ಗಣ್ಯರು ಉಪಸ್ಥಿತರಿದ್ದು ಯುವಕರ ಉತ್ಸಾಹವನ್ನು ಇಮ್ಮಡಿಗೊಳಿಸಿತ್ತು.

ನಗರದ ರಂಗನಾಥ ಬಡಾವಣೆಯಲ್ಲಿ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಜಿ.ಡಿ.ಹರೀಶ್ ಗೌಡ, ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್, ಉಪವಿಭಾಗಾಧಿಕಾರಿ ಮಂಜುನಾಥ್, ತಹಸೀಲ್ದಾರ್ ಮಂಜುನಾಥ್, ಗಾವಡಗೆರೆ ಗುರುಲಿಂಗ ಜಂಗಮ ಮಠದ ನಟರಾಜ ಸ್ವಾಮೀಜಿ, ಮಾದಳ್ಳಿ ಉಕ್ಕಿನಕಂತೆ ಮಠದ ■6ನೇ ಪುಟಕ್ಕೆ

> ಹನುಮಂತೋತ್ಸವ ಮೆರವಣಿಗೆಯಲ್ಲಿ ಭಾಗವಹಿಸಿ ಬಿಸಿಲಿನಲ್ಲಿ ದಣಿದು ಬಂದ ಹನುಮ ಭಕ್ತರಿಗೆ ಬಜಾರ್ ರಸ್ತೆಯಲ್ಲಿ ಮುಸ್ಲಿಂ ಬಾಂಧವರು ಮಜ್ಜಿಗೆ, ಬಾಳೆ ಹಣ್ಣು ಹಾಗೂ ಸಿಹಿ ತಿಂಡಿಯನ್ನು ನೀಡಿ ದಣಿವಾರಿಸಿ ಸಾಮರಸ್ಯ ಮತ್ತು ಸೌಹಾರ್ದತೆಯನ್ನು ಮೆರೆದರು. ಅದೇ ರೀತಿ ಬಜಾರ್ ರಸ್ತೆಯಲ್ಲಿ ಸಿರ್ವಿ ಸಮಾಜದವರು ಹನುಮ ಭಕ್ತರಿಗೆ ಲಘು ಉಪಹಾರ ಮತ್ತು ಸಿಹಿ ತಿಂಡಿಗಳನ್ನು ವಿತರಿಸಿದರು.

ನಕ್ಕರೆ ಅದೇ ಸ್ವರ್ಗ

ಹೆಂಡ್ತಿ : ಏನ್ರೀ ಕಲ್ಲು ಇದ್ದ ಹಾಗೇ ಇದ್ದೀರಾ?
ಗಂಡ : ಹೂಂ ಕಣೇ, ಅಕ್ಕೀಲಿ ಕಲ್ಲನ್ನು ಸೋಸಿ ಹಾಕಂದ್ರೆ ಹಾಗೇ ಬೇಯ್ಸಿ ಹಾಕ್ತೀಯಲ್ಲ. ಅದನ್ನು ತಿಂದು ಕಲ್ಲಿದ್ದಂಗೆ ಇದ್ದೀನಿ!

ಮೈಸೂರು ಮಿತ್ರ
ಶುಕ್ರವಾರ, 5 ಡಿಸೆಂಬರ್ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಶ್ರೇಷ್ಠ ಸಂಕಲ್ಪ ಹೊಂದಿರುವವನಿಗೆ ಪ್ರಕೃತಿಯೇ ನೂರಾರು ಮಂದಿಯನ್ನು ಜೊತೆ ಮಾಡಿಕೊಡುತ್ತದೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬರಲ್ಲ.

ನಿಮ್ಮ ಪತ್ರಗಳು

ಮೈಸೂರಿನಿಂದ–ಚಾ.ನಗರಕ್ಕೆ ಹೆಚ್ಚಿನ ರೈಲು ಸೌಲಭ್ಯ ಕಲ್ಪಿಸಿ

ಮಾನ್ಯರೆ,

ಮೈಸೂರಿನಿಂದ ಚಾಮರಾಜನಗರಕ್ಕೆ ಬೆಳಿಗ್ಗೆ 5 ಗಂಟೆಗೆ, 7.30ಕ್ಕೆ, 8.10ಕ್ಕೆ, 11.50ಕ್ಕೆ ಮತ್ತು ಮಧ್ಯಾಹ್ನ 3.50ಕ್ಕೆ, ಸಂಜೆ 6.45ಕ್ಕೆ ರೈಲು ಸಂಚರಿಸುತ್ತವೆ.

ಚಾಮರಾಜನಗರದಿಂದ ಮೈಸೂರಿಗೆ ಬೆಳಿಗ್ಗೆ 7.15 ಗಂಟೆಗೆ, 10.40ಕ್ಕೆ, ಮಧ್ಯಾಹ್ನ 3.30ಕ್ಕೆ, ಸಂಜೆ 5.30ಕ್ಕೆ, ರಾತ್ರಿ 8.50ಕ್ಕೆ, 9.30ಕ್ಕೆ ರೈಲು ಸಂಚರಿಸುತ್ತವೆ.

ಮೈಸೂರಿನಿಂದ ಚಾಮರಾಜನಗರಕ್ಕೆ ಚಾಮರಾಜನಗರದಿಂದ ಮೈಸೂರಿಗೆ ಪ್ರತಿನಿತ್ಯ ಕೇವಲ 6 ರೈಲುಗಳು ಸಂಚರಿಸುತ್ತವೆ.

ಈಗ ಸಂಚರಿಸುವ ರೈಲುಗಳ ಜೊತೆ ಮೈಸೂರಿನಿಂದ ಚಾಮರಾಜನಗರಕ್ಕೆ ಬೆಳಿಗ್ಗೆ 9.50ಕ್ಕೆ, ಮಧ್ಯಾಹ್ನ 1.50ಕ್ಕೆ, ಸಂಜೆ 5ಕ್ಕೆ (ಈ ರೈಲಿನಿಂದ ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಶಿಕ್ಷಕ–ಶಿಕ್ಷಕಿಯರಿಗೆ, ಕೂಲಿ ಕಾರ್ಮಿಕರಿಗೆ, ಕಾರ್ಖಾನೆ ಕಾರ್ಮಿಕರಿಗೆ, ಭಕ್ತಾದಿಗಳಿಗೆ, ಸಾರ್ವಜನಿಕರಿಗೆ ತುಂಬಾ ಅನುಕೂಲವಾಗುತ್ತದೆ)

ರಾತ್ರಿ 9.30ಕ್ಕೆ (ಈ ರೈಲಿನಿಂದ ಮೈಸೂರಿನಲ್ಲಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳು, ಮದುವೆ, ಆರತಕ್ಷತೆ ಮತ್ತು ಇನ್ನಿತರ ಕಾರ್ಯಕ್ರಮಗಳನ್ನು ಮುಗಿಸಿಕೊಂಡು ನಂಜನಗೂಡು, ಚಾಮರಾಜನಗರಕ್ಕೆ ತೆರಳಲು ತುಂಬಾ ಅನುಕೂಲವಾಗುತ್ತದೆ.)

ಚಾಮರಾಜನಗರದಿಂದ ಮೈಸೂರಿಗೆ ಬೆಳಗಿನ ಜಾವ 4.40ಕ್ಕೆ (ಈ ರೈಲು ಆಳವಡಿಸಿದರೆ ಚಾಮುಂಡಿ ಎಕ್ಸ್‌ಪ್ರೆಸ್ ರೈಲಿನಲ್ಲಿ ಚಾಮರಾಜನಗರ, ನಂಜನಗೂಡು ಜನತೆ ಬೆಂಗಳೂರಿಗೆ ತೆರಳಲು ತುಂಬಾ ಅನುಕೂಲವಾಗುತ್ತದೆ).

ಬೆಳಿಗ್ಗೆ 8.30ಕ್ಕೆ, ಮಧ್ಯಾಹ್ನ 12ಕ್ಕೆ ಮತ್ತು 2ಕ್ಕೆ, ರಾತ್ರಿ 7ಕ್ಕೆ ರೈಲು ಸಂಚಾರ ಆರಂಭಿಸಿದರೆ ಪ್ರಯಾಣಿಕರಿಗೆ ತುಂಬಾ ಅನುಕೂಲವಾಗುತ್ತದೆ. ಕೊಡಗು – ಮೈಸೂರು ಯುವ ಸಂಸದರಾದ ಯದುವೀರ ಕೃಷ್ಣ ದತ್ತ ಚಾಮರಾಜ ಒಡೆಯರ್ ಮತ್ತು ಚಾಮರಾಜನಗರ ಯುವ ಸಂಸದರಾದ ಸುನಿಲ್ ಬೋಸ್ ಅವರು ಇದರ ಬಗ್ಗೆ ಗಮನ ಹರಿಸಿ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಮತ್ತು ರೈಲ್ವೆ ರಾಜ್ಯ ಸಚಿವ ವಿ. ಸೋಮಣ್ಣ ಅವರ ಗಮನಕ್ಕೆ ತಂದು ಶೀಘ್ರವಾಗಿ ಮೈಸೂರಿನಿಂದ ಚಾಮರಾಜನಗಕ್ಕೆ, ಚಾಮರಾಜನಗರದಿಂದ ಮೈಸೂರಿಗೆ ಹೆಚ್ಚಿನ ರೈಲು ಸೇವೆ ಆರಂಭಿಸಲಿ.

–ಅಹಲ್ಯ. ಸಿ.ನಾ. ಚಂದ್ರ, ಜನತಾನಗರ, ಮೈಸೂರು

ಬಿಟ್ಟಿ ಸ್ಕೀಮ್‌ಗಳಿಗೆ ಜಯವಾಗಲಿ!

ಮಾನ್ಯರೆ,

ಭಾರತೀಯ ರಾಜಕಾರಣದಲ್ಲಿ 'ಗ್ಯಾರಂಟಿ ಯೋಜನೆ'ಗಳೆಂಬ ಹೊಸ ಅಧ್ಯಾಯ ಪ್ರಾರಂಭವಾಗಿದೆ. ಎರಡೂವರೆ ವರ್ಷಗಳ ಹಿಂದೆ ಕರ್ನಾಟಕ ರಾಜ್ಯದಲ್ಲಿ ವಿದ್ಯುಕ್ತವಾಗಿ ಆರಂಭಗೊಂಡ ಈ ಬಿಟ್ಟಿ ಸ್ಕೀಮ್‌ಗಳು ಬಿಹಾರ ಸೇರಿದಂತೆ ಇತರ ಕೆಲವು ರಾಜ್ಯಗಳಿಗೂ ವ್ಯಾಪಿಸಿಕೊಳ್ಳುತ್ತಿವೆ.

ಇತ್ತೀಚೆಗೆ ನಡೆದ ಬಿಹಾರ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಚುನಾವಣೆಗಿಂತ ಮುಂಚಿತವಾಗಿಯೇ ಪ್ರತಿಯೊರ್ವ ಮಹಿಳೆಯ ಬ್ಯಾಂಕ್ ಖಾತೆಗೂ ರೂ.10,000 ಗಳನ್ನು ಹಾಕುವ ಮೂಲಕ ನಿತೀಶ್ ಕುಮಾರ್ ನೇತೃತ್ವದ ಎನ್‌ಡಿಎ ಸರ್ಕಾರ ಭರ್ಜರಿ ಜಯ ಗಳಿಸಿತು. ಇನ್ನೂ ಕೆಲವು ರಾಷ್ಟ್ರಗಳಲ್ಲೂ ಈಗ ಬಿಟ್ಟಿ ಸ್ಕೀಮ್‌ಗಳು ಸದ್ದು ಮಾಡುತ್ತಿವೆ ಎನ್ನಲಾಗಿದೆ.

ಹಿಂದೆಲ್ಲಾ 'ಗುಜರಾತ್ ಮಾದರಿ' ಎನ್ನುತ್ತಿದ್ದ ಬಿಜೆಪಿ ನಾಯಕರಿಗೆ ಸವಾಲ್ ಎಸೆಯುವ ರೀತಿಯಲ್ಲಿ ಕಾಂಗ್ರೆಸ್ ನಾಯಕರು ಈಗ 'ಕರ್ನಾಟಕ ಮಾದರಿ' ಎಂದು ಕೂಗಲು ಪ್ರಾರಂಭಿಸಿದ್ದಾರೆ. ಈ ಬಿಟ್ಟಿ ಸ್ಕೀಮ್‌ಗಳ ವಿರುದ್ಧ ಯದ್ವಾ ತದ್ವಾ ಟೀಕಾಸ್ತ್ರಗಳನ್ನು ಪ್ರಯೋಗಿಸುತ್ತಿದ್ದ ದೊಡ್ಡ ದೊಡ್ಡ ಬಿಜೆಪಿ ನಾಯಕರೇ ಈಗ ಈ ಬಿಟ್ಟಿ ಸ್ಕೀಮ್‌ಗಳ ಹಿಂದೆ ಬಿದ್ದಿರುವುದು ಒಂದು ರೀತಿಯ ತಮಾಷೆಯಂತೆ ತೋರುತ್ತದೆ. ಇನ್ನು ಮುಂದೆ ರಾಜ್ಯದಲ್ಲಿ ಯಾವುದೇ ಪಕ್ಷ ಆಡಳಿತಕ್ಕೆ ಬಂದರೂ, ಈ ಬಿಟ್ಟಿ ಸ್ಕೀಮ್‌ಗಳ ಬುಡ ಅಲ್ಲಾಡಿಸುವುದು ಕಷ್ಟಕರವಾಗುತ್ತದೆ. ಹೀಗಾಗಿ ಎಲ್ಲಾ ರಾಜಕೀಯ ಪಕ್ಷಗಳು ಇನ್ನು ಮುಂದೆ ಬಿಟ್ಟಿ ಸ್ಕೀಮ್‌ಗಳಿಗೆ ಜಯಕಾರ ಹಾಕಲೇಬೇಕಾಗಬಹುದು.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು


'ಕುರ್ಚಿ ಆಟ'ದಿಂದಾಗಿ ಆಡಳಿತ ಯಂತ್ರ ಕುಂಠಿತ

ಮಾನ್ಯರೆ,

ಕಳೆದೊಂದು ವಾರದಿಂದ ರಾಜ್ಯ ರಾಜಕಾರಣದಲ್ಲಿ ನಡೆಯುತ್ತಿರುವ ಮುಖ್ಯಮಂತ್ರಿ ಕುರ್ಚಿ ಬದಲಾವಣೆ ಹಾಗೂ ಅಧಿಕಾರ ಹಂಚಿಕೆಯ ಗೊಂದಲಗಳು ರಾಜ್ಯದ ಪ್ರಜ್ಞಾವಂತ ನಾಗರಿಕರಲ್ಲಿ ತೀವ್ರ ಚಿಂತೆ ಮೂಡಿಸಿವೆ. ಒಂದೆಡೆ, ಡಿಸಿಎಂ ಡಿ.ಕೆ. ಶಿವಕುಮಾರ್ ಬಣವು ಮುಖ್ಯಮಂತ್ರಿ ಸ್ಥಾನಕ್ಕೆ ಪಟ್ಟು ಹಿಡಿದರೆ, ಮತ್ತೊಂದೆಡೆ ಹಾಲಿ ಸಿಎಂ ಸಿದ್ದರಾಮಯ್ಯನವರು ತಮ್ಮ ಪೂರ್ಣಾವಧಿಯ ಆಡಳಿತವನ್ನು ಮುಂದುವರಿಸಲು ಇಚ್ಛಿಸಿದ್ದಾರೆ. ಇದರ ನಡುವೆ ಡಾ. ಜಿ. ಪರಮೇಶ್ವರ್ ಮತ್ತು ಸತೀಶ್ ಜಾರಕಿಹೊಳಿಯವರಂತಹ ನಾಯಕರು ದಲಿತ ಮುಖ್ಯಮಂತ್ರಿ ವಿಷಯವನ್ನು ಮುನ್ನಲೆಗೆ ತಂದಿದ್ದಾರೆ. ಎಐಸಿಸಿ ಅಧ್ಯಕ್ಷರು ಹೈಕಮಾಂಡ್ ತೀರ್ಮಾನವೇ ಅಂತಿಮ ಎಂದು ವರಿಷ್ಠರ ಕಡೆಗೆ ಕೈತೋರಿಸಿರುವುದು ಪರಿಸ್ಥಿತಿಯನ್ನು ಮತ್ತಷ್ಟು ಗೊಂದಲಗೊಳಿಸಿದೆ.

ಯಾವುದೇ ಪಕ್ಷ ಅಧಿಕಾರಕ್ಕೆ ಬಂದರೂ, ಅವರು ಜನರ ಮುಂದಿಟ್ಟ ಪ್ರಣಾಳಿಕೆ ಮತ್ತು ಸಮಸ್ಯೆಗಳ ಮೇಲೆ ಹೆಚ್ಚು ಗಮನಹರಿಸುವುದು ಮುಖ್ಯ. ಪದೇ ಪದೆ ನಡೆಯುವ ಈ 'ಕುರ್ಚಿ ಆಟ'ದಿಂದಾಗಿ ಆಡಳಿತ ಯಂತ್ರ ಕುಂಠಿತವಾಗುವುದು, ನೀತಿ–ನಿಯಮಗಳು ವಿಳಂಬವಾಗುವುದು ಖಚಿತ. ಇಂತಹ ಸಂದರ್ಭದಲ್ಲಿ ನಾಯಕರು ಪಕ್ಷದ ಆಂತರಿಕ ಕಲಹವನ್ನು ದಿಲ್ಲಿಯವರೆಗೆ ಕೊಂಡೊಯ್ದು ಕಾಲಹರಣ ಮಾಡುವುದು ರಾಜ್ಯದ ಹಿತದೃಷ್ಟಿಯಿಂದ ಸರಿಯಲ್ಲ. ರಾಜ್ಯದ ಜನತೆ ಈ ನಾಯಕರುಗಳಿಂದ ಸ್ಪಷ್ಟ ಮತ್ತು ಸ್ಥಿರ ಆಡಳಿತವನ್ನು ಬಯಸುತ್ತಾರೆ. ರಾಜಕೀಯ ಪದಾಧಿಕಾರಿಗಳು ಆಂತರಿಕ ಸೂತ್ರಗಳ ಚರ್ಚೆಯನ್ನು ಬದಿಗಿಟ್ಟು, ರಾಜ್ಯದ ಆರ್ಥಿಕ ಪರಿಸ್ಥಿತಿ, ಬರಗಾಲ ಮತ್ತು ಅಭಿವೃದ್ಧಿಯ ವಿಷಯಗಳತ್ತ ಗಮನಹರಿಸಲಿ ಎಂದು ಆಶಿಸುತ್ತೇನೆ.


–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.



ಸದ್ಗುರು
ಸಂಸ್ಥಾಪಕರು,
ಇಶಾ ಫೌಂಡೇಷನ್

ಅನುಭಾವದ ಚಿಂತನೆಗಳು

ಓಡಾಡು... ಆಟವಾಡು...



> "ಒಂದು ಚೆಂಡನ್ನು ಎತ್ತಿ ಎಸೆಯ ಬೇಕಾದರೂ ಅದರಲ್ಲಿ ಸಂಪೂರ್ಣವಾದ ಆಸಕ್ತಿ ಇಲ್ಲದಿದ್ದರೆ ಅದು ಸುಲಭವಾಗುವುದಿಲ್ಲ. ನಿಮ್ಮ ಗುರಿಯನ್ನು ಮುಟ್ಟಲು ಅದಕ್ಕೆ ಸರಿಯಾದ ವೇಗ ಅಗತ್ಯ. ಹಾಗೆ ಅದು ನಿಮ್ಮ ಇಷ್ಟದಂತೆ ಮುಟ್ಟಬೇಕಾದರೆ ಅದನ್ನು ನೀವು ಎಸೆಯುವುದರ ಹಿಂದೆ ಒಂದು ವಿಜ್ಞಾನ ಅಡಗಿದೆ.

ದೇಹಾರೋಗ್ಯಕ್ಕೆ ಮುಖ್ಯವಾದುದು ಆಟ. ನನ್ನ ಶಾಲಾದಿನಗಳಲ್ಲಿ ನಾನು ಆಡದ ಆಟಗಳೇ ಇಲ್ಲವೆನ್ನಬಹುದು. ಹಗ್ಗ ಹಿಡಿದು ಮೇಲಕ್ಕೆ ಹತ್ತುವುದು, ದೇಹವನ್ನು ಬಗ್ಗಿಸುವಂತಹ ಜಿಮ್ನಾಸ್ಟಿಕ್ಸ್, ಹೊಡೆ ದಾಟಗಳು, ಕಬಡ್ಡಿ, ಬ್ಯಾಡ್ಮಿಂಟನ್– ಯಾವುದನ್ನೂ ಬಿಡಲಿಲ್ಲ.

ಚಿಕ್ಕವನಾಗಿದ್ದಾಗ ಕ್ರಿಕೆಟ್ ಯಾರೇ ಆಡುತ್ತಿರಲಿ ಅಲ್ಲಿಗೆ ಹೋಗಿ ಸೇರಿಕೊಳ್ಳುತ್ತಿದ್ದೆ. ಅವರು ನನಗೆ ಬ್ಯಾಟ್ ಮಾಡಲು ಬಿಡುತ್ತಿರಲಿಲ್ಲ. ಆದರೆ, ಫೀಲ್ಡ್ ಮಾಡುವಷ್ಟರಲ್ಲೇ ಸಂತೋಷ ಪಡುತ್ತಿದ್ದೆ. ಈಗಲೂ, ಮಕ್ಕಳು ಆಟವಾಡುತ್ತಿದ್ದರೆ ನಾನಾಗಿಯೇ ಅವರೊಂದಿಗೆ ಸೇರಿಕೊಳ್ಳುತ್ತೇನೆ. ಕಾಲೇಜಿನ ಹಾಕಿ ಟೀಮಿನಲ್ಲಿ ಅವಕಾಶ ಪಡೆದುಕೊಂಡೆ. ಆ ವಯಸ್ಸಿನಲ್ಲಿ ಮೋಟಾರ್ ಸೈಕಲ್‌ಗಳನ್ನು ಓಡಿಸುವುದರಲ್ಲಿ ಮತ್ತು ಹಾರಾಟದಲ್ಲಿದ್ದಷ್ಟು ಆಸಕ್ತಿ ಬೇರೆ ಆಟಗಳಿಗಿಂತಲೂ ಹೆಚ್ಚಾಗಿತ್ತು.

ನನಗೆ ಆಗ ಇಪ್ಪತ್ತೆರಡು ವರ್ಷ ವಯಸ್ಸಿರಬಹುದು. ಒಮ್ಮೆ ನೀಲಗಿರಿ ಪರ್ವತದಿಂದ ಗ್ಲೈಡರಿನಲ್ಲಿ ಹಾರಾಡಿದೆ. ಎಲ್ಲಿಯೋ ಬಹಳ ದೂರದಲ್ಲಿ ನೆಲಕ್ಕೆ ಇಳಿದೆ. ಸೂರ್ಯನನ್ನು ಹಿಂಬಾಲಿಸಿ ದಿಕ್ಕನ್ನು ಗುರುತಿಸಿ ಅಲ್ಲಿಂದ ನಡೆದು ಬಂದೆ. ರಾತ್ರಿ–ಹಗಲು ಕಾಡುಗಳಲ್ಲಿ ಕಿಲೋಮೀಟರ್‌ಗಳು ಲೆಕ್ಕವಿಲ್ಲದೆ ನಡೆದಾಡಿದೆ. ಕೈಯ್ಯಲ್ಲಿದ್ದ ಒಂದೇ ಒಂದು ಸ್ಯಾಂಡ್‌ವಿಚ್ ತಿಂದೆ. ಹಸಿವು ನೀಗಲಿಲ್ಲ. ಅಲ್ಲಲ್ಲಿ ಒಂದೆರಡು ಹಳ್ಳಿಗಳನ್ನು ಸಮೀಪಿಸಿದೆ. ಅಲ್ಲಿದ್ದವರು ತಮಿಳು ಬಿಟ್ಟು ಬೇರೇನನ್ನೂ ಮಾತನಾಡಲಿಲ್ಲ. ನನಗಾದರೋ ಆಗ ತಮಿಳು ಗೊತ್ತಿರಲಿಲ್ಲ.

ಹೇಗೋ ಒಂದು ಟೀ ಅಂಗಡಿಯನ್ನು ಕಂಡುಹಿಡಿದೆ. ಅಲ್ಲಿ ಬಿಸಿಬಿಸಿಯಾಗಿ ಇಡ್ಲಿ ತಯಾರಾಗಿತ್ತು. ನನಗಿದ್ದ ಹಸಿವೆಯನ್ನು ನೀಗಲು ಸುಮಾರು ಇಪ್ಪತ್ತೈದು ಇಡ್ಲಿಗಳಾದರೂ ಬೇಕಾಗುತ್ತಿತ್ತು. ನನ್ನ ಕೈಲಿರುವುದನ್ನು ನೋಡಿಕೊಂಡೆ. ನನ್ನನ್ನು ಕಂಡು ಹಿಡಿಯಲು ನಮ್ಮ ಗುಂಪಿನವರಿಗೆ ಅದೆಷ್ಟು ದಿನಗಳು ಬೇಕಾಗಬಹುದೆಂಬುದು ತಿಳಿಯದು. ಅಂತಹ ಪರಿಸ್ಥಿತಿಯಲ್ಲಿ ಇರುವ ಎಲ್ಲ ಹಣವನ್ನು ಖರ್ಚು ಮಾಡಿಬಿಟ್ಟರೆ ಹೇಗೆ ಎಂದು ಯೋಚಿಸಿ, ಒಂದೂವರೆ ರೂಪಾಯಿ ಕೊಟ್ಟು ಎರಡೇ ಎರಡು ಇಡ್ಲಿಗಳನ್ನು ಖರೀದಿಸಿ ಅವನ್ನು ತಿಂದೆ. ನನ್ನ ಗುಂಪಿನವರು ಎರಡೂವರೆ ದಿನಗಳ ನಂತರ ನನ್ನನ್ನು ಕಂಡುಹಿಡಿದರು.

ಇಷ್ಟಾದರೂ ನನ್ನ ಹಾರಾಡುವ ಆಸೆ ತೀರಲಿಲ್ಲ!

ಸೊರಗಿ ಹೋದ ಹೃದಯವುಳ್ಳ ಮತ್ತು ಕಠಿಣ ಮನಸ್ಸಿನ ಸೆರೆಯಾಳುಗಳಲ್ಲಿಯೂ ಆಟದ ಬಗೆಗೆ ಇರುವ ಆಸಕ್ತಿಯನ್ನು ಕಣ್ಣಾರೆ ಕಂಡವನು ನಾನು.

ಮೊದಲನೆಯ ಬಾರಿಗೆ ಖೈದಿಗಳನ್ನು ಭೇಟಿಮಾಡಲು ನನಗೆ ಅನುಮತಿ ದೊರೆತಿತ್ತು. ಸೆರೆಮನೆಯೊಳಗೆ ಕಾಲಿಡುತ್ತಿದ್ದಂತೆಯೇ ಅಲ್ಲಿನ ಗಾಳಿಯಲ್ಲಿಯೇ ಒಂದು ಬಗೆಯ ತೀರಲಾರದ ವೇದನೆ ಹೆಪ್ಪುಗಟ್ಟಿರುವಂತೆ ನನಗೆ ಭಾಸವಾಯಿತು. ಸುಮಾರು ಇನ್ನೂರು ಮಂದಿ ಖೈದಿಗಳನ್ನು ಆಟದ ಮೈದಾನಕ್ಕೆ ಬರುವಂತೆ ಹೇಳಿದೆ.

ನಿಮಗೆ ಯೋಗ ಹೇಳಿಕೊಡಲು ಬರಲಿಲ್ಲ, ನಿಮ್ಮೊಂದಿಗೆ ಚೆಂಡಾಟವನ್ನು ಆಡಲು ಬಂದಿದ್ದೇನೆ ಎಂದು ಹೇಳಿದೆ. ಅವರ ಮುಖದಲ್ಲಿ ಆದ ಬದಲಾವಣೆಯನ್ನು ಕಂಡುಕೊಂಡೆ. ಆಟ ಪ್ರಾರಂಭವಾಯಿತು. ಆಟದಲ್ಲಿ ಪಾಲ್ಗೊಳ್ಳಲು ಹಿಂದೇಟು ಹಾಕಿದವರು ಸಹ ಹತ್ತು ಹದಿನೈದು ನಿಮಿಷಗಳ ನಂತರ ಆಟದಲ್ಲಿ ನಿರತರಾಗಿ, ತಲ್ಲೀನರಾಗಿ, ತಮ್ಮನ್ನು ತಾವೇ ಮರೆತರು. ಆಟದಲ್ಲಿ ತನ್ಮಯರಾದ ಅವರು ಕಿರುಚಾಡುತ್ತಾ, ಕುಪ್ಪಳಿಸುತ್ತಾ ಮಕ್ಕಳಂತೆ ಆಡಿ ಕುಣಿದರು. ಆಟ ಮುಗಿದು ನಾನು ಹೊರಡಲು ಸಿದ್ಧವಾದಾಗ ಹೋಗಬೇಡಿ ಎಂದು ಕೆಲವರು ನನ್ನ ಕೈ ಹಿಡಿದುಕೊಂಡು ಕಣ್ಣೀರು ಸುರಿಸಿದರು. ಆಟದ ಮಹಿಮೆಯೇ ಅಂತಹುದು.

ಶಂಕರನ್ ಪಿಳ್ಳೆ ಒಮ್ಮೆ ತನ್ನ ಸ್ನೇಹಿತನ ಮನೆಗೆ ಹೋದರು. ಅಲ್ಲಿ ಅವರ ಸ್ನೇಹಿತ ತನ್ನ ನಾಯಿಯೊಂದಿಗೆ ಕುಳಿತುಕೊಂಡು ಚೆಸ್ ಆಡುತ್ತಿದ್ದರು.

ಶಂಕರನ್ ಪಿಳ್ಳೆ ಆಶ್ಚರ್ಯದಿಂದ, ಅರೆ, ಇಂತಹ ಬುದ್ಧಿವಂತ ನಾಯಿಯನ್ನು ನಾನು ಇದುವರೆಗೆ ನೋಡಿಯೇ ಇಲ್ಲ ಎಂದರು. ನೀನು ಎಣಿಸಿದಂತೆ ಇದೇನು ಅಂತಹ ಬುದ್ಧಿಶಾಲಿಯಲ್ಲ. ಹತ್ತು ಸಲ ಆಡಿದ ಆಟದಲ್ಲಿ ನನ್ನೊಂದಿಗೆ ಅದು ಮೂರು ಬಾರಿ ಸೋತು ಹೋಯಿತು ಎಂದರು ಆ ಸ್ನೇಹಿತರು.

ತಮಾಷೆಯಾಗಿದೆ ಈ ಕಥೆ. ಆದರೆ ಆಟದಲ್ಲಿ ಕೆಲವು ಸಂದರ್ಭಗಳಲ್ಲಿ ಸೋತರೂ ಮತ್ತೆ ಆಡಬೇಕೆಂಬ ಉತ್ಸಾಹ ಅಗತ್ಯವೆಂಬುದನ್ನು ಆ ನಾಯಿಯಿಂದ ಅಥವಾ ಆ ಸ್ನೇಹಿತರಿಂದ ಕಲಿಯಬಹುದು.

ಆಟದಲ್ಲಿ ಇದೇ ಮುಖ್ಯವಾದ ಅಂಶ. ಗೆಲ್ಲಬೇಕೆಂಬುದು ಗುರಿಯಾದರೂ, ಸೋಲನ್ನು ತೆರೆದ ಮನಸ್ಸಿನಿಂದ ಸ್ವೀಕರಿಸಬೇಕೆಂಬ ಮಾನಸಿಕ ಪ್ರಬುದ್ಧತೆ, ಪಕ್ವತೆ ಇದ್ದರೆ ಮಾತ್ರ ಆಟ ಚೆನ್ನಾಗಿರುತ್ತದೆ. ಆಟವಾಡುವಾಗ ಸಂಪೂರ್ಣ ಗಮನ ಆಟದಲ್ಲಿರಬೇಕೇ ಹೊರತು ಅದರ ಫಲಿತಾಂಶದಲ್ಲಿರಬಾರದು.

ನೀವು ಯಾವುದೇ ಕಾರ್ಯದಲ್ಲಿದ್ದರೂ, ಸಂಪೂರ್ಣವಾಗಿ ಅದರಲ್ಲಿ ಮುಳುಗದೆ, ತೀವ್ರವಾಗಿ ಅದರಲ್ಲಿ ತಲ್ಲೀನರಾಗದೆ ಇದ್ದಲ್ಲಿ, ಅದು ನಿಮಗೆ ಪೂರ್ಣ ಸಂತೃಪ್ತಿಯನ್ನು ತಂದುಕೊಡುವುದಿಲ್ಲ. ಕೆಲಸದ ಸ್ಥಳದಲ್ಲಿ ಮಾತ್ರವಲ್ಲ, ನಿಮ್ಮ ತಂದೆ ತಾಯಂದಿರಲ್ಲಿ, ಹೆಂಡತಿಯೊಂದಿಗೆ, ಗಂಡನೊಂದಿಗೆ, ಮಕ್ಕಳೊಂದಿಗೆ ಸಂಪೂರ್ಣವಾಗಿ ಅರ್ಪಣೆ ಮಾಡಿಕೊಳ್ಳದಿದ್ದರೆ, ಜೀವನವೆಂಬುದು ನಿಮ್ಮ ಪಾಲಿಗೆ ಒಂದು ಅರ್ಥಹೀನವಾದ ಹೊರೆಯಾಗುತ್ತದೆ. ನೀವು ಅದರಲ್ಲಿ ಸಂಪೂರ್ಣವಾಗಿ ತಲ್ಲೀನರಾದರೆ ಆಗ ಅದು ಸ್ವರ್ಗ, ಹಾಗಿಲ್ಲದಿದ್ದರೆ ಅದು ನರಕ.

ಸಂಪೂರ್ಣ ತಲ್ಲೀನತೆಯಿಲ್ಲದೆ ನೀವು ಅನುಭವಿಸಿದ ಯಾವುದಾದರೂ ಒಂದು ಅಂಶವಿದೆಯೆ ಹೇಳಿ. ನಿಮ್ಮ ದೇಹ ಹಾಗೂ ಮನಸ್ಸನ್ನು ಪೂರ್ತಿಯಾಗಿ ತಲ್ಲೀನಗೊಳಿಸದೆ, ನೀವು ಪಡೆದ ಗೆಲುವು ಯಾವುದಾದರೂ ಇದೆಯೆ ಎಂಬುದನ್ನು ಯೋಚಿಸಿ.

ನೀವು ಜೀವನದ ಯಾವುದೇ ಹಂತದಲ್ಲಿದ್ದರೂ, ನಿಮ್ಮ ಗೆಲುವನ್ನು ಬಹುಮಟ್ಟಿಗೆ ತೀರ್ಮಾನಿಸುವ ಮುಖ್ಯವಾದ ವಿಷಯ ಯಾವುದು? ನಿಮ್ಮ ದೇಹ ಮತ್ತು ಮನಸ್ಸನ್ನು ಯಾವ ಪ್ರಮಾಣದಲ್ಲಿ ನಿಮ್ಮ ಅಧೀನದಲ್ಲಿರಿಸಿಕೊಳ್ಳಲು ಸಾಧ್ಯವೆಂಬುದು ಬಹಳ ಅಗತ್ಯವಿರುವ ಮುಖ್ಯಾಂಶ. ಆಟವೂ ಹಾಗೆಯೇ.

ಒಬ್ಬ ನಾಯಕನಿಗೆ ಮುಖ್ಯವಾಗಿರಬೇಕಾದ ಗುಣಗಳು ಯಾವುವು? ಕೆಲಸದಲ್ಲಿ ಸಂಪೂರ್ಣವಾಗಿ ತಲ್ಲೀನನಾಗಿರಬೇಕು. ತನ್ನ ಭಾಗದ ಕೆಲಸವನ್ನಾದರೂ ಪರಿಪೂರ್ಣವಾಗಿ ಮಾಡುವಂತಹ ಮನಸ್ಸುಳ್ಳವನಾಗಿರಬೇಕು. ಸಾಧನೆ ಮಾಡಬೇಕೆಂಬ ಛಲವಿರುವುದಾದರೂ, ಸೋಲನ್ನು ಕಂಡಾಗ ಹಿಂದೆಗೆಯದೆ, ಮತ್ತೊಂದು ಅವಕಾಶ ದೊರೆಯಿತೆಂದು ಭಾವಿಸಿ, ಅದನ್ನು ಸಂತೋಷದಿಂದ ಸ್ವೀಕರಿಸುವಂತಹ ಮನಸ್ಸಿರಬೇಕು.

ಜೀವನದ ಬಹಳ ಮುಖ್ಯವಾದ ಅಂಶ ಅದು. ನಿಮ್ಮ ಅಂತರಂಗ ಸಂಪೂರ್ಣವಾಗಿ ನೆಮ್ಮದಿಯನ್ನು ಪಡೆದಿದ್ದರೆ, ಗೆಲುವಾಗಲಿ, ಸೋಲಾಗಲಿ ಪ್ರತಿಯೊಂದು ಅಂಶವೂ ನಿಮಗೆ ಸುಲಭವಾಗಿ ತೋರುತ್ತದೆ.

ಇಡೀ ಜೀವನ ಹೋರಾಟವಿಲ್ಲದೆ ಸುಲಭವಾಗಿ ನಡೆಯುತ್ತದೆ. ಅಂತರಂಗ ನೆಮ್ಮದಿಯಿಲ್ಲದಿದ್ದಾಗ ಪ್ರತಿಯೊಂದೂ ಕಷ್ಟಕರವಾಗಿ ಭಾಸವಾಗುತ್ತದೆ. ಸಣ್ಣ ಪುಟ್ಟ ವಿಷಯಗಳು ಸಹ ಸಮಸ್ಯೆಯಾಗಿ ಕಂಡುಬರುತ್ತವೆ. ಇವೆಲ್ಲವೂ ಆಟದಲ್ಲಿ ಕೂಡ ಕಂಡುಬರುವ ಅಂಶಗಳು.

ಈಶ ನಡೆಸಿದ ಗ್ರಾಮೋತ್ಸವದಲ್ಲಿ, ಇಂತಹ ಅಂಶಗಳನ್ನು ಆಟಗಳಲ್ಲಿ ಕಣ್ಣಾರೆ ನೋಡಲು ಸಾಧ್ಯವಾಯಿತು. ಗ್ರಾಮೋತ್ಸವದಲ್ಲಿ ಸುಮಾರು ಮುನ್ನೂರು ಗುಂಪುಗಳು ಆಟಗಳಲ್ಲಿ ಭಾಗವಹಿಸಿದುವು. ಮೂರು ಲಕ್ಷಕ್ಕಿಂತ ಹೆಚ್ಚಿನ ಸಂಖ್ಯೆಯ ಜನರು ಇದನ್ನು ವೀಕ್ಷಿಸಿದರು.

ಹಳ್ಳಿಗಳಲ್ಲಿ ಜನರ ಮುಂದೆ ಬಂದು ನಿಲ್ಲಲು ಹಿಂದೇಟು ಹಾಕುತ್ತಿದ್ದ ಹಲವರು, ಆಟಗಳಲ್ಲಿ ಪಾಲ್ಗೊಂಡು ತಮ್ಮ ಗುಂಪನ್ನು ಮುನ್ನಡೆಸಲು ತಾವಾಗಿಯೇ ಮುಂದೆ ಬಂದರು. ಅವರಲ್ಲಿ ಹುದುಗಿಕೊಂಡಿದ್ದ ಸಾಮರ್ಥ್ಯ ಹೀಗೆ ಹೊರಬಂದಿತು.

ಆಟದಲ್ಲಿ ನಿಮ್ಮೊಂದಿಗೆ ಬೇರೆಯವರನ್ನು ಸೇರಿಸಿಕೊಂಡು ಆತ್ಮೀಯತೆಯನ್ನು ಬೆಳೆಸಿಕೊಳ್ಳುವಂತಹ ಸಹಜ ಸ್ವಭಾವವಿರುತ್ತದೆ. ನಿಮ್ಮ ಗುಂಪಿಗೆ ಸೇರಿದವರು ಎಂಬ ಭಾವನೆಯೊಂದಿಗೆ –ಅಕ್ಕಪಕ್ಕದವರನ್ನು–ನಿಮ್ಮ ಇಷ್ಟಾನಿಷ್ಟಗಳನ್ನು ತೊರೆದು ಸೇರಿಸಿಕೊಳ್ಳುತ್ತೀರಿ. ಎಲ್ಲರೂ ತಮ್ಮ ಭಿನ್ನಾಭಿಪ್ರಾಯಗಳನ್ನು ಮರೆತು ಒಂದೇ ದೃಷ್ಟಿಯನ್ನಿರಿಸಿಕೊಂಡು ಒಮ್ಮನಸ್ಸಿನಲ್ಲಿ ಕ್ರಿಯಾಶೀಲರಾಗುತ್ತೀರಿ. ಬೇರೆಯವರನ್ನು ನಿಮ್ಮೊಂದಿಗೆ ಸೇರಿಸಿಕೊಳ್ಳುವ ಗುಣ ಒಂದು ಒಳ್ಳೆಯ ಸಮುದಾಯದ ನಿರ್ಮಾಣಕ್ಕೆ ಅಡಿಪಾಯವಲ್ಲವೆ?

ಆಟದ ಪ್ರಮುಖ ಮಹತ್ವವೇನು? ಅದರಲ್ಲಿ ಅರೆಬರೆ ಮನಸ್ಸಿನಲ್ಲಿ ಪಾಲ್ಗೊಳ್ಳಲಾಗದು. ದೇಹ ಹಾಗೂ ಮನಸ್ಸು ಎರಡನ್ನೂ ಒಂದೇ ಸಮಯದಲ್ಲಿ ಪಾಲ್ಗೊಳ್ಳುವಂತೆ ಮಾಡಿ ಆ ಮೂಲಕ ಪ್ರಯೋಜನ ಪಡೆಯುವುದಾಗಿದೆ.

ಮೈದಾನದಲ್ಲಿ ಆಟವಾಡುವಂತಹ ಯಾವುದೇ ಆಟವಾದರೂ ನಿಮ್ಮ ದೇಹ, ಮನಸ್ಸು ಪೂರ್ತಿಯಾಗಿ ಅದರಲ್ಲಿ ಬೇರೂರಿದರೆ ಮಾತ್ರ ಸರಿಯಾದ ಆಟವಾಗುತ್ತದೆ. ಹಾಗಲ್ಲದಿದ್ದರೆ ಅದು ನರಕವಾಗುತ್ತದೆ.

ಒಂದು ಚೆಂಡನ್ನು ಎತ್ತಿ ಎಸೆಯಬೇಕಾದರೂ ಅದರಲ್ಲಿ ಸಂಪೂರ್ಣವಾದ ಆಸಕ್ತಿ ಇಲ್ಲದಿದ್ದರೆ ಅದು ಸುಲಭವಾಗುವುದಿಲ್ಲ. ನಿಮ್ಮ ಗುರಿಯನ್ನು ಮುಟ್ಟಲು ಅದಕ್ಕೆ ಸರಿಯಾದ ವೇಗ ಅಗತ್ಯ. ಹಾಗೆ ಅದು ನಿಮ್ಮ ಇಷ್ಟದಂತೆ ಮುಟ್ಟಬೇಕಾದರೆ ಅದನ್ನು ನೀವು ಎಸೆಯುವುದರ ಹಿಂದೆ ಒಂದು ವಿಜ್ಞಾನ ಅಡಗಿದೆ.

ಜೀವನವೂ ಒಂದು ವಿಜ್ಞಾನದಂತೆಯೇ. ವೇಗ ಹಾಗೂ ತಲ್ಲೀನತೆಯು ಒಂದು ಜೀವನವನ್ನು ಪರಿಪೂರ್ಣಗೊಳಿಸಲು ಅಗತ್ಯ. ಅರೆಬರೆಯಾಗಿ ಜೀವಿಸಿದರೆ ಅದೊಂದು ಚಿತ್ರಹಿಂಸೆ.

ದೇಹ ಹಾಗೂ ಮನಸ್ಸನ್ನು ಹರಿತವಾಗಿರಿಸಿಕೊಳ್ಳಲು ಹಾಗೂ ಕ್ರಿಯೆಯಲ್ಲಿ ಪೂರ್ಣವಾಗಿ ಮನಸ್ಸನ್ನು ನೆಲೆಗೊಳಿಸಲು ಅದು ಕಲಿಸುವುದರಿಂದ ಆಟ ನನ್ನನ್ನು ಬಹುವಾಗಿ ಆಕರ್ಷಿಸುತ್ತದೆ.

(ಸದ್ಗುರು ಅವರು ಯೋಗಿ, ದಾರ್ಶನಿಕ, ಆಧ್ಯಾತ್ಮಿಕ ನಾಯಕ. isha.sadhguru.org/in/kn). ಸದ್ಗುರುಗಳ ಇತರ ಕನ್ನಡ ಪುಸ್ತಕಗಳು/ವಿವರಗಳಿಗೆ ಸಂಪರ್ಕಿಸಿ: Kannadapublications@ishafoundation.org)

ಮಹಾರಾಜರ ಕಾಲದಲ್ಲಿ ನಿರ್ಮಾಣವಾದ ಕೆ.ಆರ್. ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸಲು ಪುಣ್ಯ ಮಾಡಿದ್ದೆವು

● ಮೈಸೂರು ಮೆಡಿಕಲ್ ಕಾಲೇಜು ನಿರ್ದೇಶಕಿ ಡಾ.ದಾಕ್ಷಾಯಿಣಿ ಹೆಮ್ಮೆಯ ನುಡಿ ● ಶುಶ್ರೂಷಾಧಿಕಾರಿಗಳ ಕ್ಯಾಲೆಂಡರ್ ಬಿಡುಗಡೆ ● ಆಸ್ಪತ್ರೆಯಲ್ಲಿ ನರ್ಸ್‌ಗಳ ಸೇವೆ ಬಗ್ಗೆ ಪ್ರಶಂಸೆ



ಕರ್ನಾಟಕ ರಾಜ್ಯ ಸರ್ಕಾರಿ ವೈದ್ಯಕೀಯ ಶಿಕ್ಷಣ ಇಲಾಖಾ ಶುಶ್ರೂಷಾಧಿಕಾರಿಗಳ ಸಂಘ ಪ್ರಕಟಿಸಿರುವ ನೂತನ ವರ್ಷದ ಕ್ಯಾಲೆಂಡರ್ ಅನ್ನು ಮೈಸೂರು ಮೆಡಿಕಲ್ ಕಾಲೇಜಿನ ಡೀನ್ ಮತ್ತು ನಿರ್ದೇಶಕಿ ಡಾ.ಕೆ.ಆರ್.ದಾಕ್ಷಾಯಿಣಿ ಬಿಡುಗಡೆ ಮಾಡಿದರು.

ಮೈಸೂರು,ಡಿ.4(ಎಂಟಿವೈ)– ಮಹಾರಾಜರ ಕಾಲದಲ್ಲಿ ನಿರ್ಮಾಣವಾಗಿರುವ ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ವಿವಿಧ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿರುವವರು ಪುಣ್ಯವಂತರಾಗಿದ್ದು, ಮುಂದಿನ ದಿನಗಳಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಿ ಇನ್ನಷ್ಟು ಉತ್ತಮ ಕೆಲಸ ಮಾಡುವಂತೆ ಮೈಸೂರು ಮೆಡಿಕಲ್ ಕಾಲೇಜಿನ ಡೀನ್ ಮತ್ತು ನಿರ್ದೇಶಕರಾದ ಡಾ.ಕೆ.ಆರ್. ದಾಕ್ಷಾಯಿಣಿ ಸಲಹೆ ನೀಡಿದ್ದಾರೆ.

ಮೈಸೂರಿನ ಜೆ.ಕೆ.ಮೈದಾನದಲ್ಲಿರುವ ಮೈಸೂರು ಮೆಡಿಕಲ್ ಕಾಲೇಜಿನ ಅಮೃತೋತ್ಸವ ಭವನದ ಕಿರು ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ವೈದ್ಯಕೀಯ ಶಿಕ್ಷಣ ಇಲಾಖಾ ಶುಶ್ರೂಷಾಧಿಕಾರಿಗಳ ಸಂಘದ ವತಿಯಿಂದ ಆಯೋಜಿಸಿದ್ದ 3ನೇ ವರ್ಷದ ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮದಲ್ಲಿ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಮಾಡಿ ಮಾತನಾಡಿದ ಅವರು, ಮಹಾರಾಜರ ಕಾಲದಲ್ಲಿ ಮೈಸೂರಲ್ಲಿ ನಿರ್ಮಿಸಲಾದ ಕೆ.ಆರ್. ಆಸ್ಪತ್ರೆ, ಚೆಲುವಾಂಬ ಆಸ್ಪತ್ರೆ, ಪಿಕೆಟಿಬಿ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿರುವ ನಾವು ಪುಣ್ಯವಂತರಾಗಿದ್ದೇವೆ. ಶತಮಾನಕ್ಕೂ ಹಳೆಯದಾದ ಈ ಆಸ್ಪತ್ರೆಗಳನ್ನು ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ ಸೇರಿದಂತೆ ಸುತ್ತಮುತ್ತಲಿನ ಜಿಲ್ಲೆಗಳ ಜನರು ಅವಲಂಬಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಆಸ್ಪತ್ರೆಗೆ ಬರುವ ರೋಗಿಗಳಿಗೆ ನಗುಮುಖದೊಂದಿಗೆ ಗುಣಮಟ್ಟದ ಸೇವೆ ಒದಗಿಸುವ ಮೂಲಕ ಮಹಾರಾಜರು ಕಂಡಿದ್ದ ವಿಷನ್ ಸಾಕಾರಗೊಳಿಸಬೇಕು ಎಂದು ಸಲಹೆ ನೀಡಿದರು.

ಯಾವುದೇ ಸಂಸ್ಥೆ ಉತ್ತಮವಾಗಿ ಕಾರ್ಯನಿರ್ವಹಿಸಬೇಕಾದರೆ ಆ ಸಂಸ್ಥೆಯಲ್ಲಿನ ಟೀಮ್ ವರ್ಕ್ ಮುಖ್ಯ. ಆಸ್ಪತ್ರೆಯಲ್ಲಿ ವೈದ್ಯರೊಂದಿಗೆ ನರ್ಸ್‌ಗಳು ಜೊತೆ ಜೊತೆಯಾಗಿ ಹೋಗಬೇಕಾಗುತ್ತದೆ. ಇಪ್ಪತ್ತು ಬೆಡ್‌ನಿಂದ ಆರಂಭವಾದ ಆಸ್ಪತ್ರೆ ಈಗ ಒಟ್ಟು ನಾಲ್ಕು ಆಸ್ಪತ್ರೆಗಳಿಂದ 2500 ಬೆಡ್ ಹೊಂದಿದೆ. ಆಸ್ಪತ್ರೆಯ ಎಲ್ಲಾ ವರ್ಗದ ಸಿಬ್ಬಂದಿ ಒಳ್ಳೆಯ ಕೆಲಸ ಮಾಡಿದರೂ, ಕೆಲವೊಮ್ಮೆ ಸಣ್ಣಪುಟ್ಟ ತಪ್ಪುಗಳು ದೊಡ್ಡದಾಗಿ ಕಾಣುತ್ತವೆ. ಶೇ.95ರಷ್ಟು ಒಳ್ಳೆಯ ಕೆಲಸವೇ ಆಗುತ್ತಿವೆ. ಆದರೆ, ಆಸ್ಪತ್ರೆಯ ಸ್ವಚ್ಛತೆಗೆ ಸಂಬಂಧಿಸಿದಂತೆ ದೂರು ಬರುತ್ತಿವೆ. ಈ ಹಿನ್ನೆಲೆಯಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಬೇಕು. ಪರಸ್ಪರ ಸಹಕಾರದಿಂದ ಕೆಲಸ ಮಾಡುವ ಮೂಲಕ ಆಸ್ಪತ್ರೆಯನ್ನು ಇನ್ನಷ್ಟು ಏಳಿಗೆಗೆ ಎಲ್ಲರೂ ಶ್ರಮಿಸಬೇಕು ಎಂದು ತಿಳಿಸಿದರು.

ಒತ್ತಡದಿಂದ ಮುಕ್ತ : ಕೆ.ಆರ್.ಆಸ್ಪತ್ರೆ ವೈದ್ಯಕೀಯ ಅಧೀಕ್ಷಕಿ ಡಾ.ಹೆಚ್.ಪಿ. ಶೋಭ ಮಾತನಾಡಿ, ಶುಶ್ರೂಷಕರು ಕೆಲಸ ವೇಳೆಯೂ ಲವಲವಿಕೆಯಿಂದ ಕೆಲಸ ಮಾಡಿದಾಗ ಮಾತ್ರ ಕೆಲಸದ ಒತ್ತಡದಿಂದ ಪಾರಾಗಬಹುದು. ಶುಶ್ರೂಷಣಾಧಿಕಾರಿಗಳು ಎಲ್ಲಾ ಕ್ಷೇತ್ರದಲ್ಲೂ ತೊಡಗಿಸಿಕೊಳ್ಳಬೇಕು. ಆಗ ಮಾತ್ರ ಆಸ್ಪತ್ರೆಯ ವಿಚಾರದಲ್ಲಿ ಬರುವ ದೂರುಗಳನ್ನು ಸಮರ್ಥವಾಗಿ ನಿಭಾಯಿಸಬಹುದು ಎಂದು ಸಲಹೆ ನೀಡಿದರು.

ನರ್ಸ್‌ಗಳೇ ಮೊದಲು ಸೇವೆಗೆ ಲಭ್ಯ: ಎಂಎಂಸಿಆರ್‌ಐ ಮುಖ್ಯ ಆಡಳಿತಾಧಿಕಾರಿ ಬಿ.ಆರ್.ಮಹೇಶ ಮಾತನಾಡಿ, ಆರೋಗ್ಯ ಸೇವಾ ವ್ಯವಸ್ಥೆಯಲ್ಲಿ ನರ್ಸ್ ಎಂದರೆ ಹೃದಯವಿದ್ದಂತೆ. ಆಸ್ಪತ್ರೆಗೆ ಬಂದಾಗ ರೋಗಿಗಳಿಗೆ ಬೇಗ ಸಿಗುವುದೇ ನರ್ಸ್‌ಗಳು. ನರ್ಸ್‌ಗಳ ಸೇವೆ ಅಮೂಲ್ಯ. ರೋಗಿಗಳೊಂದಿಗೆ ನೀವು ಹೇಗೆ ವರ್ತಿಸುತ್ತೀರಿ ಎನ್ನುವುದು ಮುಖ್ಯ. ಹಾಗಾಗಿ ತಮ್ಮ ನಗುಮುಖದ ಸೇವೆ ಮುಂದುವರೆಸಿ ರೋಗಿಗಳು ಬೇಗ ಗುಣಮುಖರಾಗುವಂತೆ ನೋಡಿಕೊಳ್ಳಬೇಕು.

ಒಂದೇ ತಾಯಿ ಮಕ್ಕಳಿದ್ದಂತೆ: ಚೆಲುವಾಂಬ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾದ ಡಾ.ಸುಧಾ ಮಾತನಾಡಿ, ನರ್ಸ್‌ಗಳು ಆಸ್ಪತ್ರೆಯ ಬೆನ್ನೆಲುಬು ಇದ್ದಂತೆ. ನರ್ಸ್‌ಗಳಿಲ್ಲದೆ ಇದ್ದರೆ ರೋಗಿಗಳ ಆರೈಕೆ ಅಸಾಧ್ಯ. ಕೆ.ಆರ್.ಆಸ್ಪತ್ರೆ ವ್ಯಾಪ್ತಿಯ ಎಲ್ಲಾ ಆಸ್ಪತ್ರೆಗಳಲ್ಲೂ ಸೇವೆ ಸೇವೆ ಸಲ್ಲಿಸುತ್ತಿರುವ ನರ್ಸ್‌ಗಳು ಒಂದೇ ತಾಯಿ ಮಕ್ಕಳಂತೆ. ಭಿನ್ನಾಭಿಪ್ರಾಯವಿಲ್ಲದೆ ಉತ್ತಮ ರೀತಿಯಲ್ಲಿ ಕೆಲಸ ಮಾಡಿಕೊಂಡು ಹೋಗುವಂತೆ ಸಲಹೆ ನೀಡಿದರು.

ಕರ್ನಾಟಕ ರಾಜ್ಯ ಸರ್ಕಾರಿ ವೈದ್ಯಕೀಯ ಶಿಕ್ಷಣ ಇಲಾಖಾ ಶುಶ್ರೂಷಾಧಿಕಾರಿಗಳ ಸಂಘದ ಅಧ್ಯಕ್ಷ ಜಿ.ಎನ್. ಗಿರೀಶ್ ಮಾತನಾಡಿ, ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿರುವ ನರ್ಸ್‌ಗಳು ಎದುರಿಸುತ್ತಿರುವ ಸಮಸ್ಯೆ ಬಗೆಹರಿಸಬೇಕು. ಪ್ರೋತ್ಸಾಹ ಧನ ಸರಿಯಾದ ಸಮಯಕ್ಕೆ ನೀಡಬೇಕು. ಸಮವಸ್ತ್ರ ಬದಲಿಸಿ, ಕಲರ್ ಕೋಡ್ ಮಾದರಿಯಲ್ಲಿ ಹೊಸ ಸಮವಸ್ತ್ರ ನೀಡಬೇಕು. ಸಂಘದ ಕಚೇರಿಗೆ ಒಂದು ಕೊಠಡಿ ನೀಡಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಶುಶ್ರೂಷಕ ಅಧೀಕ್ಷಕರು, ಕರ್ನಾಟಕ ರಾಜ್ಯ ಸರ್ಕಾರಿ ವೈದ್ಯಕೀಯ ಶಿಕ್ಷಣ ಇಲಾಖಾ ಶುಶ್ರೂಷಾಧಿಕಾರಿಗಳ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಗೆಸ್ಟ್ ಹೌಸ್‌ಗಳಲ್ಲಿ ಸಭೆ ಮಾಡಿಕೊಂಡಿದ್ದರೆ ಮಾನವ-ವನ್ಯಜೀವಿ ಸಂಘರ್ಷಕ್ಕೆ ಪರಿಹಾರ ಸಿಕ್ಕಲ್ಲ

● ನಿರ್ಲಕ್ಷ್ಯದಿಂದಲೇ ಅರ್ಜುನನ ಸಾವಾಗಿದೆ; ಮಾಜಿ ಸಂಸದ ಪ್ರತಾಪ್ ಸಿಂಹ ● ದಸರಾ ಆನೆ ಅರ್ಜುನನ 2ನೇ ವರ್ಷದ ನೆನಪು; ಐತಿಚಂಡ ರಮೇಶ್ ರಚಿತ ಅರ್ಜುನ ಸೇರಿ ದಸರಾ ಆನೆಗಳ ಕುರಿತ ಪುಸ್ತಕ ಬಿಡುಗಡೆ



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ದಿ ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪತ್ರಕರ್ತ ಐತಿಚಂಡ ರಮೇಶ್ ಉತ್ತಪ್ಪ ಅವರ 'ಸಾವಿನ ಸತ್ಯ'- ಅರ್ಜುನಾ ನಿನ್ನ ಕೊಂದದ್ದು ಮದಗಜವಲ್ಲ ಪಾಪಿ ಮನುಷ್ಯ ಹಾಗೂ ದಸರಾ ಆನೆಗಳು 'ಭೀಮ ಹಾಗೂ ಇತರರು' ಪುಸ್ತಕವನ್ನು ಮಾಜಿ ಸಂಸದ ಪ್ರತಾಪ ಸಿಂಹ ಬಿಡುಗಡೆ ಮಾಡಿದರು.

ಮೈಸೂರು, ಡಿ.4(ಎಂಟಿವೈ)- ಹುಲಿ ಮತ್ತು ಆನೆ ಉಪಟಳ ಹೆಚ್ಚಾಗಿರುವ ಮೈಸೂರು, ಕೊಡಗು, ಚಾಮರಾಜನಗರದಲ್ಲಿ ಮಾನವ ಮತ್ತು ವನ್ಯಜೀವಿ ಸಂಘರ್ಷ ತಡೆಗೆ ಕಟ್ಟುಕಟ್ಟಿನ ಕ್ರಮ ಕೈಗೊಳ್ಳುವ ಅಗತ್ಯವಿದೆ ಎಂದು ಮಾಜಿ ಸಂಸದ ಪ್ರತಾಪ ಸಿಂಹ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ದಿ ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಮೈಸೂರು ಕಲ್ಚರಲ್ ಅಸೋಸಿಯೇಷನ್ ಮತ್ತು ಕಲಿಸು ಫೌಂಡೇಷನ್ ಸಂಯುಕ್ತಾಶ್ರಯದಲ್ಲಿ ಗುರುವಾರ ಆಯೋಜಿಸಿದ್ದ ದಸರಾ ಆನೆ ಅರ್ಜುನನ 2ನೇ ವರ್ಷದ ನೆನಪು ಹಾಗೂ ಪತ್ರಕರ್ತ ಐತಿಚಂಡ ರಮೇಶ ಉತ್ತಪ್ಪ ಅವರ 'ಸಾವಿನ ಸತ್ಯ'- ಅರ್ಜುನಾ ನಿನ್ನ ಕೊಂದದ್ದು ಮದಗಜವಲ್ಲ ಪಾಪಿ ಮನುಷ್ಯ ಹಾಗೂ ದಸರಾ ಆನೆಗಳು 'ಭೀಮ ಹಾಗೂ ಇತರರು' ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ಅವರು, ಇತ್ತೀಚಿನ ವರ್ಷಗಳಲ್ಲಿ ಹಳೆ ಮೈಸೂರು ಭಾಗದಲ್ಲಿ ಮಾನವ-ವನ್ಯಜೀವಿ ಸಂಘರ್ಷ ಹೆಚ್ಚಾಗುತ್ತಿದೆ. ಅದರಲ್ಲೂ ಮೈಸೂರು, ಕೊಡಗು, ಚಾಮರಾಜನಗರ ಜಿಲ್ಲೆಗಳಲ್ಲಿ ಆನೆ ಮತ್ತು ಹುಲಿ ಉಪಟಳ ಪ್ರಕರಣ ಹೆಚ್ಚಾಗುತ್ತಿವೆ. ಇದನ್ನು ತಡೆಗಟ್ಟಲು ಪರಿಣಾಮಕಾರಿಯಾದ ಯೋಜನೆ ರೂಪಿಸಬೇಕು ಎಂದರು.

ಅರಣ್ಯಾಧಿಕಾರಿಗಳು ಅರಣ್ಯದೊಳಗೆ ಹೋಗಿ ಕೆಲಸ ಮಾಡಬೇಕು. ಇಲಾಖೆಯ ಗೆಸ್ಟ್‌ಹೌಸ್‌ಗಳಲ್ಲಿ ಸಭೆ ಮಾಡಿಕೊಂಡಿದ್ದರೆ ವನ್ಯಜೀವಿ ಸಂಘರ್ಷ ತಡೆಗಟ್ಟಲು ಸಾಧ್ಯವಿಲ್ಲ. ದಸರಾ ಆನೆ ಅರ್ಜುನನ ಸಾವು ನಿರ್ಲಕ್ಷ್ಯದಿಂದಲೇ ಸಂಭವಿಸಿದೆ. ಈ ಹಿನ್ನೆಲೆಯಲ್ಲಿ ಇನ್ನಾದರೂ ಅಧಿಕಾರಿಗಳು ಮಾನವ-ವನ್ಯಜೀವಿ ಸಂಘರ್ಷ ತಡೆಗೆ ಕ್ರಮ ಕೈಗೊಳ್ಳಬೇಕು ಎಂದರು.

ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು: ಜನ ಪುಸ್ತಕವನ್ನು ಕೊಂಡು ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು. ಉತ್ತಮ ಅಭಿರುಚಿಯುಳ್ಳ ಪುಸ್ತಕ ಹೊರತರುತ್ತಾರೆ. ಈ ಹಿನ್ನೆಲೆಯಲ್ಲಿ ಪುಸ್ತಕ ಓದುವ ಹವ್ಯಾಸ ರೂಢಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಪುಸ್ತಕ ಕುರಿತು ಮೈಸೂರು ವಿವಿ ಸಿಂಡಿಕೇಟ್ ಮಾಜಿ ಸದಸ್ಯ ಡಾ.ಈ.ಸಿ. ನಿಂಗರಾಜ್ ಗೌಡ ಮಾತನಾಡಿ, ದಸರಾ ಆನೆ ಅರ್ಜುನ ಸಾವಿನ ಸತ್ಯ ಕುರಿತು ರಮೇಶ್ ಉತ್ತಪ್ಪ ಅವರ ಬರೆದಿರುವ ಪುಸ್ತಕ ಮನಕಲಕುತ್ತದೆ. ಮದಗಜಗಳ ನಡುವೆ ಘರ್ಷಣೆ ನಡೆಯುವಾಗ ಅರಣ್ಯ ಇಲಾಖೆ ಮುನ್ನೆಚ್ಚರಿಕೆ ವಹಿಸದೆ ನಿರ್ಲಕ್ಷ್ಯ ವಹಿಸಿರುವ ಅಂಶವನ್ನು ಪುಸ್ತಕದಲ್ಲಿ ವಿವರಿಸಿದ್ದಾರೆ. ಅರಣ್ಯ ಇಲಾಖೆಯಲ್ಲಿ ಪಶುವೈದ್ಯರ ಕೊರತೆಯಿದ್ದು ಶೀಘ್ರವಾಗಿ ಅವರನ್ನು ನೇಮಕ ಮಾಡಬೇಕು ಹಾಗೂ ಪ್ರವಾಸೋದ್ಯಮಕ್ಕೆ ಅನುಕೂಲವಾಗುವಂತೆ ಆನೆಗಳ ಸಂಬಂಧಿತ ಮ್ಯೂಸಿಯಂ ಮಾಡಬೇಕು ಎಂದು ಮನವಿ ಮಾಡಿದರು.

ಇದಕ್ಕೂ ಮುನ್ನ ಪತ್ರಕರ್ತ ಐತಿಚಂಡ ರಮೇಶ ಉತ್ತಪ್ಪ ಮಾತನಾಡಿ, ದಸರಾ ಆನೆ ಅರ್ಜುನ ವೀರ ಮರಣವನ್ನಪ್ಪಿ ಎರಡು ವರ್ಷವಾದರೂ ಅರ್ಜುನನ ಸಾವಿಗೆ ನೈಜ ಕಾರಣ ಏನು ಎಂದು ಬಹಿರಂಗಪಡಿಸಿಲ್ಲ. ಸರ್ಕಾರ ಸಮಿತಿಯೊಂದನ್ನು ರಚಿಸಿತ್ತು ಆ ಸಮಿತಿ ನೀಡಿದ ವರದಿಯನ್ನು ಬಹಿರಂಗ ಮಾಡಿಲ್ಲ. ನಿವೃತ್ತಿಯಾಗಿದ್ದ ಅರ್ಜುನ ಆನೆಯನ್ನು ಕಾಂತರ್ಾಚರಣೆಗೆ ಕರೆದುಕೊಂಡು ಹೋಗಿದ್ದು ಯಾರು. ಆ ಕಾರ್ಯಾಚರಣೆಗೆ ಅಭಿಮನ್ಯುವನ್ನು ಯಾಕೆ ಕರೆದುಕೊಂಡು ಹೋಗಲಿಲ್ಲ. ಒಮ್ಮೆ ದಾಳಿ ಮಾಡಿ ಹೋದ ಮದಗಜ ಮತ್ತೆ ದಾಳಿ ಮಾಡಲು ಬರುತ್ತದೆ ಎಂದು ಯಾಕೆ ಅಲ್ಲಿದ್ದವರಿಗೆ ಅರ್ಥವಾಗಲಿಲ್ಲ. ಈ ಹಿಂದೆ ದೊಡ್ಡಮಾಸ್ತಿ ಅವರು ಮದಗಜ ಅರ್ಜುನನ ಮೇಲೆ ದಾಳಿ ಮಾಡಿದ್ದಾಗ ಚಾಣಾಕ್ಷತನದಿಂದ ಅರ್ಜುನನನ್ನು ಕಾಪಾಡಿದ್ದರು. ಆದರೆ, ಈ ಬಾರಿ ಮದಗಜ ಎರಡನೇ ಬಾರಿಗೆ ದಾಳಿ ಮಾಡಲು ಬರುತ್ತದೆ ಎಂದು ಮಾವುತ ಸೇರಿದಂತೆ ಅಲ್ಲಿದ್ದ ಎಲ್ಲರೂ ಅರಿಯುವಲ್ಲಿ ವಿಫಲರಾಗಿದ್ದಾರೆ. ಆ ಕಾರಣದಿಂದ ಅರ್ಜುನ ವೀರಮರಣವನ್ನಪ್ಪಿದೆ. ಮುಂಬರುವ ದಿನದಲ್ಲಿ ಮೈಸೂರಿನ ಯಾವುದಾದರೂ ವೃತ್ತಕ್ಕೆ ಅರ್ಜುನನ ಹೆಸರಿಟ್ಟು, ಅಲ್ಲಿ ಪ್ರತಿಮೆ ನಿರ್ಮಿಸಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಇದೇ ವೇಳೆ ಪಶು ವೈದ್ಯ ಡಾ. ಮುಜೀಬ್ ಉರ್ ರೆಹಮಾನ್, ಅರ್ಜುನ ಆನೆ ಅಭಿಮಾನಿ ಕೆ.ಆರ್.ಸತ್ಯಪ್ರಭಾ ಅವರನ್ನು ಸನ್ಮಾನಿಸಲಾಯಿತು. ಮೈಸೂರು ಕಲ್ಚರಲ್ ಅಸೋಸಿಯೇಷನ್ ಅಧ್ಯಕ್ಷರು ಹಾಗೂ ಎಪಿಎನ್ ಪ್ರಾಪರ್ಟೀಸ್ ಮಾಲೀಕರೂ ಆದ ಎ.ಪಿ.ನಾಗೇಶ್, ಪ್ರಕಾಶಕ ಎಂ.ಎಂ. ನಿಖಿಲೇಶ್, ಲೇಖಕ ಐತಿಚಂಡ ರಮೇಶ್ ಉತ್ತಪ್ಪ ಉಪಸ್ಥಿತರಿದ್ದರು.

ಪುತ್ತರಿ ನಮ್ಮೆ



ಮೈಸೂರಿನ ವಿಜಯನಗರ ನಾಲ್ಕನೇ ಹಂತದ ರೈಲ್ವೆ ಬಡಾವಣೆಯಲ್ಲಿ ಕೊಡಗು ಗೌಡ ಸಮಾಜದ ವತಿಯಿಂದ ಗುರುವಾರ ರಾತ್ರಿ ಪುತ್ತರಿ ನಮ್ಮೆ(ಹುತ್ತರಿ ಹಬ್ಬ)ಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ನಿಂತಿದ್ದ ಟ್ರಕ್‌ಗೆ ಕಾರು ಡಿಕ್ಕಿ: ನಾಲ್ವರು ವೈದ್ಯಕೀಯ ವಿದ್ಯಾರ್ಥಿಗಳ ದುರ್ಮರಣ



ಲಕ್ನೋ: ನಿಲ್ಲಿಸಿದ್ದ ಟ್ರಕ್‌ಗೆ ವೇಗವಾಗಿ ಬಂದ ಕಾರು ಡಿಕ್ಕಿ ಹೊಡೆದ ಪರಿಣಾಮ ಸ್ಥಳದಲ್ಲೇ ನಾಲ್ವರು ಎಂಬಿಬಿಎಸ್ ವಿದ್ಯಾರ್ಥಿಗಳು ಸಾವನ್ನಪ್ಪಿರುವ ಘಟನೆ ಉತ್ತರ ಪ್ರದೇಶದ ಅಮ್ರೋಹಾದ ದೆಹಲಿ-ಲಕ್ನೋ ರಾಷ್ಟ್ರೀಯ ಹೆದ್ದಾರಿಯಲ್ಲಿ ನಡೆದಿದೆ.

ಬುಧವಾರ ತಡರಾತ್ರಿ ಈ ಅಪಘಾತ ಸಂಭವಿಸಿದೆ. ಡಿಕ್ಕಿಯ ಪರಿಣಾಮ ಕಾರು ಸಂಪೂರ್ಣವಾಗಿ ನಜ್ಜುಗುಜ್ಜಾಗಿದ್ದು, ಅದರಲ್ಲಿದ್ದವರು ಬದುಕುಳಿಯುವ ಯಾವುದೇ ಅವಕಾಶವಿರಲಿಲ್ಲ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಅಪಘಾತಕ್ಕೆ ಅತಿಯಾದ ವೇಗವೇ ಕಾರಣ ಎಂದು ಹೇಳಲಾಗಿದೆ. ಮೃತ ನಾಲ್ವರು ವೆಂಕಟೇಶ್ವರ ವಿಶ್ವವಿದ್ಯಾಲಯದ ಎಂಬಿಬಿಎಸ್ ವಿದ್ಯಾರ್ಥಿಗಳು ಎಂದು ಹೇಳಲಾಗುತ್ತಿದೆ. ವಿಶ್ವವಿದ್ಯಾಲಯದ ಅಧಿಕಾರಿಗಳು ಕೂಡ ಸ್ಥಳಕ್ಕೆ ಆಗಮಿಸಿದ್ದಾರೆ. ಮಾಹಿತಿ ಪಡೆದ ಪೊಲೀಸರು ತಕ್ಷಣ ಸ್ಥಳಕ್ಕೆ ತಲುಪಿ ಶವಗಳನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಿದರು. ವಿಧಿವಿಜ್ಞಾನ ತಂಡಗಳು ಮತ್ತು ಪೊಲೀಸ್ ಸಿಬ್ಬಂದಿ ಸ್ಥಳದಲ್ಲಿ ಪರಿಶೀಲನೆ ನಡೆಸಿದ್ದಾರೆ.

ಕಸಾಯಿಖಾನೆಗೆ ಗೋವು ಸಾಗಾಟ: ವ್ಯಕ್ತಿ ಪೊಲೀಸ್ ವಶಕ್ಕೆ

ಮೈಸೂರು, ಡಿ.4- ಗೂಡ್ಸ್ ವಾಹನದಲ್ಲಿ ಗೋವುಗಳನ್ನು ಕಸಾಯಿಖಾನೆಗೆ ಸಾಗಿಸುತ್ತಿದ್ದ ವ್ಯಕ್ತಿಯೊಬ್ಬನನ್ನು ಮೈಸೂರಿನ ಮೇಟಗಳ್ಳಿ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಕೆ.ಆರ್.ನಗರ ತಾಲೂಕು ಮೂಲದ ಕೀರ್ತಿ ಕುಮಾರ್‌ನನ್ನು ವಶಕ್ಕೆ ಪಡೆದಿದ್ದು, ಟಾಟಾ ಏಸ್ ಗೂಡ್ಸ್ ವಾಹನದಲ್ಲಿ ಸಾಗಿಸುತ್ತಿದ್ದ ನಾಲ್ಕು ಗೋವುಗಳನ್ನು ರಕ್ಷಿಸಿದ್ದಾರೆ.

ಟಾಟಾ ಏಸ್ ಗೂಡ್ಸ್ ವಾಹನದಲ್ಲಿ ಗೋವುಗಳನ್ನು ಸಾಗಿಸುವುದರ ಬಗ್ಗೆ ಬುಧವಾರ ರಾತ್ರಿ 7.30ರ ಸಮಯದಲ್ಲಿ ಮಾಹಿತಿ ತಿಳಿದ ಪೊಲೀಸರು ಕೆಆರ್‌ಎಸ್ ರಸ್ತೆಯ ಫಾಲ್ಕನ್ ಟೈರ್ಸ್ ಬಳಿ ವಾಹನವನ್ನು ತಡೆದಿದ್ದಾರೆ. ಗೋವುಗಳನ್ನು ಹಿಂಸಾತ್ಮಕವಾಗಿ ಸಾಗಿಸುತ್ತಿರುವ ಬಗ್ಗೆ ವಿಚಾರಿಸಿದಾಗ ಚಾಲಕ ಕೀರ್ತಿಕುಮಾರ್ ಪ್ರತಿಕ್ರಿಯೆ ನೀಡಿಲ್ಲ. ಬಳಿಕ ಗೋವುಗಳನ್ನು ಕಸಾಯಿಖಾನೆಗೆ ಸಾಗಿಸುತ್ತಿರುವುದಾಗಿ ಮೂಲಗಳಿಂದ ತಿಳಿದ ಪೊಲೀಸರು, ಕೀರ್ತಿ ಕುಮಾರ್‌ನನ್ನು ವಶಕ್ಕೆ ಪಡೆದು, ಗೋವುಗಳನ್ನು ರಕ್ಷಿಸಿದ್ದಾರೆ. ಈ ಸಂಬಂಧ ಮೇಟಗಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಗೋವುಗಳನ್ನು ಖರೀದಿಸಿದವನು ಹಾಗೂ ಮಾರಾಟ ಮಾಡಿದವರ ಪತ್ತೆಗೆ ಕ್ರಮ ಕೈಗೊಂಡಿದ್ದಾರೆ.

ವಿದ್ಯುತ್ ತಂತಿ ಕಳವು

ಮೈಸೂರು, ಡಿ.4- ಬಡಾವಣೆಯೊಂದರಲ್ಲಿ ಅಳವಡಿಸಿದ್ದ ವಿದ್ಯುತ್ ತಂತಿಗಳನ್ನು ಕಳವು ಮಾಡಿರುವ ಬಗ್ಗೆ ಇಲವಾಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು ತಾಲೂಕು ಗುಂಗ್ರಾಲ್‌ಛತ್ರ ಗ್ರಾಮ ವ್ಯಾಪ್ತಿಯಲ್ಲಿ ಕರ್ನಾಟಕ ಗೃಹ ಮಂಡಳಿ (ಕೆಹೆಚ್‌ಬಿ)ಯಿಂದ ನಿರ್ಮಿಸಿರುವ ಕೆಆರ್‌ಎಸ್ ನಿಸರ್ಗ ವಸತಿ ಬಡಾವಣೆಯಲ್ಲಿ ಈ ಘಟನೆ ನಡೆದಿದೆ. ಬಡಾವಣೆಯ 13ನೇ ಬ್ಲಾಕ್‌ನಲ್ಲಿ ಮೂರು ಕಂಬಗಳ ನಡುವೆ ಅಳವಡಿಸಿದ್ದ ಸುಮಾರು 2 ಲಕ್ಷ ರೂ. ಮೌಲ್ಯದ ಸೆಕೆಂಡರಿ ವಿದ್ಯುತ್ ತಂತಿಗಳನ್ನು ಕತ್ತರಿಸಿ, ಕಳವು ಮಾಡಿರುವುದಾಗಿ ಕೆಹೆಚ್‌ಬಿಯ ಎಇಇ ಕೃಷ್ಣಪ್ಪ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಡಿ.4- ಜ್ಯೋತಿನಗರ ವಿದ್ಯುತ್ ವಿತರಣಾ ಕೇಂದ್ರದಲ್ಲಿ ನಿರ್ವಹಣಾ ಕಾಮಗಾರಿ ನಿಮಿತ್ತ ಡಿ.6 ರಂದು ಬೆಳಿಗ್ಗೆ 10 ರಿಂದ ಸಂಜೆ 5.30 ಗಂಟೆಯವರೆಗೆ ಜಲಪುರಿ, ಗಾಯತ್ರಿಪುರಂ, ಚಾಮುಂಡಿ ವಿಹಾರ ಲೇಔಟ್, ಗೋಪಾಲಗೌಡ ಆಸ್ಪತ್ರೆ, ವಿದ್ಯಾಶಂಕರ ಲೇಔಟ್, ಯರಗನಹಳ್ಳಿ, ರಾಜ್‌ಕುಮಾರ್ ರಸ್ತೆ, ರಾಘವೇಂದ್ರ ನಗರ, ರಾಜೀವನಗರ, ಶಕ್ತಿನಗರ, ಕೆಎಂಎಫ್, ಡಿಸಿ ಕಚೇರಿ, ಪಿಎಫ್ ಆಫೀಸ್, ಗೌಸಿಯಾ ನಗರ, ಕ್ಯಾತಮಾರನಹಳ್ಳಿ, ರೇಖಾದೇವಿ ಬ್ಲಾಕ್, ಟೆರಿಷಿಯನ್ ಕಾಲೇಜ್, ಟೀಚರ್ಸ್ ಲೇಔಟ್, ಉದಯಗಿರಿ, ಸತ್ಯನಗರ, ಎಜೆ ಬ್ಲಾಕ್, ಮುನೇಶ್ವರ ನಗರ, ಪಿ& ಟಿ ಕ್ವಾರ್ಟರ್ಸ್, ಕೆಇಬಿ ಕಾಲೋನಿ, ಮಹದೇವಪುರ ರಸ್ತೆ, ಕ್ಯೂಬಾ ಮಸೀದಿ, ವಿಸ್ಕರ್ ಮಿಲ್ ಹಾಗೂ ಸುತ್ತ-ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಸರ್ಕಾರಿ ಯೋಜನೆಗಳನ್ನು ಅರ್ಹರಿಗೆ ತಲುಪಿಸಿ

ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ.ಕುಮಾರ್ ಸೂಚನೆ



ಜಿಲ್ಲಾಧಿಕಾರಿ ಡಾ.ಕುಮಾರ್ ಸಭೆಯಲ್ಲಿ ಮಾತನಾಡಿದರು.

ಮಂಡ್ಯ, ಡಿ.4– ಸರ್ಕಾರಿ ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸಬೇಕು ಎಂದು ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ. ಕುಮಾರ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಿಂದ ಆಯೋಜಿಸಿದ್ದ ಜಿಲ್ಲಾ ಕೌಶಲ್ಯ ಸಮಿತಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು 'ನಲ್ ಜಲ್ ಮಿತ್ರ' ಯೋಜನೆಯಡಿ 49 ಜನರು ಆಯ್ಕೆಯಾಗಿದ್ದು, 47 ಫಲಾನುಭವಿಗಳು ಉತ್ತೀರ್ಣರಾಗಿರುತ್ತಾರೆ. ಸದರಿ 47 ಜನರಿಗೆ ಟೂಲ್ ಕಿಟ್ ಮತ್ತು ಪ್ರಮಾಣ ಪತ್ರ ವಿತರಿಸಲಾಗಿದೆ ಎಂದರು.

ವಿವಿಧ ಯೋಜನೆಯಡಿ ಆಯ್ಕೆಯಾದ ಫಲಾನುಭವಿಗಳಿಗೆ ಕೇವಲ ತರಬೇತಿ ಮತ್ತು ಪ್ರಮಾಣ ಪತ್ರ ವಿತರಿಸಿದರೆ ಸಾಲದು. ಅವರಿಗೆ ಬ್ಯಾಂಕ್ ಮೂಲಕ ಸಾಲ ಸೌಲಭ್ಯ ಕಲ್ಪಿಸಿ ಉದ್ಯಮ ಆರಂಭಿಸಲು ಉತ್ತೇಜಿಸಬೇಕು ಎಂದರು.

ಪಿಎಂ ವಿಶ್ವಕರ್ಮ ಯೋಜನೆಯಡಿ ಜಿಲ್ಲೆಯಲ್ಲಿ 19 ಸಾವಿರ ಜನರಿಗೆ ತರಬೇತಿ ನೀಡಲಾಗಿದೆ. ಈ ಪೈಕಿ 4290 ಮಂದಿಗೆ 30 ಕೋಟಿ ಸಾಲ ಸೌಲಭ್ಯ ನೀಡಲಾಗಿದೆ. ಪಿಎಂ ವಿಶ್ವಕರ್ಮ ಯೋಜನೆಬಡ ಜನರಿಗೆ ಕೌಶಲ್ಯದ ತರಬೇತಿ ನೀಡಿ ಅವರನ್ನು ಆರ್ಥಿಕವಾಗಿ ಸ್ವಾವಲಂಬಿಗಳಾಗಿ ಮಾಡುವುದೇ ಆಗಿದೆ. ಹೀಗಾಗಿ ಅಧಿಕಾರಿಗಳು ಸದರಿ ಯೋಜನೆಯನ್ನು ಅರ್ಹರಿಗೆ ತಲುಪಿಸಿ ಎಂದರು.

ಯುವನಿಧಿ ಪ್ಲಸ್ ಯೋಜನೆಯಡಿ ಜಿಲ್ಲೆಯ 7 ತಾಲೂಕಿನಿಂದ 315 ನಿರುದ್ಯೋಗಿಗಳು ತರಬೇತಿ ಪಡೆಯಲು ಆಸಕ್ತರಾಗಿದ್ದಾರೆ. ಅಧಿಕಾರಿಗಳು ಯುವನಿಧಿ ಯೋಜನೆಯ ಫಲಾನುಭವಿಗಳಿಗೆ ಯುವನಿಧಿ ಪ್ಲಸ್ ಯೋಜನೆಯ ಕುರಿತು ಕಾಲೇಜುಗಳಲ್ಲಿ ಹೆಚ್ಚಿನ ಮಾಹಿತಿ ಮತ್ತು ಅರಿವು ಮೂಡಿಸಿ ಹೆಚ್ಚಿನ ಸಂಖ್ಯೆಯಲ್ಲಿ ಯುವನಿಧಿ ಪ್ಲಸ್‌ನಲ್ಲಿ ಯುವಕರು ತರಬೇತಿ ಪಡೆಯುವಂತೆ ಮಾಡಿ ಎಂದರು.

ಬೀದಿ ಬದಿ ವ್ಯಾಪಾರಿಗಳನ್ನು ಆರ್ಥಿಕವಾಗಿ ಸದೃಢಗೊಳಿಸಲು ಪಿಎಂ ಸ್ವನಿಧಿ ಯೋಜನೆ ಜಾರಿಗೊಳಿಸಲಾಗಿದೆ. ಈ ಯೋಜನೆಯಡಿ ಸಹಾಯಧನವನ್ನು 3 ಹಂತಗಳಲ್ಲಿ ನೀಡಲಾಗುತ್ತದೆ. ಮೊದಲ ಹಂತದಲ್ಲಿ 15 ಸಾವಿರ, ಎರಡನೇ ಹಂತದಲ್ಲಿ 25 ಸಾವಿರ, ಮೂರನೇ ಹಂತದಲ್ಲಿ 50 ಸಾವಿರ ಹಣವನ್ನು ಶೇ.7ರ ಬಡ್ಡಿ ದರದಲ್ಲಿ ನೀಡಲಾಗುವುದು. ಸಾಲವನ್ನು ಸಕಾಲಕ್ಕೆ ಪಾವತಿಸುವ ಫಲಾನುಭವಿಗಳಿಗೆ 30 ಸಾವಿರದವರೆಗೂ ಕ್ರೆಡಿಟ್ ಕಾರ್ಡ್ ಸೌಲಭ್ಯ ನೀಡಲಾಗುತ್ತದೆ ಎಂದರು.

ಅಧಿಕಾರಿಗಳು ಪಿಎಂ ಸ್ವನಿಧಿ ಯೋಜನೆಯನ್ನು ಅರ್ಹರಿಗೆ ತಲುಪಿಸಿ ಯೋಜನೆ ಮಹತ್ವದ ಕುರಿತು ಜಾಗೃತಿ ಮೂಡಿಸಬೇಕು. ರಸ್ತೆಗಳಲ್ಲಿ ವಾಹನ ಸಂಚಾರಕ್ಕೆ ಅಡ್ಡಿಯಾಗದಂತೆ ಬೀದಿ ಬದಿ ವ್ಯಾಪಾರಿಗಳಿಗೆ ಪರ್ಯಾಯ ಜಾಗದ ವ್ಯವಸ್ಥೆ ಕಲ್ಪಿಸಿ ಎಂದರು.

ಸಭೆಯಲ್ಲಿ ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ನಾಗಾನಂದ, ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕೆ ಘಟಕಗಳ ಜಂಟಿ ನಿರ್ದೇಶಕ ದಿನೇಶ್, ಮದ್ದೂರು ತಹಸೀಲ್ದಾರ್ ಪರಶುರಾವ್ ಸತ್ತಿಗೆರೆ, ಲೀಡ್ ಬ್ಯಾಂಕ್ ವ್ಯವಸ್ಥಾಪಕ ಅರುಣ್ ಕುಮಾರ್ ಸೇರಿದಂತೆ ಇನ್ನಿತರರಿದ್ದರು.

ಜೆಡಿಎಸ್ ಕಾರ್ಯಕರ್ತ ಆತ್ಮಹತ್ಯೆ ಹಿನ್ನೆಲೆ

ಮೃತನ ಕುಟುಂಬದವರಿಗೆ ಮಾಜಿ ಸಚಿವ ಡಿಸಿಟಿ ಸಾಂತ್ವನ



ಮಹದೇವು ಕುಟುಂಬದವರಿಗೆ ಮಾಜಿ ಸಚಿವ ಡಿ.ಸಿ.ತಮ್ಮಣ್ಣ ಸಾಂತ್ವನ ಹೇಳಿದರು.

ಭಾರತೀನಗರ, ಡಿ.4– ಇತ್ತೀಚೆಗೆ ಜೆಡಿಎಸ್‌ನ ನಿಷ್ಠಾವಂತ ಕಾರ್ಯಕರ್ತ ದಿ.ಮಹದೇವು ಅವರು ಆತ್ಮಹತ್ಯೆ ಮಾಡಿಕೊಂಡ ಹಿನ್ನೆಲೆಯಲ್ಲಿ ಇಲ್ಲಿಗೆ ಸಮೀಪದ ದೇವೇಗೌಡನದೊಡ್ಡಿ ಗ್ರಾಮಕ್ಕೆ ಮಾಜಿ ಸಚಿವ ಡಿ.ಸಿ.ತಮ್ಮಣ್ಣ ಭೇಟಿ ನೀಡಿದ ಮೃತನ ಕುಟುಂಬದವರಿಗೆ ಸಾಂತ್ವನ ಹೇಳಿದರು.

ನಂತರ ಮಾತನಾಡಿದ ಮಾಜಿ ಸಚಿವರು, ಮಹದೇವು ಅವರು ಜೆಡಿಎಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತ ರಾಗಿದ್ದರು. ಹೆಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಹಾಗೂ ಡಿ.ಸಿ.ತಮ್ಮಣ್ಣ ಅವರು ಮಂತ್ರಿ ಆಗುವವರೆಗೂ ಕಾಲಿಗೆ ಪಾದರಕ್ಷೆ ಹಾಕುವುದಿಲ್ಲ ಎಂದು ಪಣ ತೊಟ್ಟಿದ್ದರು. ಆದರೆ ಅವರು ಆತ್ಮಹತ್ಯೆ ಮಾಡಿಕೊಂಡಿರುವುದು ನಮಗೆ ನೋವು ತಂದಿದೆ. ಹಾಗಾಗಿ ಅವರ ತಂದೆ ಕರೀಗೌಡ ಹಾಗೂ ಸಹೋದರ ಬಸವರಾಜು ಸೇರಿದಂತೆ ಕುಟುಂಬದವರಿಗೆ ಸಾಂತ್ವನ ಹೇಳಲು ಆಗಮಿಸಿದ್ದೇನೆ. ಮಹದೇವು ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ಆಶಿಸುತ್ತೇನೆ ಎಂದರು.

ವಾರದ ಹಿಂದೆ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು ಆಗಮಿಸಿ ಕುಟುಂಬಕ್ಕೆ ಸಾಂತ್ವನ ಹೇಳಿ ಧೈರ್ಯ ತುಂಬಿ ಆರ್ಥಿಕ ಸಹಾಯ ಮಾಡಿ ಹೋಗಿದ್ದಾರೆ ಎಂದರು. ಜೆಡಿಎಸ್ ತಾಲೂಕು ಅಧ್ಯಕ್ಷ ಚಿಕ್ಕತಿಮ್ಮೇಗೌಡ, ಜೆಡಿಎಸ್ ಮುಖಂಡ ಹನುಮಂತೇಗೌಡ, ಗ್ರಾಪಂ ಮಾಜಿ ಅಧ್ಯಕ್ಷ ಮಹದೇವು, ಉಮೇಶ್, ಆನಂದ, ರವಿ, ಗ್ರಾಮದ ಜೆಡಿಎಸ್ ಮುಖಂಡರು ಸೇರಿದಂತೆ ಹಲವರಿದ್ದರು.


ಮುಡಾಗೆ ಬಿ.ಪಿ.ಪ್ರಕಾಶ್ ನೂತನ ಅಧ್ಯಕ್ಷ



ಮಂಡ್ಯ, ಡಿ.4– ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ನೂತನ ಅಧ್ಯಕ್ಷರಾಗಿ ಹಿರಿಯ ಪತ್ರಕರ್ತ ಬಿ.ಪಿ. ಪ್ರಕಾಶ್ ಅವರನ್ನು ನೇಮಕ ಮಾಡಿ ಸರ್ಕಾರ ಆದೇಶ ಹೊರಡಿಸಿದೆ.

ಬಿ.ಪಿ.ಪ್ರಕಾಶ್ ಅವರನ್ನು ಅಧ್ಯಕ್ಷರನ್ನಾಗಿ ಹಾಗೂ ಗುತ್ತಲು ಕಾಲೋನಿಯ ಇದ್ರೀಸ್ ಖಾನ್, ಕಲ್ಲಹಳ್ಳಿಯ ಕೆ.ಜಿ. ಕಾರ್ತಿಕ್, ಸಾತನೂರಿನ ಎನ್.ಎಸ್. ಮಹೇಶ್ ಹಾಗೂ ಅಶೋಕ ನಗರದ ಕಮಲಮ್ಮ ಎಂಬುವರನ್ನು ಸದಸ್ಯರನ್ನಾಗಿ ನೇಮಕ ಮಾಡಿ ಸರ್ಕಾರದ ಅಧೀನ ಕಾರ್ಯದರ್ಶಿ ಕೆ.ಲತಾ ಆದೇಶ ಹೊರಡಿಸಿದ್ದಾರೆ. ಬಿ.ಪಿ.ಪ್ರಕಾಶ್ ಅವರು ಈ ಹಿಂದೆ ನಗರಸಭೆ ನಾಮ ನಿರ್ದೇಶನ ಸದಸ್ಯರಾಗಿದ್ದರು. ಜೊತೆಗೆ ಪತ್ರಕರ್ತರ ಸಂಘದ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಿದ್ದರು. ಪ್ರಸ್ತುತ ಹೌಸಿಂಗ್ ಬೋರ್ಡ್ ಹುಡ್ಕೋ ನಿವಾಸಿಗಳ ಸೊಸೈಟಿಯ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿ ಸುತ್ತಿದ್ದಾರೆ. ಇದೀಗ ಇವರ ಪಕ್ಷ ನಿಷ್ಠೆ ಗಮನಿಸಿ ಸರ್ಕಾರ, ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರನ್ನಾಗಿ ನೇಮಕ ಮಾಡಿದೆ.

ಬೋನಿಗೆ ಬಿದ್ದ ಚಿರತೆ



ಮದ್ದೂರು, ಡಿ.4– ತಾಲೂಕಿನ ದೊಡ್ಡಹೊಸಗಾವಿಯಲ್ಲಿ ಕಳೆದ ಒಂದು ವಾರದಿಂದ ಪ್ರತ್ಯಕ್ಷಗೊಂಡು ಗ್ರಾಮಸ್ಥರಲ್ಲಿ ಆತಂಕ ಮೂಡಿಸಿದ್ದ ಚಿರತೆ ಗುರುವಾರ ಅರಣ್ಯ ಇಲಾಖೆ ಇರಿಸಿದ್ದ ಬೋನಿಗೆ ಬಿದ್ದಿದೆ.

ಇತ್ತೀಚೆಗೆ ಚಿರತೆ ಗ್ರಾಮದಲ್ಲಿ ಆಗಾಗ್ಗೆ ಕಾಣಿಸಿಕೊಂಡು ಜಾನುವಾರುಗಳ ಮೇಲೆ ದಾಳಿ ನಡೆಸಿ ಬಲಿ ಪಡೆಯುತ್ತಿತ್ತು. ಅಲ್ಲದೇ ಗ್ರಾಮಸ್ಥರು ತಮ್ಮ ಜಮೀನುಗಳಿಗೆ ತೆರಳಲು ಭಯಪಡುವಂತಾಗಿತ್ತು. ಚಿರತೆ ಸೆರೆ ಹಿಡಿಯುವಂತೆ ಗ್ರಾಮಸ್ಥರು ಮಾಡಿದ ಮನವಿ ಮೇರೆಗೆ ಗ್ರಾಮದ ಚೆನ್ನಮ್ಮ ಶಿವ ನಂಜಯ್ಯ ಎಂಬುವರ ಜಮೀನಿನಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ಇರಿಸಿದ್ದ ಬೋನಿಗೆ ಚಿರತೆ ಬಿದ್ದಿದೆ. ವಿಷಯ ತಿಳಿದು ಸ್ಥಳಕ್ಕಾಗ ಮಿಸಿದ ಅಧಿಕಾರಿಗಳು ಚಿರತೆ ವಶಕ್ಕೆ ಪಡೆದರು.

ಮೆಗಾ ಫುಡ್‌ಪಾರ್ಕ್‌ನಿಂದ ರೈತರಿಗೆ ಕಿರುಕುಳ ಆರೋಪ

ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ ಶಾಸಕ ಹೆಚ್.ಟಿ.ಮಂಜು



ಅಧಿಕಾರಿಗಳೊಂದಿಗೆ ಸ್ಥಳಕ್ಕೆ ಭೇಟಿ ನೀಡಿ ಶಾಸಕ ಹೆಚ್.ಟಿ.ಮಂಜು ಪರಿಶೀಲಿಸಿದರು.

ಕೆ.ಆರ್.ಪೇಟೆ, ಡಿ.4– ತಾಲೂಕಿನ ಬಣ್ಣೇನಹಳ್ಳಿ ಬಳಿ ಕೈಗಾರಿಕಾ ಪ್ರದೇಶದಲ್ಲಿರುವ ಮೆಗಾ ಫುಡ್‌ಪಾರ್ಕ್ ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕ ಜಯದೇವ್ ಅವರು ಕೈಗಾರಿಕೆ ಸ್ಥಾಪಿಸಿ ನಿರುದ್ಯೋಗಿಗಳಿಗೆ ಉದ್ಯೋಗ ನೀಡುವ ಬದಲು ಅಕ್ಕಪಕ್ಕದ ರೈತರಿಂದ ಭೂಮಿ ಖರೀದಿಸುವ ಕೆಲಸದಲ್ಲಿ ನಿರತರಾಗಿದ್ದು, ರಿಯಲ್ ಎಸ್ಟೇಟ್ ನಡೆಸುತ್ತಿದ್ದಾರೆ ಎಂದು ಶಾಸಕ ಹೆಚ್.ಟಿ.ಮಂಜು ಆರೋಪಿಸಿದರು.

ಮೆಗಾ ಫುಡ್‌ಪಾರ್ಕ್ ಸಂಸ್ಥೆಯವರು ಕಿರುಕುಳ ನೀಡುತ್ತಿರುವ ಬಗ್ಗೆ ಸ್ಥಳೀಯ ರೈತರು ದೂರು ನೀಡಿದ ಹಿನ್ನೆಲೆಯಲ್ಲಿ ಅಧಿಕಾರಿಗಳೊಂದಿಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ, ರೈತರು ದೇವಾಲಯ ಹಾಗೂ ಕೆರೆಕಟ್ಟೆಗಳಿಗೆ ತೆರಳಲು ಇದ್ದ ರಸ್ತೆ ಮುಚ್ಚಿರುವ ಬಗ್ಗೆ ಅಧಿಕಾರಿಗಳನ್ನು ತರಾಟೆ ತೆಗೆದುಕೊಂಡರು.

ಬಳಿಕ ಮಾತನಾಡಿದ ಶಾಸಕರು, ಮೆಗಾ ಫುಡ್‌ಪಾರ್ಕ್ ಸಂಸ್ಥೆಯವರು ಕೂಡಲೇ ಕೆರೆ ಕಟ್ಟೆಗಳಿಗೆ ಹೋಗಲು ರಸ್ತೆ ನಿರ್ಮಿಸಿ ಕೊಡಬೇಕು. ರೈತರಿಗೆ ಕಿರುಕುಳ ನೀಡಬಾರದು. ಫುಡ್ ಪಾರ್ಕ್ ಅಧಿಕಾರಿಗಳು ರೈತರೊಂದಿಗೆ ಸೌಜನ್ಯದಿಂದ ವರ್ತಿಸಬೇಕು. ಕೈಗಾರಿಕೆಗಳನ್ನು ನಿರ್ಮಿಸಿ ಸ್ಥಳೀಯರಿಗೆ ಉದ್ಯೋಗ ನೀಡಬೇಕು ಎಂದರು.

ಸಿಎಂ ಸಿದ್ದರಾಮಯ್ಯ ಅವರು 12 ವರ್ಷಗಳ ಹಿಂದೆ ಫುಡ್ ಪಾರ್ಕ್ ಉದ್ಘಾಟಿಸಿ ಕೈಗಾರಿಕೆ ಆರಂಭಿಸಿ ಉದ್ಯೋಗ ನೀಡುವಂತೆ ಆದೇಶಿಸಿದ್ದರು. ಆದರೆ ಸಣ್ಣ ಕೈಗಾರಿಕೆಗಳು ಮಾತ್ರ ಆರಂಭಗೊಂಡಿವೆ. ಸಂಸ್ಥೆ ಎಂಡಿ ಜಯದೇವ್ ಅವರು ಗಾರ್ಮೆಂಟ್ಸ್‌ನಂತಹ ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸಿ ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸುವ ಬದಲು ರಿಯಲ್ ಎಸ್ಟೇಟ್ ಉದ್ಯಮ ಆರಂಭಿಸಿ ಫುಡ್ ಪಾರ್ಕ್ ಅಕ್ಕಪಕ್ಕದ ರೈತರ ಭೂಮಿಯನ್ನು ಕಡಿಮೆ ಬೆಲೆಗೆ ಖರೀದಿಸಿ ರೈತರನ್ನು ಭೂರಹಿತರನ್ನಾಗಿ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಈ ವೇಳೆ ಮೆಗಾ ಫುಡ್ ಪಾರ್ಕ್ ವ್ಯವಸ್ಥಾಪಕ ಜಯದೇವ್ ಅವರೊಂದಿಗೆ ದೂರವಾಣಿಯಲ್ಲಿ ಮಾತನಾಡಿದ ಶಾಸಕರು ತೀವ್ರ ತರಾಟೆ ತೆಗೆದುಕೊಂಡರು. ಕೂಡಲೇ ರಿಯಲ್ ಎಸ್ಟೇಟ್ ವ್ಯವಹಾರ ನಿಲ್ಲಿಸಿ ಹೊಸ ಕೈಗಾರಿಕೆಗಳನ್ನು ಆರಂಭಿಸುವತ್ತ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಸುತ್ತ ಮುತ್ತಲ ರೈತರೊಡಗೂಡಿ ಮೆಗಾ ಫುಡ್ ಪಾರ್ಕ್ ಕಂಪನಿ ವಿರುದ್ಧ ಉಗ್ರ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಈ ಸಂದರ್ಭ ಕೆಐಎಡಿಬಿ ಅಧಿಕಾರಿ ಎಸ್‌ಎಲ್‌ಓ ವೆಂಕಟರಾಜು, ಇಇ ಮಾದೇಶ್, ತಾಲೂಕು ಸರ್ವೆ ಅಧಿಕಾರಿಗಳಾದ ಎಸ್. ಲೋಕೇಶ್, ಕೆ.ಟಿ.ಆನಂದ್, ಬೂಕನಕೆರೆ ಹೋಬಳಿ ಉಪ ತಹಸೀಲ್ದಾರ್ ಜಗದೀಶ್, ರಾಜಸ್ವ ನಿರೀಕ್ಷಕಿ ಚಂದ್ರಕಲಾ, ಗ್ರಾಮ ಲೆಕ್ಕಾಧಿಕಾರಿ ಬಾಲಾಜಿ, ಮುಖಂಡರಾದ ತಾಲೂಕು ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಬಿ.ಜೆ.ಧನಂಜಯ, ತಾಲೂಕು ಟಿಎಪಿಸಿಎಂಎಸ್ ಅಧ್ಯಕ್ಷ ಬಲದೇವ್, ಎಪಿಎಂಸಿ ಮಾಜಿ ಅಧ್ಯಕ್ಷ ಮಲ್ಲೇಶ್, ತಾಲೂಕು ಟಿಎಪಿಸಿಎಂಸ್ ನಿರ್ದೇಶಕ ಮಧು, ಕೃಷ್ಣೇಗೌಡ, ವಾಟಾಳ್ ನಾಗರಾಜು, ನಟೇಶ್, ವೆಂಕಟೇಶ್, ಆನಂದ್, ಶಾಸಕರ ಆಪ್ತ ಸಹಾಯಕ ಪ್ರತಾಪ್, ಧ್ರುವ, ಕುಮಾರಸ್ವಾಮಿ ಮತ್ತಿತರರಿದ್ದರು.

ಚಿಕ್ಕಅಂಕನಹಳ್ಳಿ ಗ್ರಾಪಂಗೆ 'ಗಾಂಧಿ ಗ್ರಾಮ ಪುರಸ್ಕಾರ'



ಶ್ರೀರಂಗಪಟ್ಟಣ, ಡಿ.4– ತಾಲೂಕಿನ ಚಿಕ್ಕಅಂಕನಹಳ್ಳಿ ಗ್ರಾಮ ಪಂಚಾಯಿತಿ ಪ್ರಸಕ್ತ ಸಾಲಿನ ಗಾಂಧಿ ಗ್ರಾಮ ಪುರಸ್ಕಾರಕ್ಕೆ ಭಾಜನವಾಗಿದೆ.

ಬೆಂಗಳೂರಿನ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ ಸಮಾರಂಭದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವ ಪ್ರಿಯಾಂಕ್ ಖರ್ಗೆ ಹಾಗೂ 5ನೇ ಹಣಕಾಸು ಆಯೋಗದ ಅಧ್ಯಕ್ಷ ಎಂ.ಆರ್. ನಾರಾಯಣಸ್ವಾಮಿ ಪ್ರಶಸ್ತಿ ಪ್ರದಾನ ಮಾಡಿದರು. ಗ್ರಾಪಂ ಪರವಾಗಿ ಪಿಡಿಓ ಕೆ.ದೇವೇಗೌಡ, ಅಧ್ಯಕ್ಷೆ ಚನ್ನಮ್ಮ, ಮಾಜಿ ಅಧ್ಯಕ್ಷ ರಾಮು ಪುರಸ್ಕಾರವನ್ನು ಸ್ವೀಕರಿಸಿದರು.

ಗ್ರಾಮದ ಸಮಗ್ರ ಅಭಿವೃದ್ಧಿ, ಗ್ರಾಪಂ ವ್ಯಾಪ್ತಿಯಲ್ಲಿ ಉತ್ತಮ ಆಡಳಿತ ಹಾಗೂ ಜನಪರ ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಚಿಕ್ಕ ಅಂಕನಹಳ್ಳಿ ಗ್ರಾಪಂ ಅನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಈ ಸಾಧನೆ ಇತರ ಗ್ರಾಪಂಗಳಿಗೆ ಮಾದರಿಯಾಗಿದೆ ಎಂದು ಸಚಿವರು ಶ್ಲಾಘಿಸಿದರು ಎಂದು ಗ್ರಾಪಂ ಅಧ್ಯಕ್ಷರು ಹಾಗೂ ಪಿಡಿಓ ತಿಳಿಸಿದ್ದಾರೆ.

ಪಾರ್ವತಮ್ಮ ನಿಧನ



ಕೆ.ಆರ್.ಪೇಟೆ, ಡಿ.4– ತಾಲೂಕಿನ ಕಡಹೆಮ್ಮಿಗೆ ಗ್ರಾಮದ ಹಿರಿಯ ಮುಖಂಡ ಲೇ. ಉಜ್ಜನಿಲಿಂಗೇಶ್ವರ ಅವರ ಪತ್ನಿ, ತಾಪಂ ಮಾಜಿ ಅಧ್ಯಕ್ಷೆ ಪಾರ್ವತಮ್ಮ (82)ಗುರುವಾರ ಬೆಳಗ್ಗೆ ನಿಧನರಾದರು.

ಮೃತರು ಪುತ್ರರಾದ ತಾಪಂ ಮಾಜಿ ಸದಸ್ಯ ಯು. ಧನಂಜಯ್, ಚಂದ್ರಶೇಖರ್, ಪುತ್ರಿ ಪುಷ್ಪ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಬೆಳಗ್ಗೆ 11 ಗಂಟೆಗೆ ಸ್ವಗ್ರಾಮದ ಮೃತರ ಜಮೀನಿನಲ್ಲಿ ನಡೆಯಲಿದೆ.

ಮೂರನೇ ಪುಟದಿಂದ

ಪ್ರಮಾಣಪತ್ರ ಕಡ್ಡಾಯವಿಲ್ಲ

ರಾಜ್ಯದ ವಿವಿಧ 7 ನಗರಗಳಲ್ಲಿ 452.89 ಕೋಟಿ ರೂ. ವೆಚ್ಚದಲ್ಲಿ ಅತ್ಯಾಧುನಿಕ ಕೌಶಲ್ಯ ಪ್ರಯೋಗಾಲಯ ಪ್ರಾರಂಭಿಸಲು ಆಡಳಿತಾತ್ಮಕ ಅನುಮೋದನೆ ನೀಡಿದೆ. ಅಲ್ಪಸಂಖ್ಯಾತರ ಇಲಾಖೆ 304 ಕೋಟಿ ರೂ. ಅಂದಾಜು ಮೊತ್ತದಲ್ಲಿ 19 ಮೊರಾರ್ಜಿ ಶಾಲೆ ತೆರೆಯಲು ಸಭೆ ಸಮ್ಮತಿಸಿದೆ. ವಿವಿಧ ನಗರ ಯೋಜನಾ ಪ್ರಾಧಿಕಾರಗಳು ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಲಭ್ಯವಿರುವ ನಿವೇಶನ ಗಳನ್ನು ಬ್ಲಾಕ್ ಕಾಂಗ್ರೆಸ್ ಕಚೇರಿ ನಿರ್ಮಾಣ ಸಲುವಾಗಿ ಕಾಂಗ್ರೆಸ್ ಭವನ ಟ್ರಸ್ಟ್‌ಗೆ ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡಲು ಅನು ಮೋದನೆ ನೀಡಿದೆ. ಹಾಸನ ಜಿಲ್ಲಾ ಒಕ್ಕಲಿ ಗರ ಸಂಘಕ್ಕೆ ಅಲ್ಲಿನ ಎಸ್‌ಎಂಕೆ ನಗರ ವಸತಿ ಬಡಾವಣೆಯ ಸಿ.ಎ ನಿವೇಶನ ಸಂ: 4/7 ಮತ್ತು 4/9 ರಲ್ಲಿನ ನಾಗರಿಕ ಸೌಲಭ್ಯ ನಿವೇಶನದ 3964 ಚ.ಮೀವುಳ್ಳ (42652 ಚ.ಅಡಿ) ನಾಗರಿಕ ನಿವೇಶನ ವನ್ನು ಗ್ರಾಮೀಣ ವಿದ್ಯಾರ್ಥಿ ನಿಲಯ ಮತ್ತು ಸಮುದಾಯ ಭವನ ಉದ್ದೇಶ ಕ್ಕಾಗಿ 30 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ರೂ.3,76,61,716/– ಗಳನ್ನು ನಿಗದಿಪಡಿಸಿ ಹಂಚಿಕೆ ಮಾಡಲಾಗಿದೆ. ಸದರಿ ಸಂಸ್ಥೆಯವರು ಮಂಜೂರಾತಿ ಕೋರಿ ಸಲ್ಲಿಸಿದ ಅರ್ಜಿಯೊಂದಿಗೆ ರೂ.37,66,236/– ಗಳನ್ನು ಪಾವತಿಸಿರುತ್ತಾರೆ. ಬಾಕಿ ಮೊತ್ತ ರೂ.3,38,95,480/– ಗಳನ್ನು ಪಾವತಿಸಬೇಕಾಗಿರುತ್ತದೆ. ಸದರಿ ಬಾಕಿ ಮೊತ್ತಕ್ಕೆ ವಿನಾಯಿತಿ ನೀಡಲು ಸಚಿವ ಸಂಪುಟ ನಿರ್ಧರಿಸಿದೆ.

ವಿವಿಧ ನಗರ ಯೋಜನಾ ಪ್ರಾಧಿಕಾರಗಳು / ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಲಭ್ಯವಿರುವ ನಿವೇಶನಗಳನ್ನು ಬ್ಲಾಕ್ ಕಾಂಗ್ರೆಸ್ ಕಛೇರಿ ನಿರ್ಮಾಣ ಮಾಡುವ ಸಲುವಾಗಿ ಕಾಂಗ್ರೆಸ್ ಭವನ ಟ್ರಸ್ಟ್, ಬೆಂಗಳೂರು ಇವರಿಗೆ ಗುತ್ತಿಗೆ ಆಧಾರದ ಮೇಲೆ ಮಾರುಕಟ್ಟೆ ಮೌಲ್ಯದ ಶೇ.5ರಷ್ಟಕ್ಕೆ ನೀಡಲು ಸಚಿವ ಸಂಪುಟ ನಿರ್ಧರಿಸಿದೆ.

ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ (ಪ್ರತಿಬಂಧಕ) ವಿಧೇಯಕ 2025, ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯ (ತಿದ್ದುಪಡಿ) ವಿಧೇಯಕ 2025, ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯ (ತಿದ್ದುಪಡಿ) ವಿಧೇಯಕ 2025, ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳ ಮತ್ತು ಧರ್ಮಾದಾಯಿ ದತ್ತಿಗಳ (ತಿದ್ದುಪಡಿ) ವಿಧೇಯಕ 2025, ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಮತ್ತು ಇನ್ನಿತರೆ ಕಾನೂನುಗಳ (ತಿದ್ದುಪಡಿ) ವಿಧೇಯಕ 2025 ಗಳನ್ನು ಅನುಮೋದಿಸಲು ಹಾಗೂ ಸದರಿ ವಿಧೇಯಕವನ್ನು ವಿಧಾನ ಮಂಡಲದ ಮುಂದೆ ಮಂಡಿಸಲು ಸಚಿವ ಸಂಪುಟ ನಿರ್ಧರಿಸಿದೆ.

ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಯಡಿ 'ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ (ತಿದ್ದುಪಡಿ) ವಿಧೇಯಕ, 2025'ಕ್ಕೆ ಅನುಮೋದನೆಯನ್ನು ಸಚಿವ ಸಂಪುಟ ನೀಡಿದೆ.

ಮಂಡ್ಯ ಜಿಲ್ಲೆ ಕೆ.ಆರ್.ಪೇಟೆ ತಾಲೂಕಿನ ಗೂಡೇಹೊಸಹಳ್ಳಿ ಬಳಿ ಹೇಮಾವತಿ ನದಿಯಿಂದ ನೀರನ್ನು ಎತ್ತಿ ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ಮತ್ತು ನಾಗಮಂಗಲ ತಾಲೂಕು ಹಾಗೂ ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲೂಕುಗಳ ಕೆರೆ ತುಂಬಿಸುವ (ಹಂತ–2) ರೂ.67.00 ಕೋಟಿಗಳ ಅಂದಾಜು ಮೊತ್ತದ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ

ಮನೆಗಳ್ಳತನ ಸಂಬಂಧ ಇಂಜಿನಿಯರ್ ಬಂಧನ

393 ಗ್ರಾಂನ ಒಟ್ಟು 36 ಚಿನ್ನಾಭರಣಭರಣಗಳು ಹಾಗೂ 35 ಸಾವಿರ ರೂ. ನಗದು ನಾಪತ್ತೆಯಾಗಿರು ವುದು ತಿಳಿಯಿತು. ವಿಷಯ ತಿಳಿಯುತ್ತಿದ್ದಂತೆಯೆ ಸ್ಥಳಕ್ಕೆ ದಾವಿಸಿದ ವಿದ್ಯಾರಣ್ಯಪುರಂ ಠಾಣೆಯ ಹಿಂದಿನ ಇನ್ಸ್‌ಪೆಕ್ಟರ್ ಮೋಹಿತ್, ಸಬ್ ಇನ್ಸ್‌ಪೆಕ್ಟರ್ ನಿತ್ಯಾನಂದ ಹಾಗೂ ಸಿಬ್ಬಂದಿ ಮಹಜರು ನಡೆಸಿ ಮೇ 7 ರಂದು ಪ್ರಕರಣ ದಾಖಲಿಸಿಕೊಂಡು ಆರೋಪಿಗಳ ಪತ್ತೆಗೆ 4 ತಂಡಗಳನ್ನು ರಚಿಸಿ ಶೋಧ ಕಾರ್ಯ ನಡೆಸುತ್ತಿದ್ದರು. ಆಭರಣ ಕಳೆದುಕೊಂಡಿದ್ದ ವೀಣಾ ನೀಡಿದ ಮಾಹಿತಿ ಮತ್ತು ಸುಳಿವಿನ ಆಧಾರದ ಮೇಲೆ ವಿದ್ಯಾರಣ್ಯಪುರಂ ಠಾಣೆ ಇನ್ಸ್‌ಪೆಕ್ಟರ್ ಯೋಗಾನಂಜಪ್ಪ, ಸಬ್‌ಇನ್ಸ್‌ಪೆಕ್ಟರ್ ಮಾರುತಿ ಅಂತರಗಟ್ಟಿ ಅವರು ಆರೋಪಿ ಕಿರಣ್‌ನನ್ನು ನವೆಂಬರ್ 15 ರಂದು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಕಳವು ಮಾಡಿದ ಚಿನ್ನಾಭರಣಗಳನ್ನು ಮೈಸೂರಿನ 3 ಹಣಕಾಸು ಲೇವಾದೇವಿ ಕಂಪನಿಗಳಲ್ಲಿ ಗಿರವಿ ಇರಿಸಿದ್ದ ಆತ, ಆ ಹಣದಲ್ಲಿ ಕಾರು ಖರೀದಿಸಿದ್ದ ಎನ್ನಲಾಗಿದೆ. ಸ್ಥಳೀಯ ಇಂಜಿನಿಯರ್ ಕಾಲೇಜೊಂದರಲ್ಲಿ ಐಟಿಐ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ ಕಿರಣ್‌ನನ್ನು ಅಂದಾನಿ ಸರ್ಕಲ್ ಬಳಿ ಬಂಧಿಸಿ, ನಂತರ ಚಿನ್ನಾಭರಣವನ್ನು ವಶಪಡಿಸಿಕೊಂಡಿದ್ದಾರೆ. ಆರೋಪಿಯನ್ನು ನ್ಯಾಯಾಧೀಶರ ಮುಂದೆ ಹಾಜುರುಪಡಿಸಲಾಗಿ ಆತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ನಗರ ಪೊಲೀಸ್ ಕಮೀಷ್ನರ್ ಸೀಮಾ ಲಾಟ್ಕರ್ ಅವರ ನಿರ್ದೇಶನದಂತೆ, ಡಿಸಿಪಿ ಕೆ.ಎಸ್. ಸುಂದರ್‌ರಾಜ್ ಸಲಹೆ ಮೇರೆಗೆ ಕೆಆರ್ ಉಪವಿಭಾಗದ ಎಸಿಪಿ ರಮೇಶ್ ಕುಮಾರ್ ಮಾರ್ಗದರ್ಶನದಲ್ಲಿ ನಡೆದ ಪತ್ತೆ ಕಾರ್ಯಾಚರಣೆಯಲ್ಲಿ ವಿದ್ಯಾರಣ್ಯಪುರಂ ಠಾಣೆ ಇನ್ಸ್‌ಪೆಕ್ಟರ್ ಯೋಗಾನಂಜಪ್ಪ, ಸಬ್ ಇನ್ಸ್‌ಪೆಕ್ಟರ್ ಮಾರುತಿ ಅಂತರಗಟ್ಟಿ, ಸಿಬ್ಬಂದಿಗಳಾದ ರಮ್ಯಾ ರಮೇಶ್, ಚಿಕ್ಕಣ್ಣ, ಸಂದೀಪ್, ಕರಿಯಪ್ಪ, ನಾರಾಯಣ ಹಾಗೂ ಇತರರು ಪಾಲ್ಗೊಂಡಿದ್ದರು.

ಅದ್ಧೂರಿ ಯಶಸ್ವಿ ಹನುಮಂತೋತ್ಸವ



ಸಾಂಬಸದಾಶಿವ ಸ್ವಾಮಿಜಿ, ಪೌರಾಯುಕ್ತೆ ಮಾನಸ, ಮಾಜಿ ಶಾಸಕ ದಿವಂಗತ ಎಸ್. ಚಿಕ್ಕಮಾದು ಅವರ ಪುತ್ರಿ ರಂಜಿತಾ, ಸೇರಿದಂತೆ ವಿವಿಧ ಗಣ್ಯರು ಮೊದಲು ಧರ್ಮಜ್ಯೋತಿ ಬೆಳಗಿಸಿ ನಂತರ ನಂದಿಕಂಬಕ್ಕೆ ಪೂಜೆ ಸಲ್ಲಿಸಿ ಉತ್ಸವ ಮೂರ್ತಿ ಹನುಮನಿಗೆ ಪುಷ್ಪಾರ್ಚನೆ ಮಾಡಿ ಪೂಜೆ ಸಲ್ಲಿಸಿ ಚಾಲನೆ ನೀಡಿದರು. ನಂತರ ಮೆರವಣಿ ಮುಂದೆ ಹೋಗುವಾಗ ಎಲ್ಲ ಗಣ್ಯರು ಮೆರವಣಿಗೆಯಲ್ಲಿ ಜೊತೆಗೂಡಿ ತೆರೆದ ವಾಹನದಲ್ಲಿ ಸಾಗಿದರು. ಮೆರವಣಿಗೆ ಸಾಗುತಿದ್ದಂತೆ ಹನುಮನ ಭಕ್ತರು ಜೈ ಮಾರುತಿ ವೀರಾಂಜನೆಯ, ಜೈ ಜೈ ಜೈ ಹನುಮಂತ ಜೈಕಾರಗಳನ್ನು ಕೂಗುತ್ತ ಕೇಸರಿ ಧ್ವಜಗಳನ್ನು ಬೀಸುತ್ತ ಕುಣಿದು ಕುಪ್ಪಳಿಸಿದರು.

ಸಂಸದ ಯದುವೀರ್ ಒಡೆಯರ್ ಮೆರವಣಿಗೆ ಯಲ್ಲಿ ಹನುಮ ಭಕ್ತರೊಂದಿಗೆ ರಂಗನಾಥ ಬಡಾವಣೆಯಿಂದ ಹೊರಟು ಕಲ್ಲುಣಿಕೆ ಸರ್ಕಲ್‌ವರೆಗೆ ಬಂದು ಅನ್ಯ ಕೆಲಸದ ನಿಮಿತ್ತ ಹೊರ ಹೋದರು. ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಕೂಡ ದೇವಿ ಪ್ರಸಾದ ಹೋಟೇಲ್‌ವರೆಗೆ ಬಂದು ಅಲ್ಲಿಂದ ನಿರ್ಗಮಿಸಿದರು. ಅದರೆ ಹಾಲಿ ಶಾಸಕ ಹರೀಶ್‌ಗೌಡ ಹನುಮ ಭಕ್ತರೊಂದಿಗೆ ಹನುಮ ಜಯಂತಿಗೆ ಮೆರಗುನೀಡಿದರು.

ಹನುಮಂತೋತ್ಸವದ ಮೆರವಣಿಗೆಯಲ್ಲಿ ಮಾರುತಿಯೊಂದಿಗೆ ದತ್ತಾತ್ರೇಯ, ಜೈ ಮಾರುತಿ, ರಾಮ ಲಕ್ಷಣ, ಸೀತೆ, ಆರು ಅಡಿ ಎತ್ತರದ ಕಂಚಿನ ಅಂಜನೇಯ ವಿಗ್ರಹ, ತ್ರಿಶೂಲ, ಗದೆ, ಅಂಜನೇಯ ಮೂರ್ತಿ, ಹೀಗೆ ಒಟ್ಟು 13 ಸ್ತಬ್ಧ ಚಿತ್ರಗಳು ಮೆರವಣಿಗೆಗೆ ಮೆರಗು ತಂದವು. ಜಾನಪದ ತಂಡಗಳಾದ ವೀರಗಾಸೆ, ಮಂಗಳೂರಿನ ಗೊಂಬೆಗಳು, ನವಿಲು ಕುಣಿತ, ವಿವಿಧ ಜಾನಪದ ತಂಡಗಳು ಮೆರವಣಿಗೆಯಲ್ಲಿ ಸಾಗಿ ಎಲ್ಲರ ಗಮನ ಸೆಳೆದವರು. ಅಲ್ಲದೆ ನಗಾರಿ, ಡೋಲು, ಮಂಗಳವಾದ್ಯ, ತಂಡದವರಿಂದ ಕುಣಿತ ಸೇರಿದಂತೆ ನಾಲ್ಕೈದು ವಾದ್ಯ ತಂಡಗಳು, ಜಾನಪದ ತಂಡಗಳು, ಕೇರಳದ ಚಂಡೆ ವಾದನ, ಎಚ್.ಡಿ.ಕೋಟೆ ಬಸವನಮಟ್ಟ ಹಾಡಿಯ ಸೋಲಿಗರ ಕುಣಿತ, ಗಾವಡ ಗೆರೆಯ ಯುವಕ ತಂಡದಿಂದ ತಮಟೆ ವಾದನ, ನಗರದ ಸರಸ್ವತಿಪುರಂನ ಡೊಳ್ಳುಕುಣಿತ, ವೀರಗಾಸೆ ಕುಣಿತ, ಕೀಲು ಕುದುರೆಗಳು, ಮಂಗಳವಾದ್ಯ ಶಿವ ಜ್ಯೋತಿ ನಗರದ ಗರಡಿ ಮನೆ, ಕಲ್ಲುಣಿಕೆ ನಾಯಕರ ಗರಡಿಮನೆ, ಮುತ್ತು ಮಾರಮ್ಮ ಗರಡಿಮನೆಯ ಆಂಜನೇಯ ಮೂರ್ತಿಗಳು, ದತ್ತಾತ್ರೇಯ ಮೂರ್ತಿ ಮುಂತಾದವುಗಳು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದವು. ಅಲ್ಲದೆ ಮೆರವಣಿಗೆ ಯುದ್ದಕ್ಕೂ ಹಲವಾರು ಕಡೆಗಳಲ್ಲಿ ಪಾನಕ ಮಜ್ಜಿಗೆ, ಲಘು ಉಪಹಾರ, ಬಾಳೆ ಹಣ್ಣು, ಬಿಸ್ಕತ್, ಸಿಹಿ ತಿಂಡಿಗಳನ್ನು ದಣಿದ ಹನುಮ ಭಕ್ತರಿಗೆ ವಿತರಿಸಲಾಗುತ್ತಿತ್ತು. ರಂಗನಾಥ ಬಡಾವಣೆಯಿಂದ ಹೊರಟ ಮೆರವಣಿಗೆ ಕಲ್ಲುಣಿಕೆ ಸರ್ಕಲ್ ಮೂಲಕ, ಶಬರಿ ಸರ್ಕಲ್, ಹಳೆ ಸೇತುವೆ, ಮೂಲಕ ಸಂವಿಧಾನ ಸರ್ಕಲ್, ಎಸ್.ಜೆ ರಸ್ತೆ ಮೂಲಕ ಕೋಟೆ ಸರ್ಕಲ್ ನಂತರ ಜೆ.ಎಲ್.ಬಿ ರಸ್ತೆ ಮೂಲಕ ಲಕ್ಷ್ಮಿ ವಿಲಾಸ್ ಸರ್ಕಲ್, ಅಲ್ಲಿಂದ ಬಜಾರ್ ರಸ್ತೆ ಮೂಲಕ ಅಕ್ಷಯ ಭಂಡಾರ್, ಹೊಸ ಬಸ್ ನಿಲ್ದಾಣ ಕಲ್ಪತರು ವೃತ, ಮಾರುತಿ ಪೆಟ್ರೋಲ್ ಬಂಕ್ ಮೂಲಕ ಆಂಜನೇಯಸ್ವಾಮಿ ದೇವಸ್ಥಾನವನ್ನು ತಲುಪಿತು.

ಕಲ್ಲುಣಿಕೆ ಸರ್ಕಲ್ ಶಾಲೆ ಬಳಿ ಕಲ್ಲುಣಿಕೆ ಯುವಜನರ ತಂಡದವರಿಂದ ಹನುಮ ಭಕ್ತರಿಗೆ ಲಘು ಉಪಹಾರ ನೀಡಲಾಯಿತು ಹಾಗೆ ಹೊಟೇಲ್ ದೇವಿ ಪ್ರಸಾದ್ ಬಳಿ ಮಜ್ಜಿಗೆ–ಪಾನಕವನ್ನು ನೀಡಿ ಹನುಮ ಭಕ್ತರಿಗೆ ಬಿಸಿಲಿನ ದಣಿವಾರಿಸಿ ದರು. ಅದೇ ರೀತಿ ಗೋಕುಲ್ ರಸ್ತೆಯ ವರ್ತಕರು ಮತ್ತು ನಿವಾಸಿಗಳು ನವ ನಗರ ಬ್ಯಾಂಕ್ ಬಳಿ ಸಾವಿರಾರು ಹನುಮ ಭಕ್ತರಿಗೆ ಲಘು ಉಪಹಾರ ಮತ್ತು ಸಿಹಿ ನೀಡಿದರು. ಜೆ.ಎಲ್.ಬಿ ರಸ್ತೆಯಲ್ಲಿನ ಚರ್ಚ್ ಬಳಿ ಮಾರ್ನಿಂಗ್ ವಾಕರ್ಸ್ ತಂಡದಿಂದ ಹನುಮ ಭಕ್ತರಿಗೆ ಲಘು ಉಪಹಾರ ಮತ್ತು ಬಾಳೆ ಹಣ್ಣುಗಳನ್ನು ನೀಡಲಾಯಿತು.

ಇಂದು ಹನುಮಂತೋತ್ಸವ ಅದ್ದೂರಿ ಮೆರವಣಿಗೆ ಹಿನ್ನೆಲೆಯಲ್ಲಿ ಎಸ್.ಜೆ ರಸ್ತೆ, ಜೆ.ಎಲ್.ಬಿ ರಸ್ತೆ ಬಜಾರ್ ರಸ್ತೆ ಸೇರಿದಂತೆ ಮೆರವಣಿಗೆ ಸಾಗುವ ಮಾರ್ಗದ ವಾಣಿಜ್ಯೋದ್ಯಮಿಗಳು ತಮ್ಮ ಅಂಗಡಿ ಮುಂಗಟುಗಳನ್ನು ಬಂದ್ ಮಾಡಿ ಸಹಕಾರ ನೀಡಿದರು. ಎಲ್ಲರೂ ಜಾತಿ ಮತ ಧರ್ಮ ಮರೆತು ಸಹಕಾರ ನೀಡಿ ಸೌಹಾರ್ದತೆ ಮೆರೆದರು.

ಮೆರವಣಿಗೆಯಲ್ಲಿ ತಾಲೂಕು ಹನುಮಂತೋತ್ಸವ ಸಮಿತಿ ಅಧ್ಯಕ್ಷ ವಿ.ಎನ್.ದಾಸ್, ಶ್ರೀರಾಮಸೇನೆಯ ಜಿಲ್ಲಾಧ್ಯಕ್ಷ ಅನಿಲ್‌ಕುಮಾರ್, ಉಪಾಧ್ಯಕ್ಷ ಎಚ್. ವೈ ಮಹದೇವ್, ಕಾರ್ಯದರ್ಶಿ ಗಿರೀಶ್, ಮುಖಂಡ ನಾಡಪ್ಪನಹಳ್ಳಿ ರಾಜು, ಉದ್ಯಮಿ ಕೃಷ್ಣ ಸತೀಶ್ ಪಾಪಣ್ಣ, ಬಿ.ಎಸ್. ಯೋಗಾನಂದ ಕುಮಾರ್, ಸುಧಾಕರ್, ಗಣೇಶ್ ಕುಮಾರಸ್ವಾಮಿ, ನಗರಸಭಾ ಸದಸ್ಯರಾದ ವಿವೇಕಾನಂದ, ಹರೀಶ್, ಕೃಷ್ಣರಾಜಗುಪ್ತ, ಗಿರೀಶ್, ಅನೀಲ್, ಚಂದ್ರಮೌಳಿ, ಜಗದೀಶ್, ಪಿ.ಆರ್. ರಾಚಪ್ಪ, ರಘುವೀರ್, ಸುಧಾಕರ್, ದೀಪು, ಪೂರ್ವಜ್, ಯೋಗೇಶ್, ರಾಮಣ್ಣ, ಸೇರಿದಂತೆ ನೂರಾರು ಮುಖಂಡರು ಭಾಗವಹಿಸಿದರು.

ಮೆರವಣಿಗೆಯ ಬಂದೋ ಬಸ್ತ್ ಉಸ್ತುವಾರಿಯನ್ನು ಎಸ್‌ಪಿ ವಿಷ್ಣುವರ್ಧನ್ ವಹಿಸಿದ್ದು, ಎಎಸ್‌ಪಿಗಳಾದ ನಾಗೇಶ್, ಎಂ.ಎಸ್. ಶಶಿಧರ್, ಮಲೀಕ್ ಡಿವೈಎಸ್‌ಪಿ ರವಿ, ಮಹೇಶ್ ಸೇರಿದಂತೆ ಹಲವು ಅಧಿಕಾರಿಗಳು ಯಶಸ್ವಿ ಶಾಂತಿಯುತ ಮೆರವಣಿಗೆಗೆ ಕಾರಣೀಭೂತರಾದರು.

ಕುಣಿದು ಕುಪ್ಪಳಿಸಿದ ಶಾಸಕರು



ಉತ್ಸಾಹಿ ಯುವ ನಾಯಕ ಶಾಸಕ ಹರೀಶ್ ಗೌಡ ನಾನು ನಿಮ್ಮೊಡನೆ ಇರುವೆ ಎಂದು ಹನುಮ ಭಕ್ತ ರನ್ನು ಹುರಿದುಂಬಿಸಿ ವಾದ್ಯಗಳ ಸದ್ದಿಗೆ ಹೆಜ್ಜೆ ಹಾಕಿ ಕುಣಿದು ಕುಪ್ಪಳಿಸಿದರು. ಇದರಿಂದ ಯುವಕರಲ್ಲಿ ಉತ್ಸಾಹ ಹೆಚ್ಚಾಗಿ ಹನುಮನಿಗೆ ಜೈಕಾರಗಳನ್ನು ಕೂಗಿ ಡಿಜೆ ಧ್ವನಿವರ್ಧಕದ ಸಂಗೀತ ಹಾಡುಗಳಿಗೆ ಹೆಜ್ಜೆ ಹಾಕುತ್ತ ಕುಣಿದು ಕುಪ್ಪಳಿಸಿದರು. ಅಲ್ಲದೆ ಯುವತಿಯರ ಗುಂಪುಗಳು ಸಹ ಹನುಮನ ಡಿಜೆ ಹಾಡಿಗೆ ಕುಣಿದು ಕುಪ್ಪಳಿಸಿತು. ಹನುಮ ಭಕ್ತರೊಂದಿಗೆ ಶಾಸಕ ಹರೀಶ್ ಗೌಡರು ನಗರದ ಸಂವಿಧಾನ ಸರ್ಕಲ್, ಕೋಟೆ ಸರ್ಕಲ್, ಜೆಎಲ್‌ಬಿ ರಸ್ತೆ, ಲಕ್ಷ್ಮಿ ವಿಲಾಸ್ ಸರ್ಕಲ್ ಹಾಗೂ ಬಜಾರ್ ರಸ್ತೆಯಲ್ಲಿ ಹನುಮ ಭಕ್ತರೊಂದಿಗೆ ತಾವು ಕುಣಿದು ಕುಪ್ಪಳಿಸಿದರು ಅಲ್ಲದೆ ಕೊನೆಯವರೆಗೂ ಶಾಸಕರು ಹನುಮ ಭಕ್ತರೊಂದಿಗೆ ಸಾಗಿದರು.

3 ವರ್ಷ ಜೈಲು

ವಿಧೇಯಕವನ್ನು ಮಂಡಿಸಲಾಗುತ್ತದೆ.

3 ವರ್ಷದವರೆಗೆ ಜೈಲು: ದ್ವೇಷ ಭಾಷಣದ ಮೂಲಕ ಧಾರ್ಮಿಕ, ಜನಾಂಗೀಯ, ಜಾತಿ ಅಥವಾ ಸಮುದಾಯ, ಲಿಂಗ, ಲೈಂಗಿಕ ದೃಷ್ಟಿಕೋನ, ಜನ್ಮಸ್ಥಳ, ಭಾಷೆ, ನಿವಾಸ, ಅಂಗವೈಕಲ್ಯ, ಬುಡಕಟ್ಟು ಕುರಿತು ಯಾವುದೇ ವ್ಯಕ್ತಿಗೆ ಹಾನಿ ಮಾಡುವ ಅಥವಾ ದ್ವೇಷವನ್ನು ಉತ್ತೇಜಿಸುವ ಅಥವಾ ಪ್ರಚಾರ ಮಾಡುವ ವ್ಯಕ್ತಿ ಅಥವಾ ಗುಂಪಿಗೆ ಮೂರು ವರ್ಷಗಳ ಕಾಲ ಶಿಕ್ಷೆ ವಿಧಿಸಬಹುದು ಅಥವಾ 5 ಸಾವಿರ ರೂ. ದಂಡದ ಜತೆಗೆ ಶಿಕ್ಷೆ ವಿಧಿಸಬಹುದು ಎಂದು ವಿಧೇಯಕದಲ್ಲಿ ಪ್ರಸ್ತಾಪಿಸಲಾಗಿದೆ

ಉಪ ಲೋಕಾಯುಕ್ತ ನ್ಯಾ. ಬಿ.ವೀರಪ್ಪ

ಮಾಡಲು ಸಾಮೂಹಿಕ ಪ್ರಯತ್ನಗಳು ಅಗತ್ಯ ಎಂದರು. ಕರ್ನಾಟಕವು ಶೇ. 63 ರಷ್ಟು ಭ್ರಷ್ಟಾಚಾರವನ್ನು ಎದುರಿಸುತ್ತಿದ್ದು, ಪ್ರತಿ ಪ್ರಮುಖ ಸರ್ಕಾರಿ ಇಲಾಖೆಯೂ ತೀವ್ರವಾಗಿ ಪರಿಣಾಮ ಬೀರಿದೆ. ಕರ್ನಾಟಕದ ಸರ್ಕಾರಿ ಇಲಾಖೆಗಳಲ್ಲಿ ವ್ಯಾಪಕವಾದ ಭ್ರಷ್ಟಾಚಾರ ನಡೆಯುತ್ತಿದ್ದು, ರಾಜ್ಯವನ್ನು ಭಾರತದ ಐದು ಅತ್ಯಂತ ಭ್ರಷ್ಟ ರಾಜ್ಯಗಳಲ್ಲಿ ಇರಿಸಿದ್ದಾರೆ ಎಂದು ನ್ಯಾಬಿ ವೀರಪ್ಪ ಹೇಳಿದರು. ಕರ್ನಾಟಕವು ಗಂಭೀರ ಭ್ರಷ್ಟಾಚಾರ ಬಿಕ್ಕಟ್ಟನ್ನು ಎದುರಿಸುತ್ತಲೇ ಇದೆ. ಅಂದಾಜು ಉಪ ಲೋಕಾಯುಕ್ತರಾಗಿ ಅಧಿಕಾರ ವಹಿಸಿಕೊಂಡ ನಂತರ ನೇರವಾಗಿ ಗಮನಿಸಿದ ಪ್ರಕರಣಗಳು ಮತ್ತು ಮಾದರಿಗಳನ್ನು ಆಧರಿಸಿದೆ. ಬಹು ಸರ್ಕಾರಿ ಇಲಾಖೆಗಳಲ್ಲಿ ದುಷ್ಕೃತ್ಯದ ಆತಂಕಕಾರಿ ಮಟ್ಟಕ್ಕೇರಿದ್ದು, ಆಸ್ಪತ್ರೆಗಳು, ಶಾಲೆಗಳು ಮತ್ತು ಹಾಸ್ಟೆಲ್‌ಗಳು ಸೇರಿದಂತೆ ಬಹುತೇಕ ಎಲ್ಲಾ ಆಡಳಿತ ವಲಯಗಳಲ್ಲಿ ಭ್ರಷ್ಟಾಚಾರ ತುಂಬಿ ತುಳುಕುತ್ತಿದೆ ಎಂದರು.

ಕರ್ನಾಟಕದ ಪರಿಸ್ಥಿತಿಯನ್ನು ನೆರೆಯ ಕೇರಳದೊಂದಿಗೆ ಹೋಲಿಸಿದ ನ್ಯಾಯಮೂರ್ತಿ ವೀರಪ್ಪ ಅಲ್ಲಿ ಭ್ರಷ್ಟಾಚಾರ ಸುಮಾರು ಶೇ.10ರಷ್ಟಿದೆ ಎಂದು ವರದಿಯಾಗಿದೆ, ಇದು ದಕ್ಷಿಣದ ಎರಡು ರಾಜ್ಯಗಳ ನಡುವಿನ ಆಡಳಿತ ಪದ್ಧತಿಗಳಲ್ಲಿ ತೀವ್ರ ವ್ಯತ್ಯಾಸವನ್ನು ಸೂಚಿಸುತ್ತದೆ. ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ, ರಾಷ್ಟ್ರೀಯ ನಿಯತಕಾಲಿಕವು ಕರ್ನಾಟಕವನ್ನು ದೇಶದ ನಂ. 1 ಅತ್ಯಂತ ಭ್ರಷ್ಟ ರಾಜ್ಯವೆಂದು ಶ್ರೇಣೀಕರಿಸಿತ್ತು. ಆ ಸಮಯದಲ್ಲಿ ಈ ವರದಿಯು ವ್ಯಾಪಕ ಚರ್ಚೆಗೆ ಕಾರಣವಾಗಿತ್ತು. ಪ್ರಸ್ತುತ ಅಂಕಿ–ಅಂಶಗಳು, ಆಡಳಿತದಲ್ಲಿ ಬದಲಾವಣೆಗಳ ಹೊರತಾಗಿಯೂ ಈ ವಿಷಯವು ತೀವ್ರವಾಗಿ ಉಳಿದಿದೆ ಎಂದು ಅವರು ಹೇಳಿದರು.

ನಿಯಂತ್ರಿಸದಿದ್ದರೆ ಕರ್ನಾಟಕದ ಭವಿಷ್ಯಕ್ಕೆ ಅಪಾಯ: ಗಂಭೀರ ಪರಿಣಾಮಗಳ ಬಗ್ಗೆ ಎಚ್ಚರಿಸುತ್ತಾ, ಭ್ರಷ್ಟಾಚಾರವನ್ನು ತಕ್ಷಣ ನಿಯಂತ್ರಿಸದಿದ್ದರೆ, ರಾಜ್ಯವು ಭವಿಷ್ಯದಲ್ಲಿ ಗಂಭೀರ ಅಪಾಯಗಳನ್ನು ಎದುರಿಸಬಹುದು. ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡುವುದು ಕೇವಲ ಒಂದು ಸಂಸ್ಥೆಯ ಜವಾಬ್ದಾರಿಯಲ್ಲ, ಸಾಮೂಹಿಕ ಸಾಮಾಜಿಕ ಕರ್ತವ್ಯವಾಗಿದೆ ಎಂದು ಅವರು ಒತ್ತಿ ಹೇಳಿದರು.

ಸಮಾಜವನ್ನು ಸುಧಾರಿಸಲು ಮತ್ತು ಸಂಸ್ಥೆಗಳಲ್ಲಿ ಸಾರ್ವಜನಿಕ ನಂಬಿಕೆ ಯನ್ನು ಪುನಃಸ್ಥಾಪಿಸಲು ಈ ಕಾರ್ಯಾಚರಣೆಯಲ್ಲಿ ಸಕ್ರಿಯವಾಗಿ ಭಾಗವಹಿಸಲು ಅವರು ಕಾನೂನು ಸಮುದಾಯವನ್ನು ಒತ್ತಾಯಿಸಿದರು.

ಡಿ.18 ಗಡುವು ನೀಡಿದ ಕೋರ್ಟ್

ಎಸ್‌ಪಿಪಿ ಗೈರು: ವಿಚಾರಣೆ ವೇಳೆ ವಿಶೇಷ ಸಾರ್ವಜನಿಕ ಅಭಿಯೋಜಕ ವೆಂಕಟೇಶ್ ಅರಬಟ್ಟಿ ಅವರ ಜ್ಯೂನಿಯರ್ ವಕೀಲರು ಹಾಜರಾಗಿ, ಅಂತಿಮ ವರದಿ ಸಲ್ಲಿಸಲು ಸಮಯ ಬೇಕೆಂದು ಮನವಿ ಮಾಡಿದರು. ಇದಕ್ಕೆ ಖಡಕ್ ಆಗಿ ಉತ್ತರಿಸಿದ ಜಡ್ಜ್ ಇನ್ನೂ ಸಮಯ ನೀಡಲು ಸಾಧ್ಯವಿಲ್ಲ. ನೀವು ಅಂತಿಮ ವರದಿ ಹಾಕ್ತೀರಾ ಇಲ್ಲವೋ? ಎಂದರು. ವಿಚಾರಣೆ ಸಮಯದಲ್ಲಿ ಎಸ್‌ಪಿಪಿ ವೆಂಕಟೇಶ್ ಅರಬಟ್ಟಿ ಗೈರು ಹಾಜರಾಗಿದ್ದನ್ನು ಕೋರ್ಟ್ ಗಮನಿಸಿ, ಅವರ ಹಾಜರಿಗೆ ಸೂಚಿಸಿ ಕೆಲ ಕಾಲ ವಿಚಾರಣೆ ಮುಂದೂಡಿತು.


ಮತ್ತೆ ವಿಚಾರಣೆ ಆರಂಭವಾದಾಗ ಡಿ.8ರ ಒಳಗೆ ಅಂತಿಮ ವರದಿ ಸಲ್ಲಿಸುವುದಾಗಿ ಎಸ್‌ಪಿಪಿ ಕೋರ್ಟ್‌ಗೆ ತಿಳಿಸಿದರು. ಆದರೆ ನ್ಯಾಯಾಲಯವು ಡಿಸೆಂಬರ್ 18ರೊಳಗೆ ಅಂತಿಮ ವರದಿ ನಿಸ್ಸಂದೇಹವಾಗಿ ಸಲ್ಲಿಸಬೇಕೆಂದು ಸೂಚಿಸಿದೆ. ಬಿ.ರಿಪೋರ್ಟ್ ಪ್ರಶ್ನಿಸಿದ್ದ ಅರ್ಜಿಗೆ ಸಂಬಂಧಿಸಿದಂತೆ ಯಾವುದೇ ಮಾಹಿತಿ ನೀಡುವುದಿದ್ದರೆ ಡಿ. 16ರ ಒಳಗೆ ಸಲ್ಲಿಸುವಂತೆ ದೂರುದಾರರು, ಲೋಕಾಯುಕ್ತ ಹಾಗೂ ಇಡಿಗೆ ಸೂಚನೆ ನೀಡಿದೆ.

ಖುದ್ದು ಸ್ವಾಗತಿಸಿದ ಪ್ರಧಾನಿ ಮೋದಿ

ಪುಟಿನ್ ಪ್ರಯಾಣಿಸಿದರು. ಕಳೆದ ವರ್ಷ ಜುಲೈನಲ್ಲಿ ಪ್ರಧಾನಿ ಮೋದಿ ಅವರು ಮಾಸ್ಕೋಗೆ ಭೇಟಿ ನೀಡಿದ್ದಾಗ ರಷ್ಯಾ ಅಧ್ಯಕ್ಷ ಪುಟಿನ್ ಅವರು ನೀಡಿದ ಆತಿಥ್ಯಕ್ಕೆ ಪ್ರತಿಯಾಗಿ ಪ್ರಧಾನಿ ಮೋದಿ ಅವರು ಇಂದು ರಾತ್ರಿ ಅವರಿಗೆ ಖಾಸಗಿ ಭೋಜನ ಕೂಟ ಆಯೋಜಿಸಿದ್ದಾರೆ. ಪುಟಿನ್ ಅವರು ಇಂದು ರಾತ್ರಿ ದೆಹಲಿಯ ಐಟಿಸಿ ಮೌರ್ಯದಲ್ಲಿ ಉಳಿದುಕೊಂಡಿದ್ದು, ಹೀಗಾಗಿ, ಅಲ್ಲಿ ಭಾರೀ ಬಿಗಿ ಭದ್ರತಾ ವ್ಯವಸ್ಥೆಗಳನ್ನು ಮಾಡಲಾಗಿದೆ. ಅವರು ನಾಳೆ (ಶುಕ್ರವಾರ) ಬೆಳಗ್ಗೆ ರಾಜ್‌ಘಾಟ್‌ಗೆ ಭೇಟಿ ನೀಡಿ ಮಹಾತ್ಮ ಗಾಂಧಿಯವರಿಗೆ ಗೌರವ ಸಲ್ಲಿಸಲಿದ್ದಾರೆ.

ಭಾರತ–ರಷ್ಯಾ 23ನೇ ವಾರ್ಷಿಕ ಶೃಂಗಸಭೆಯು ಶುಕ್ರವಾರ ನಡೆಯಲಿದ್ದು, ಅದಕ್ಕೂ ಮೊದಲು ರಾಷ್ಟ್ರಪತಿ ಭವನದಲ್ಲಿ ಔಪಚಾರಿಕ ಸ್ವಾಗತ, ನಂತರ ಭಾರತದ ಉನ್ನತ ಮಟ್ಟದ ದ್ವಿಪಕ್ಷೀಯ ಕಾರ್ಯಕ್ರಮಗಳಿಗೆ ಸಾಂಪ್ರದಾಯಿಕ ಸ್ಥಳವಾದ ಹೈದರಾಬಾದ್ ಹೌಸ್‌ನಲ್ಲಿ ಮಾತುಕತೆ ನಡೆಯಲಿದೆ. ಎಕ್ಸ್‌ನಲ್ಲಿ ಪೋಸ್ಟ್ ಹಂಚಿಕೊಂಡಿರುವ ಪ್ರಧಾನಿ ಮೋದಿ, ನನ್ನ ಸ್ನೇಹಿತ ಅಧ್ಯಕ್ಷ ಪುಟಿನ್ ಅವರನ್ನು ಭಾರತಕ್ಕೆ ಸ್ವಾಗತಿಸಲು ಸಂತೋಷವಾಗುತ್ತಿದೆ. ಇಂದು ಸಂಜೆ ಮತ್ತು ನಾಳೆ ನಮ್ಮ ಸಂವಾದಗಳನ್ನು ಎದುರು ನೋಡುತ್ತಿದ್ದೇನೆ. ಭಾರತ–ರಷ್ಯಾ ಸ್ನೇಹವು ಕಾಲಾತೀತವಾಗಿದ್ದು, ಇದು ನಮ್ಮ ಜನರಿಗೆ ಹೆಚ್ಚಿನ ಪ್ರಯೋಜನವನ್ನು ನೀಡಲಿದೆ ಎಂದು ತಿಳಿಸಿದ್ದಾರೆ.

ಮೈಸೂರು ಪ್ರವಾಸೋದ್ಯಮದ ಪ್ರಮುಖ ಆಕರ್ಷಣೆ ಕಬಿನಿ, ಬಂಡೀಪುರ ಅರಣ್ಯದ ಸಫಾರಿ ಪುನರಾರಂಭಿಸಿ



● ಹೋಟೆಲ್ ಮಾಲೀಕರ ಸಂಘ; ಮೈಸೂರು ಟ್ರಾವಲ್ಸ್ ಅಸೋಸಿಯೇಷನ್ ಸರ್ಕಾರಕ್ಕೆ ಆಗ್ರಹ ● ಸಫಾರಿಯೇ ಈ ಭಾಗದ ಪ್ರವಾಸೋದ್ಯಮದ ಪ್ರಮುಖ ವಹಿವಾಟು ● ಮಾನವ–ವನ್ಯಜೀವಿ ಸಂಘರ್ಷಕ್ಕೂ ಸಫಾರಿಗೂ ಎತ್ತಣ ಸಂಬಂಧ



ಪತ್ರಿಕಾಗೋಷ್ಠಿ ಬಳಿಕ ಮೈಸೂರಿನ ಹೊಸ ಜಿಲ್ಲಾಧಿಕಾರಿಗಳ ಕಚೇರಿಗೆ ಭೇಟಿ ನೀಡಿ ಸಫಾರಿ ಪುನರಾರಂಭಿಸಲು ಕೋರಿ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜ್ ಅವರಿಗೆ ಮನವಿ ಸಲ್ಲಿಸಲಾಯಿತು. ಚಿತ್ರದಲ್ಲಿ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಮೈಸೂರು ಟ್ರಾವಲ್ಸ್ ಅಸೋಸಿಯೇಷನ್ ಅಧ್ಯಕ್ಷ ಬಿ.ಎಸ್.ಪ್ರಶಾಂತ್, ಸ್ಕಾಲ್ ಇಂಟರ್‌ನ್ಯಾಷನಲ್ ಮೈಸೂರು ಘಟಕದ ಅಧ್ಯಕ್ಷ ಸಿ.ಎ.ಜಯಕುಮಾರ್ ಸೇರಿದಂತೆ ನಾಗರಹೊಳೆ–ಬಂಡೀಪುರ ಸಫಾರಿ ಅವಲಂಬಿತ ಉದ್ಯೋಗಸ್ಥರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಡಿ.4(ಪಿಎಂ)– ಮೈಸೂರಿನ ಪ್ರವಾಸೋದ್ಯಮಕ್ಕೆ ಪ್ರಮುಖ ವಹಿವಾಟು ಆಗಿರುವ ಹಿನ್ನೆಲೆಯಲ್ಲಿ ಕಬಿನಿ (ನಾಗರಹೊಳೆ) ಮತ್ತು ಬಂಡೀಪುರ ಅರಣ್ಯ ವ್ಯಾಪ್ತಿಯಲ್ಲಿ ಸಫಾರಿ ಪುನರಾರಂಭಿಸಬೇಕು ಎಂದು ಹೋಟೆಲ್ ಮಾಲೀಕರ ಸಂಘ, ಮೈಸೂರು ಟ್ರಾವಲ್ಸ್ ಅಸೋಸಿಯೇಷನ್, ಸ್ಕಾಲ್ ಇಂಟರ್‌ನ್ಯಾಷನಲ್ ಮೈಸೂರು ಘಟಕದ ಪದಾಧಿಕಾರಿಗಳು, ನಾಗರಹೊಳೆ ಮತ್ತು ಬಂಡೀಪುರ ಸಫಾರಿ ಅವಲಂಬಿತ ಉದ್ಯೋಗಸ್ಥರು ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಮೈಸೂರಿನ ಸಂದೇಶ್ ದಿ ಪ್ರಿನ್ಸ್ ಹೋಟೆಲ್‌ನಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಕಟ್ಟುನಿಟ್ಟಾದ ಹೊಸ ಎಸ್‌ಓಪಿ (ಪ್ರಾಮಾಣಿತ ಕಾರ್ಯಾಚರಣೆ ವಿಧಾನ) ರೂಪಿಸಿ ಸಫಾರಿ ಆರಂಭಕ್ಕೆ ಅವಕಾಶ ಕಲ್ಪಿಸಬೇಕು ಎಂದು ಆಗ್ರಹಿಸಿದರು. ಮೈಸೂರು ಟ್ರಾವಲ್ಸ್ ಅಸೋಸಿಯೇಷನ್ ಅಧ್ಯಕ್ಷ ಬಿ.ಎಸ್.ಪ್ರಶಾಂತ್ ಮಾತನಾಡಿ, ಸದರಿ ಅರಣ್ಯ ವ್ಯಾಪ್ತಿಯ ಸಫಾರಿಯು ಮೈಸೂರಿನ ಪ್ರವಾಸೋದ್ಯಮಕ್ಕೆ ಪ್ರಮುಖ ವಹಿವಾಟು. ಇಂತಹ ಸನ್ನಿವೇಶದಲ್ಲಿ ಸಫಾರಿ ರದ್ದುಗೊಳಿಸಿ ಈಗಾಗಲೇ ತಿಂಗಳಾಗುತ್ತಿದೆ. ಈ ನಡುವೆ ಪುನರಾರಂಭಕ್ಕೆ ಅರಣ್ಯ ಸಚಿವರಿಗೆ ಮನವಿ ಸಲ್ಲಿಸಿದ್ದೇವೆ. ಮುಖ್ಯಮಂತ್ರಿಗಳು, ಜಿಲ್ಲಾ ಉಸ್ತುವಾರಿ ಸಚಿವರ ಗಮನಕ್ಕೂ ತರಲಾಗಿದೆ ಎಂದು ತಿಳಿಸಿದರು.

ಇದು ವರ್ಷಾಂತ್ಯವಾಗಿದ್ದು, ಅತೀ ಹೆಚ್ಚು ವಿದೇಶಿಗರು ಪ್ರವಾಸಕ್ಕೆಂದು ಈಗಾಗಲೇ ಭಾರತಕ್ಕೆ ಆಗಮಿಸಿದ್ದಾರೆ. ಅವರು ಮುಂದಿನ ದಿನಗಳಲ್ಲಿ ಬಂಡೀಪುರ, ನಾಗರಹೊಳೆಗೆ ಭೇಟಿ ನೀಡಲಿದ್ದಾರೆ. ಸಫಾರಿ ರದ್ದುಗೊಳಿಸಿದ ಹಿನ್ನೆಲೆಯಲ್ಲಿ ಅವರ ಇಡೀ ಪ್ರಯಾಣ ತಲೆಕೆಳಗಾಗಿದೆ ಹೀಗಾಗಿ ವಿದೇಶಗಳ ಟ್ರಾವೆಲ್ ಏಜೆನ್ಸಿಯವರು ನಮ್ಮ ಬಗ್ಗೆ ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಸಫಾರಿ ರದ್ದುಗೊಳಿಸಿರುವುದು ಕರ್ನಾಟಕದ ಪ್ರವಾಸೋದ್ಯಮಕ್ಕೆ ದೊಡ್ಡ ಪೆಟ್ಟು ನೀಡಿದೆ. ಇಡೀ ಜಗತ್ತಿನಲ್ಲಿ ಇರುವ ಎಲ್ಲಾ ಅರಣ್ಯದಂಚಿನ ಪ್ರದೇಶದಲ್ಲಿ ಮಾನವ–ವನ್ಯಜೀವಿ ಸಂಘರ್ಷದ ಬಗ್ಗೆ ಅವಲೋಕಿಸಿದ್ದು, ಇದಕ್ಕೆ ಹೋಲಿಸಿದರೆ ನಮ್ಮಲ್ಲಿ ಈ ರೀತಿಯ ಸಂಘರ್ಷ ಕಡಿಮೆ. ಇಂತಹ ಸಂಘರ್ಷಕ್ಕೆ ಅಂತ್ಯ ಹಾಡುವುದು ಸಾಧ್ಯವಿಲ್ಲ. ಬೆಮೆಲ್ ಆವರಣದಲ್ಲಿ ಹುಲಿ ಕಾಣಿಸಿಕೊಂಡಿತ್ತು. ಹಾಗೆಂದ ಮಾತ್ರಕ್ಕೆ ಬೆಮೆಲ್‌ನ ಬಾಗಿಲು ಹಾಕಿಸಲು ಸಾಧ್ಯವೇ? ಆದರೆ ಪ್ರವಾಸೋದ್ಯಮದ ಮೇಲೆ ವ್ಯತಿರಿಕ್ತ ಪರಿಣಾಮ ಉಂಟು ಮಾಡುವಂತೆ ನಿಯಂತ್ರಣ ಕ್ರಮ ಕೈಗೊಳ್ಳಲು ಹೆಚ್ಚಿನ ಉತ್ಸುಕತೆ ತೋರಲಾಗುತ್ತಿದೆ. ಇದು ಸರಿಯಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ನನ್ನ ಪ್ರಕಾರ ಇದನ್ನು ವಾರದಲ್ಲಿ ಪರಿಹರಿಸಬಹುದಿತ್ತು. ಆದರೆ ಗಂಭೀರ ಚಿಂತನೆ ಇಲ್ಲದ ಕಾರಣ ಸಮಸ್ಯೆಗೆ ಪರಿಹಾರ ದೊರೆಯುತ್ತಿಲ್ಲ. ಕೂಡಲೇ ಸಫಾರಿ ಪುನರಾರಂಭಿಸಬೇಕು ಎಂದು ಒತ್ತಾಯಿಸಿದರು.

ಖಾಸಗಿ ರೆಸಾರ್ಟ್ ಪ್ರಕೃತಿ ತಜ್ಞ ಚಾಮರಾಜ್ ಮಾತನಾಡಿ, ನಾನು ಕೂಡ ಒಬ್ಬ ರೈತನ ಮಗ. ಕಳೆದ 25 ವರ್ಷಗಳಿಂದ ನಾಗರಹೊಳೆ ಅರಣ್ಯ ಪ್ರದೇಶದಲ್ಲಿ ಪ್ರಕೃತಿ ತಜ್ಞನಾಗಿ ಕಾರ್ಯನಿರ್ವಹಿಸುತ್ತಿದ್ದೇನೆ. ರೆಸಾರ್ಟ್ ಅವಲಂಬಿಸಿ ಬಹಳಷ್ಟು ಕುಟುಂಬಗಳು ಜೀವನ ನಡೆಸುತ್ತಿವೆ. ರೈತರ ಮಕ್ಕಳು ಕೂಡ ರೆಸಾರ್ಟ್‌ಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಸಫಾರಿ ಪುನರಾರಂಭಿಸಲು ಸರ್ಕಾರ ಮುಂದಾಗಬೇಕು. ಈ ನಿಟ್ಟಿನಲ್ಲಿ ಸ್ಥಳೀಯ ಶಾಸಕರು ಗಮನ ಹರಿಸಬೇಕು ಎಂದರು.

ಕಬಿನಿ ವ್ಯಾಪ್ತಿಯ ರೆಸಾರ್ಟ್‌ವೊಂದರ ಪ್ರತಿನಿಧಿ ರಾಜೇಶ್ ಮಾತನಾಡಿ, ರೈತರಿಗೆ ತೊಂದರೆ ಆಗಿರುವುದಕ್ಕೆ ನಮಗೂ ವಿಷಾದವಿದೆ. ಈ ವ್ಯಾಪ್ತಿಯಲ್ಲಿ ವನ್ಯಜೀವಿ–ಮಾನವ ಸಂಘರ್ಷ ತಡೆಗಟ್ಟುವ ಕುರಿತು ತಜ್ಞರಿಂದ ಅಧ್ಯಯನ ನಡೆಸಲು ಸರ್ಕಾರ ಕ್ರಮ ವಹಿಸಬೇಕು. ಆ ಮೂಲಕ ರೈತರು, ರೆಸಾರ್ಟ್‌ಗಳಿಗೂ ತೊಂದರೆ ಆಗದಂತೆ ಪರಿಹಾರ ಕಂಡುಹಿಡಿಯಬೇಕು ಎಂದು ಮನವಿ ಮಾಡಿದರು. ಸ್ಕಾಲ್ ಇಂಟರ್‌ನ್ಯಾಷನಲ್ ಮೈಸೂರು ಅಧ್ಯಕ್ಷ ಸಿ.ಎ.ಜಯಕುಮಾರ್, ಸಫಾರಿ ಅವಲಂಬಿತ ಉದ್ಯೋಗಸ್ಥರಾದ ತಮ್ಮೇಗೌಡ, ಪುಟ್ಟಸ್ವಾಮಿ, ಸ್ವಾಮಿ ಮತ್ತಿತರರು ಗೋಷ್ಠಿಯಲ್ಲಿದ್ದರು.

ಬೇಕಿದ್ದರೆ ಕಟ್ಟುನಿಟ್ಟಿನ ನಿಯಮ ರೂಪಿಸಲಿ

ಮೈಸೂರು,ಡಿ.4(ಪಿಎಂ)– ಸಫಾರಿ ಸಂಬಂಧ ಕಟ್ಟುನಿಟ್ಟಿನಿಂದ ಕೂಡಿದ ಹೊಸ ಎಸ್‌ಓಪಿ (ಪ್ರಮಾಣಿತ ಕಾರ್ಯಾಚರಣೆ ವಿಧಾನ) ರೂಪಿಸಿ, ಸಫಾರಿ ರದ್ದು ಕೈಬಿಡಲಿ ಎಂದು ಬಿ.ಎಸ್.ಪ್ರಶಾಂತ್ ಅಭಿಪ್ರಾಯಪಟ್ಟರು. ಒಂದು ದಿನಕ್ಕೆ ಇಷ್ಟೇ ವಾಹನ ಅರಣ್ಯದೊಳಗೆ ಹೋಗಬೇಕೆಂದು ನಿಯಮ ರೂಪಿಸಲಿ. ಒಂದು ರೆಸಾರ್ಟ್‌ನ ಇಂತಿಷ್ಟೇ ಜನಕ್ಕೆ ಅವಕಾಶ, ಇಷ್ಟು ರೂಮ್‌ಗಳಿಗೆ ಇಷ್ಟೇ ಸಫಾರಿ ಟ್ರಿಪ್ ನೀಡಲಾಗುತ್ತದೆ ಎಂಬಿತ್ಯಾದಿಯಾಗಿ ನಿಯಮಾವಳಿ ರೂಪಿಸಲಿ ಎಂದರು.

ಮಾಧ್ಯಮದವರ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ ಅವರು, ಅಕ್ರಮ ರೆಸಾರ್ಟ್‌ಗಳ ಬಗ್ಗೆ ನಮಗೆ ಗೊತ್ತಿಲ್ಲ. ಒಂದು ವೇಳೆ ಅಕ್ರಮವಾದರೆ ಸರ್ಕಾರದ ಇಲಾಖೆಗಳು ಕಟ್ಟಡ ನಿರ್ಮಾಣವಾಗುವ ತನಕ ಸುಮ್ಮನೆ ಇರಲು ಸಾಧ್ಯವೇ? ಊಹಾಪೋಹ ಆರೋಪ ಸರಿಯಲ್ಲ. ಯಾವುದೇ ಅಕ್ರಮ ಇದ್ದರೂ ಕ್ರಮ ವಹಿಸಲಿ. ಪ್ರವಾಸೋದ್ಯಮಕ್ಕೆ ಹಿನ್ನಡೆ ಉಂಟಾಗಬಾರದು ಎಂಬುದಷ್ಟೇ ನಮ್ಮ ಕಾಳಜಿ. ಸಿ.ನಾರಾಯಣಗೌಡ, ಜಯಕುಮಾರ್ ಸೇರಿದಂತೆ ನಮ್ಮ ಯಾರದ್ದೂ ರೆಸಾರ್ಟ್ ಇಲ್ಲ. ಪ್ರವಾಸೋದ್ಯಮ ಬೆಳವಣಿಗೆ ಕಾಣಬೇಕು ಎಂಬುದು ನಮ್ಮ ಕಾಳಜಿ. ರೈತರು ಸೇರಿದಂತೆ ಎಲ್ಲಾ ಪಾಲುದಾರರ ಜೊತೆ ಸರ್ಕಾರ ಚರ್ಚಿಸಿ ಸಮಸ್ಯೆ ಬಗೆಹರಿಸಬೇಕು ಎಂದು ಒತ್ತಾಯಿಸಿದರು.

ಈಗಾಗಲೇ ಸೊರಗಿರುವ ಪ್ರವಾಸೋದ್ಯಮಕ್ಕೆ ಮತ್ತೊಂದು ಬರೆ ಸಲ್ಲದು: ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಮಾತನಾಡಿ, ಒಟ್ಟಾರೆ ಅರಣ್ಯ ಪ್ರದೇಶದ ಪೈಕಿ ಸಫಾರಿಗೆ ಬಳಕೆಯಾಗುತ್ತಿರುವುದು ಕೇವಲ 50ರಿಂದ 75 ಕಿ.ಮೀ. ಮಾತ್ರ ರೆಸಾರ್ಟ್‌ಗಳಲ್ಲಿ ಕೆಲಸ ಮಾಡುವವರ ಪೈಕಿ ಶೇ.90ರಷ್ಟು ರೈತರ ಮಕ್ಕಳೇ. ಹೆಚ್‌ಡಿ ಕೋಟೆ, ಗುಂಡ್ಲುಪೇಟೆ ಶಾಸಕರು ಸಫಾರಿ ಆರಂಭ ಸಂಬಂಧ ಗಮನ ನೀಡಬೇಕು. ಅರಣ್ಯ ಸಚಿವರು ಏಕಾಏಕಿ ಏಕೆ ಸಫಾರಿ ರದ್ದುಪಡಿಸಿದರೋ ಗೊತ್ತಿಲ್ಲ. ಹಿಂದೆ ಸಣ್ಣ ವಿಚಾರಕ್ಕೂ ಪಾಲುದಾರರ ಸಭೆ ಕರೆದು ನಿರ್ಧಾರ ಮಾಡುತ್ತಿದ್ದರು. ಮೈಸೂರು ಭಾಗದವರೇ ಆದ ಮುಖ್ಯಮಂತ್ರಿಗಳು ಆದಷ್ಟು ಶೀಘ್ರದಲ್ಲಿ ಸಫಾರಿ ರದ್ದು ಕೈಬಿಡಲು ಗಮನ ನೀಡಬೇಕು ಎಂದು ಆಗ್ರಹಿಸಿದರು.

ಮೈಸೂರಿನಲ್ಲಿ ಪ್ರವಾಸಿಗರ ಸಂಖ್ಯೆ ತೀರಾ ಕಡಿಮೆಯಾಗಿದೆ. ಒಂದೊಂದು ಹೋಟೆಲ್‌ನಲ್ಲಿ ಕೇವಲ 2 ರೂಮ್ ಬುಕ್ ಆಗುತ್ತಿಲ್ಲ. ಮೈಸೂರಿನಲ್ಲಿ ಒಟ್ಟಾರೆ ಹತ್ತೂವರೆ ಸಾವಿರ ರೂಮ್‌ಗಳು ಇದ್ದು, ದಿನಕ್ಕೆ ಕೇವಲ ಎರಡೂವರೆ ಸಾವಿರ ರೂಮ್‌ಗಳು ಬುಕ್ ಆಗುತ್ತಿಲ್ಲ. ಸಫಾರಿ ರದ್ದುಗೊಂಡ ಪರಿಣಾಮ ಇದು. ಏಕೆಂದರೆ ಮೈಸೂರಿಗೆ ಬರುವ ಪ್ರವಾಸಿಗರು ಅರಮನೆ, ಮೃಗಾಲಯ, ಚಾಮುಂಡಿಬೆಟ್ಟ ನೋಡಿದ ಬಳಿಕ ಸಫಾರಿಯತ್ತ ಮುಖ ಮಾಡುವುದು ವಾಡಿಕೆ ಎಂದರು.

ಬೆಮೆಲ್ ಕಾಂಪೌಂಡ್ ಹಾರಿ ಹೊರ ಹೋಗುತ್ತಿರುವ ಹುಲಿಯ ಚಿತ್ರಣ ಸಾಮಾಜಿಕ ಜಾಲತಾಣದಲ್ಲಿ ವೈರಲ್

ಮೈಸೂರು,ಡಿ.4– ಮೈಸೂರಿನ ಬಿಇಎಂಎಲ್(ಬೆಮೆಲ್) ಕಾರ್ಖಾನೆಯ ಆವರಣದಿಂದ ಹುಲಿ ಯೊಂದು ಕಾಂಪೌಂಡ್ ಹಾರಿ ಹೊರ ಹೋಗಿರುವ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ಬೆಮೆಲ್ ಆವರಣದಲ್ಲಿ ಹುಲಿ ಸಂಚರಿಸುತ್ತಿದೆ ಎನ್ನಲಾದ ವಿಡಿಯೋ ತುಣುಕೊಂದು ನ.29ರಂದು ವೈರಲ್ ಆಗಿತ್ತು. ಈ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆಯವರು 10 ಕ್ಯಾಮರಾ ಟ್ರ್ಯಾಪ್ ಅಳವಡಿಸಿ, ಎರಡು ಬೋನ್‌ಗಳನ್ನಿಟ್ಟು ಕೂಂಬಿಂಗ್ ನಡೆಸುತ್ತಿದ್ದಾರೆ. ಆದರೆ ಈವರೆಗೂ ಹುಲಿಯ ಸುಳಿವು ಸಿಕ್ಕಿಲ್ಲ. ಆದರೆ ಭದ್ರತಾ ಸಿಬ್ಬಂದಿ ಮೊಬೈಲ್ ಹಾಗೂ ಕಾರ್ಖಾನೆ ಆವರಣದ ಸಿಸಿ ಕ್ಯಾಮರಾದಲ್ಲಿ ಸೆರೆಯಾದ ದೃಶ್ಯಾವಳಿ ಗಮನಿಸಿದ ಅರಣ್ಯ ಇಲಾಖೆ ಅಧಿಕಾರಿಗಳು ಹುಲಿಯು ಕಾಂಪೌಂಡ್ ಹಾರಿ ಇಲವಾಲದ ಅಲೋಕ ಅಥವಾ ಅರಬಿತಿಟ್ಟು ಅರಣ್ಯ ಪ್ರದೇಶಕ್ಕೆ ತೆರಳಿರಬಹುದು ಎಂದು ಶಂಕಿಸಿದ್ದರು.

ಈ ನಡುವೆ ಹುಲಿಯೊಂದು ಕಾಂಪೌಂಡ್ ಮೇಲೆ ಹಾರಿ, ಕಾಂಪೌಂಡ್ ಮೇಲಿನ ಮುಳ್ಳುತಂತಿ ನಡುವೆ ನುಸುಳಿ ಕೆಳಗೆ ಜಿಗಿದಿರುವ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಕಾಡಂಚಿನ ಗ್ರಾಮಗಳ ಕೃಷಿ ಭೂಮಿಯಲ್ಲಿ ಉಪಟಳ ನೀಡುತ್ತಿದ್ದ ಹುಲಿಗಳು, ನಗರ ಪ್ರದೇಶ ಹೊಕ್ಕಿವೆ ಎಂದು ನೆಟ್ಟಿಗರು ತೀವ್ರ ಆತಂಕ ವ್ಯಕ್ತಪಡಿಸಿದ್ದಾರೆ. ಬೆಮೆಲ್ ಆವರಣ ಹಾಗೂ ಸುತ್ತಮುತ್ತಲ ಪ್ರದೇಶದಲ್ಲಿ ಹುಲಿ ಚಲನವಲನದ ಬಗ್ಗೆ ಅರಣ್ಯ ಇಲಾಖೆ ಅಧಿಕಾರಿಗಳು ಸ್ಪಷ್ಟನೆ ನೀಡಬೇಕೆಂದು ಒತ್ತಾಯಿಸಿದ್ದಾರೆ.

ಭೂ ಸುಧಾರಣೆ, ಜಾನುವಾರು ಹತ್ಯೆ ನಿಷೇಧ ಕಾಯ್ದೆಯನ್ನು ಬೆಳಗಾವಿ ಚಳಿಗಾಲದ ಅಧಿವೇಶನದಲ್ಲಿ ಹಿಂಪಡೆಯಿರಿ



ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿದರು.

ರಾಜ್ಯ ರೈತ ಸಂಘ ಆಗ್ರಹ

ಮೈಸೂರು, ಡಿ.4(ಜಿಎ)–ಭೂ ಸುಧಾರಣೆ ಮತ್ತು ಜಾನುವಾರು ಹತ್ಯೆ ನಿಷೇಧ ಕಾಯ್ದೆಯನ್ನು ಬೆಳಗಾವಿಯಲ್ಲಿ ನಡೆಯುವ ಚಳಿಗಾಲ ಅಧಿವೇಶನದಲ್ಲಿ ಹಿಂಪಡೆದುಕೊಳ್ಳಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ರಾಜ್ಯ ಸರ್ಕಾರವನ್ನು ಆಗ್ರಹಿಸಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2020ರಲ್ಲಿ ಜಾರಿಗೆ ಬಂದಿರುವ ಕರ್ನಾಟಕ ಭೂ ಸುಧಾರಣೆ ಕಾಯ್ದೆ (ತಿದ್ದುಪಡಿ) ಮತ್ತು ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಕಾಯ್ದೆ ರೈತರಿಗೆ ಮಾರಕವಾಗಿದೆ. 2023ರಲ್ಲೇ ಉಭಯ ಕಾಯ್ದೆ ವಾಪಸ್ ಪಡೆದುಕೊಳ್ಳುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೀಡಿದ್ದ ಭರವಸೆ ಹುಸಿಯಾಗಿದೆ ಎಂದರು.

ರೈತರ ವಿರೋಧಿಯಾಗಿರುವ ಕೃಷಿ ಮಾರುಕಟ್ಟೆ ರಾಷ್ಟ್ರೀಯ ಚೌಕಟ್ಟು ಕಾಯ್ದೆ, ಬೀಜ ಕಾಯ್ದೆ, ವಿದ್ಯುಚ್ಛಕ್ತಿ ಕಾಯ್ದೆಗಳನ್ನು ಕೇಂದ್ರ ಸರ್ಕಾರ ತಕ್ಷಣ ಹಿಂಪಡೆದುಕೊಳ್ಳಬೇಕು. ಸಿದ್ದರಾಮಯ್ಯ ಸರ್ಕಾರ ಸಹ ರಾಜ್ಯದಲ್ಲಿ ಈ ಮೂರು ಕಾಯ್ದೆಗಳನ್ನು ತಿರಸ್ಕರಿಸುವ ಕುರಿತು ಬೆಳಗಾವಿ ಅಧಿವೇಶನದಲ್ಲಿ ನಿರ್ಣಯ ತೆಗೆದುಕೊಳ್ಳಬೇಕು ಎಂದು ಅವರು ಆಗ್ರಹಿಸಿದರು

ಭೂ ಸುಧಾರಣೆ ಕಾಯ್ದೆ ತಿದ್ದುಪಡಿ ಬಳಿಕ ಗುಜರಾತ್ ಮೂಲದ ಬಂಡವಾಳಶಾಹಿಗಳು ಮೈಸೂರು, ಚಾಮರಾಜನಗರ ಜಿಲ್ಲೆ ಸೇರಿದಂತೆ ರಾಜ್ಯದ ಮೇಲೆ ದಾಳಿ ಇಟ್ಟು ಕೃಷಿ ಭೂಮಿ ಕಬಳಿಸುತ್ತಿದ್ದಾರೆ. 1 ಎಕರೆ ಕೃಷಿ ಭೂಮಿ 10 ಲಕ್ಷ ರೂ.ನಿಂದ 1 ಕೋಟಿ ರೂ.ಗೆ ಏರಿಕೆಯಾಗಿದೆ. ಒಂದು ಗುಂಟೆ ಜಾಗವನ್ನೂ ಖರೀದಿಸಲು ರೈತರಿಗೆ ಆಗುತ್ತಿಲ್ಲ. ಸದ್ಯಕ್ಕೆ ಇರುವ ಭೂಮಿಯನ್ನೂ ಉಳಿಸಿಕೊಳ್ಳಲಾಗುತ್ತಿಲ್ಲ. ಇದಕ್ಕೆ ತಡೆವೊಡ್ಡಬೇಕು. ಭೂ ಉಪಯೋಗ ನೀತಿ ರೂಪಿಸಬೇಕು ಎಂದು ಒತ್ತಾಯಿಸಿದರು.

ವಿದ್ಯುತ್ ಅಕ್ರಮ ಸಂಪರ್ಕವನ್ನು ಸಕ್ರಮ ಗೊಳಿಸಿಕೊಳ್ಳಲು ಮತ್ತು ಹೊಸ ಸಂಪರ್ಕ ಪಡೆಯಲು ರೈತರೇ ವೆಚ್ಚ ಭರಿಸಬೇಕೆಂಬ ನೀತಿಯನ್ನು ಬದಲಾಯಿಸಿ ಹಳೇ ಪದ್ಧತಿಯನ್ನು ಮುಂದುವರಿಸಬೇಕು. ಯಾವುದೇ ಕಾರಣಕ್ಕೂ ಕೃಷಿ ಪಂಪ್‌ಸೆಟ್‌ಗಳಿಗೆ ಸ್ಮಾರ್ಟ್ ಮೀಟರ್ ಅಳವಡಿಕೆ ಮಾಡಬಾರದು. ಸಂಪರ್ಕವನ್ನೂ ಕಡಿತಗೊಳಿಸಬಾರದು ಎಂದು ಆಗ್ರಹಿಸಿದರು.

ರಾಜ್ಯ ಸರ್ಕಾರವು ಕಬ್ಬಿಗೆ ಎಸ್‌ಎಪಿ ನೀಡುವ ಕಾನೂನು ಜಾರಿಗೆ ತರಬೇಕು. ಕೃಷಿ ಬೆಲೆ ಆಯೋಗವನ್ನು ಶಾಶ್ವತ ಆಯೋಗವನ್ನಾಗಿ ರೂಪಿಸಿ ಅದಕ್ಕೆ ಶಾಸನಾತ್ಮಕ ಅಧಿಕಾರ ನೀಡಬೇಕು. ಖರೀದಿ ಕೇಂದ್ರ ತೆರೆದು ಮೆಕ್ಕೆಜೋಳ, ಭತ್ತವನ್ನು ಎಂಎಸ್‌ಪಿ ದರದಲ್ಲಿ ಕೊಳ್ಳಬೇಕು. ವನ್ಯಪ್ರಾಣಿ–ಮಾನವ ಸಂಘರ್ಷ ತಡೆಗಟ್ಟಬೇಕು. ಕಾಡುಪ್ರಾಣಿಗಳಿಂದ ಪ್ರಾಣ ಹಾನಿಯಾದ ಕುಟುಂಬಗಳಿಗೆ 50 ಲಕ್ಷ ರೂ. ಪರಿಹಾರ ನೀಡಬೇಕು. ಕುಟುಂಬಕ್ಕೊಂದು ಉದ್ಯೋಗ, ಉಚಿತವಾಗಿ ಮಕ್ಕಳಿಗೆ ವಿದ್ಯಾಭ್ಯಾಸ ನೀಡಿ, ಆ ಕುಟುಂಬ ಸಾಲ ಮನ್ನಾ, ಗಾಯಗೊಂಡವರಿಗೆ ಸೂಕ್ತ ಪರಿಹಾರ ನೀಡಬೇಕು ಎಂದು ಬಡಗಲಪುರ ನಾಗೇಂದ್ರ ಆಗ್ರಹಿಸಿದರು.

ಕೇಂದ್ರ ಸರ್ಕಾರವು ಲಿಖಿತ ಭರವಸೆ ನೀಡಿರುವಂತೆ ಎಲ್ಲಾ ಕೃಷಿ ಉತ್ಪನ್ನಗಳಿಗೆ ಡಾ.ಎಂ.ಎಸ್.ಸ್ವಾಮಿನಾಥನ್ ವರದಿಯ ಅನ್ವಯ ಕನಿಷ್ಠ ಬೆಂಬಲ ಬೆಲೆ ಖಾತ್ರಿ ನೀಡುವ ಕಾನೂನು ಜಾರಿ ಮಾಡಬೇಕು. ಮುಸುಕಿನ ಜೋಳ, ಸಕ್ಕರೆ, ಹಾಲು ಉಪಉತ್ಪನ್ನ, ಹತ್ತಿ, ಎಣ್ಣೆಯನ್ನು ಆಮದು ಮಾಡಿಕೊಳ್ಳುವುದನ್ನು ತಕ್ಷಣ ನಿಲ್ಲಿಸಬೇಕು. ಕೇಂದ್ರ ಇಂಡೋ–ಅಮೆರಿಕಾ ವಾಣಿಜ್ಯ ಒಪ್ಪಂದಕ್ಕೆ ಸಹಿ ಹಾಕಬಾರದು. ರೈತರ ಸಂಪೂರ್ಣ ಸಾಲವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರವು ಶೇ.50ರ ಅನುಪಾತದಲ್ಲಿ ಮನ್ನಾ ಮಾಡಬೇಕು. ಸರಳ ಸಾಲದ ನೀತಿ ರೂಪಿಸಿ ಶೂನ್ಯಬಡ್ಡಿಯಲ್ಲಿ ಸಾಲ ನೀಡಬೇಕು. ತಂಬಾಕು ಬೆಳೆಗೆ ಕೆಜಿಗೆ ಸರಾಸರಿ 400 ರೂ. ಬೆಲೆ ದೊರಕಿಸಿಕೊಡಬೇಕು ಎಂದು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಹೊಸಕೋಟೆ ಬಸವರಾಜು, ಹೊಸೂರು ಕುಮಾರ್ ರೈತ ಮುಖಂಡರು ಉಪಸ್ಥಿತರಿದ್ದರು.

ಬೃಹತ್ ರೈತ ಸಮಾವೇಶ

"ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ರೈತ ವಿರೋಧಿ ನೀತಿ ಖಂಡಿಸಿ, ರೈತಪರ ಯೋಜನೆ ರೂಪಿಸಲು ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘದಿಂದ ಬೃಹತ್ ಜಿಲ್ಲಾ ರೈತ ಸಮಾವೇಶವನ್ನು ಡಿ.23ರಂದು ಬೆಳಗ್ಗೆ 11 ಗಂಟೆಗೆ ಮೈಸೂರು ತಾಲೂಕಿನ ಇಲವಾಲ ಗ್ರಾಮದ ಸಂತೆ ಮೈದಾನದಲ್ಲಿ ಆಯೋಜಿಸಲಾಗಿದೆ. ಎರಡು ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣಗೊಂಡಿರುವ ರೈತ ನಾಯಕ ದಿ.ಕೆ.ಎಸ್.ಪುಟ್ಟಣ್ಣಯ್ಯ ಅವರ ಕಂಚಿನ ಪ್ರತಿಮೆಯನ್ನು ಶಾಸಕ ಜಿ.ಟಿ.ದೇವೇಗೌಡ ಅನಾವರಣಗೊಳಿಸಲಿದ್ದಾರೆ. 76ನೇ ಜನ್ಮ ದಿನಾಚರಣೆ, ರೈತ ದಿನಾಚರಣೆ ಸಂದರ್ಭದಲ್ಲಿ ನಡೆಯಲಿದೆ. **–ಬಡಗಲಪುರ ನಾಗೇಂದ್ರ**

ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ದತ್ತ ಜಯಂತಿ; ಶ್ರೀಗಳಿಂದ ದತ್ತಾತ್ರೇಯಸ್ವಾಮಿ ಮೂರ್ತಿಗೆ ತೈಲಾಭಿಷೇಕ





ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ದತ್ತಪೀಠದಲ್ಲಿ ದತ್ತಾತ್ರೇಯ ಸ್ವಾಮಿ ಮೂರ್ತಿಗೆ ತೈಲಾಭಿಷೇಕ ಸೇರಿದಂತೆ ವಿಶೇಷ ಪೂಜೆ ಸಲ್ಲಿಸಿದರು. ಬಲಚಿತ್ರದಲ್ಲಿ ಫೆಬ್ರವರಿ 14ರಂದು ಮಹಾರಾಜ ಕಾಲೇಜು ಮೈದಾನದಲ್ಲಿ ಹಮ್ಮಿಕೊಂಡಿರುವ ಬೃಹತ್ ಹನುಮಾನ್ ಚಾಲೀಸಾ ಪಾರಾಯಣದ ಪೋಸ್ಟರ್ ಅನ್ನು ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಬಿಡುಗಡೆ ಮಾಡಿದರು.

ಮೈಸೂರು,ಡಿ.4(ಎಂಟಿವೈ)– ಮೈಸೂರಿನ ಅವಧೂತ ದತ್ತ ಪೀಠದಲ್ಲಿ ಲೋಕ ಕಲ್ಯಾಣಾರ್ಥ ನಡೆಯುತ್ತಿರುವ ದತ್ತ ಜಯಂತಿ ಕಾರ್ಯಕ್ರಮದಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ದತ್ತಾತ್ರೇಯ ಸ್ವಾಮಿ ಮೂರ್ತಿಗೆ ತೈಲಾಭಿಷೇಕ ಸೇರಿದಂತೆ ವಿಶೇಷ ಪೂಜೆ ಸಲ್ಲಿಸಿದರು.

ಮೈಸೂರಿನ ಊಟಿ ರಸ್ತೆಯಲ್ಲಿರುವ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ನಡೆದ ದತ್ತ ಜಯಂತಿ ಕಾರ್ಯಕ್ರಮದಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರು ದತ್ತಾತ್ರೇಯಮೂರ್ತಿಗೆ ವಿಶೇಷ ಪೂಜೆ ಸಲ್ಲಿಸಿದ ಬಳಿಕ ಆಶೀರ್ವಚನ ನೀಡಿ, ದತ್ತಾತ್ರೇಯ ಮಹಾವಿಷ್ಣುವಿನ ಆರನೇ ಅವತಾರ. ಅತ್ರಿ ಮತ್ತು ಅನುಸೂಯೆಯರಿಗೆ ಮಗನಾಗಿ ಬಂದವನು. ಆ ಕಾಲದ ರಾಜರು ಮತ್ತು ಜನಸಾಮಾನ್ಯರಿಗೆ ಅದ್ಭುತವಾದ ಬೋಧನೆಗಳನ್ನು ಮಾಡಿದ ಜ್ಞಾನಸಾಗರ ಈ ದತ್ತಾತ್ರೇಯ. ಅವರು ಕೇವಲ ದತ್ತ ಪರಂಪರೆಗೆ ಸೀಮಿತವಾಗಿಲ್ಲ, ಅವರು ವೇದ, ಮಹಾಭಾರತ ಮತ್ತು ರಾಮಾಯಣ ಕಾಲಘಟ್ಟದಲ್ಲೂ ಇದ್ದರು. ದತ್ತಾತ್ರೇಯರು ಸಂಚಾರಿಗಳು, ರಾಮಾಯಣದಲ್ಲಿ ರಾಮನಿಗೆ ದತ್ತಾತ್ರೇಯರು ಕಾಣಿಸಿಕೊಂಡಿದ್ದರು ಎಂದರು.

ರಾಮ ವನವಾಸಕ್ಕೆ ಹೋದಾಗ ಮೊದಲು ಅತ್ರಿ ಮಹರ್ಷಿಗಳ ಆಶ್ರಮಕ್ಕೆ ಹೋಗಿದ್ದರು. ಅಲ್ಲಿ ಅತಿಥಿ ಸತ್ಕಾರದ ನಂತರ ಅನುಸೂಯೆ, ಸೀತೆಗೆ ದಿವ್ಯವಾದ ಆಭರಣ ಮತ್ತು ಬಾಡದ ಹೂಗಳನ್ನು ನೀಡುತ್ತಾಳೆ. ಆಗ ರಾಮ, 'ಎಲ್ಲವನ್ನೂ ತ್ಯಜಿಸಿ ಬಂದ ನಮಗೆ ಈ ಒಡವೆಗಳು ಏಕೆ?' ಎಂದು ಪ್ರಶ್ನಿಸುತ್ತಾನೆ. ಅದಕ್ಕೆ ಉತ್ತರಿಸಿದ ಅನುಸೂಯೆ, 'ಇವು ಸಾಮಾನ್ಯ ಒಡವೆಗಳಲ್ಲ, ಅರಣ್ಯದಲ್ಲಿ ಸಂಚರಿಸುವಾಗ ಇವುಗಳ ಅವಶ್ಯಕತೆ ಇದೆ' ಎಂದು ಹೇಳುತ್ತಾಳೆ. ಮುಂದೆ ರಾವಣ ಸೀತೆಯನ್ನು ಅಪಹರಿಸಿಕೊಂಡು ಹೋಗುವಾಗ, ಸೀತೆ ಇದೇ ಆಭರಣಗಳನ್ನು ಗುರುತುಗಾಗಿ ಕೆಳಗೆ ಎಸೆಯುತ್ತಾಳೆ. ರಾಮ ಮತ್ತು ಲಕ್ಷ್ಮಣರು ಸೀತೆಯನ್ನು ಹುಡುಕುವಾಗ ಈ ದಿವ್ಯ ಆಭರಣಗಳೇ ದಾರಿದೀಪವಾಗುತ್ತವೆ. ಇದು ದತ್ತಾತ್ರೇಯರ ಕೃಪೆಯಿಂದಲೇ ನಡೆದಿದ್ದು ಎಂದು ವಿವರಿಸಿದರು. ಈ ಸಂದರ್ಭದಲ್ಲಿ ಗಣಪತಿ ಆಶ್ರಮದ ಕಿರಿಯ ಸ್ವಾಮೀಜಿ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ, ಉದ್ಯಮಿ ರಾಮೇಗೌಡ ಉಪಸ್ಥಿತರಿದ್ದರು.

ಮೈಸೂರು ಮಣಿಪಾಲ್ ಆಸ್ಪತ್ರೆಯಲ್ಲಿ 93 ವರ್ಷದ ವೃದ್ಧ ಮಹಿಳೆಗೆ ಗರ್ಭಕೋಶದ ಫೈಬ್ರಾಯ್ಡ್ ಗಂಟಿನ ಶಸ್ತ್ರಚಿಕಿತ್ಸೆ



ಗರ್ಭಕೋಶದಲ್ಲಿ ದೊಡ್ಡ ಗಾತ್ರದ ಫೈಬ್ರಾಯ್ಡ್ ಗಂಟಿನ ಸಮಸ್ಯೆಯಿಂದ ಬಳಲುತ್ತಿದ್ದ 93 ವರ್ಷದ ವೃದ್ಧ ಮಹಿಳೆಯೊಬ್ಬರಿಗೆ ಮೈಸೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಯಶಸ್ವಿ ಶಸ್ತ್ರ ಚಿಕಿತ್ಸೆ ನಡೆಸಲಾಗಿದೆ.

ಸವಾಲಿನ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿಸಿದ ವೈದ್ಯರು

ಮೈಸೂರು, ಡಿ.4(ಎಂಕೆ)– ಮೈಸೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಗರ್ಭ ಕೋಶದಲ್ಲಿ ದೊಡ್ಡ ಗಾತ್ರದ ಫೈಬ್ರಾಯ್ಡ್ ಗಂಟಿನ (Symptomatic Fibroid Uterus) ಸಮಸ್ಯೆಯಿಂದ ಬಳಲುತ್ತಿದ್ದ 93 ವರ್ಷದ ವೃದ್ಧ ಮಹಿಳೆಯೊಬ್ಬರಿಗೆ ಯಶಸ್ವಿ ಶಸ್ತ್ರ ಚಿಕಿತ್ಸೆ ನಡೆಸಲಾಗಿದೆ ಎಂದು ಆಸ್ಪತ್ರೆಯ ಸ್ತ್ರೀರೋಗ ತಜ್ಞೆ ಡಾ.ಕೆ.ಜಿ.ಅಮೂಲ್ಯ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಗುರುವಾರ ಸುದ್ದಿ ಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, 30ರ ಆಸು–ಪಾಸಿನಲ್ಲಿರುವ ಮಹಿಳೆಯರ ಗರ್ಭಕೋಶದಲ್ಲಿ ಫೈಬ್ರಾಯ್ಡ್ ಗಂಟುಗಳಿರುವುದು ಸಾಮಾನ್ಯ ಆದರೆ, ವಯಸ್ಸಾದವರಲ್ಲಿ ಕಂಡು ಬಂದಿರುವುದು ಅಪರೂಪವಾಗಿದೆ. ಕೆಲವು ದಿನಗಳಿಂದ ನಿರಂತರ ಹೊಟ್ಟೆ ನೋವು ಮತ್ತು ಅಸ್ವಸ್ಥತೆಯಿಂದ ಬಳಲುತ್ತಿದ್ದ 93 ವರ್ಷ ವಯಸ್ಸಿನ ಶ್ರೀಮತಿ ಆಲಿಸ್ ಜೋಸೆಫ್ ಅವರಿಗೆ ಯಶಸ್ವಿ ಶಸ್ತ್ರಚಿಕಿತ್ಸೆ ಎಂದರು.

ಶ್ರೀಮತಿ ಆಲಿಸ್ ಜೋಸೆಫ್ ಅವರು ಆಸ್ಪತ್ರೆಗೆ ಭೇಟಿ ನೀಡಿ, ಸಮಸ್ಯೆ ತಿಳಿಸಿದಾಗ ಅವರನ್ನು ತಪಾಸಣೆಗೊಳಪಡಿಸಿ ಗರ್ಭಕೋಶದಲ್ಲಿ ದೊಡ್ಡ ಗಾತ್ರದ (ಫೈಬ್ರಾಯ್ಡ್) ಗಂಟು ಇರುವುದನ್ನು ಆಸ್ಪತ್ರೆಯ ಹಿರಿಯ ವೈದ್ಯ ಡಾ.ಸತೀಶ್ ಕುಮಾರ್ ಪತ್ತೆ ಹಚ್ಚಿದರು. ನಂತರ ಅವರಿಗೆ ಸೂಕ್ತ ಚಿಕಿತ್ಸೆ ನೀಡುತ್ತಾ ಶಸ್ತ್ರ ಚಿಕಿತ್ಸೆಗೆ ಒಳಪಡಿಸಲಾಯಿತು. ವೃದ್ಧಾಪ್ಯದಲ್ಲಿ ಇಂತಹ ಪ್ರಕರಣಗಳು ಅಪರೂಪ. ಅಲ್ಲದೆ ಹೃದಯ ಸಂಬಂಧಿ ಕಾಯಿಲೆಯಿಂದಲೂ ಬಳಲುತ್ತಿದ್ದ ಅವರಿಗೆ ಶಸ್ತ್ರಚಿಕಿತ್ಸೆ ನಡೆಸುವುದು ಸವಾಲಿನ ಕೆಲಸವಾಗಿತ್ತು ಎಂದು ತಿಳಿಸಿದರು.

ಶಸ್ತ್ರ ಚಿಕಿತ್ಸೆಗೆ ಮುನ್ನ, ಹೃದಯ, ಶ್ವಾಸಕೋಶ, ಮೂತ್ರಪಿಂಡ ಮತ್ತು ಅರವಳಿಕೆ ತಜ್ಞರಿಂದ ಕೂಲಂಕುಷವಾಗಿ ಪರಿಶೀಲಿಸಿ ತಂಡದ ಸಮನ್ವಯದೊಂದಿಗೆ ಸಂಪೂರ್ಣ ಸಿದ್ಧತೆಗಳನ್ನು ನಡೆಸಲಾಯಿತು. ಅಂತಿಮವಾಗಿ, ಅತ್ಯಂತ ಎಚ್ಚರಿಕೆಯಿಂದ ಶಸ್ತ್ರ ಚಿಕಿತ್ಸೆಯನ್ನು ಯಶಸ್ವಿಯಾಗಿ ನಡೆಸಿ ಗಂಟನ್ನು ತೆಗೆದುಹಾಕಲಾಯಿತು ಎಂದರು.

ಚಿಕಿತ್ಸೆಗೊಳಪಟ್ಟ ಶ್ರೀಮತಿ ಆಲಿಸ್ ಜೋಸೆಫ್ ಅವರ ಪುತ್ರಿ ಲಿರಿಖಿ ಸಿರಿ ಯಾಕ್ ಮಾತನಾಡಿ, ನಮ್ಮ ತಾಯಿಯ ವಯಸ್ಸಿನ ಕಾರಣ ನಮಗೆ ಭಯವಿತ್ತು. ಆದರೆ, ವೈದ್ಯರು ನಮಗೆ ಧೈರ್ಯ ತುಂಬಿ, ಪ್ರತಿಯೊಂದು ಹಂತದಲ್ಲೂ ಮಾಹಿತಿ ನೀಡಿದರು. ಅವರ ಕಾಳಜಿಯಿಂದಾಗಿ ಅಮ್ಮ ಈಗ ಚೇತರಿಸಿಕೊಂಡು ಮತ್ತೆ ತಮ್ಮ ದೈನಂದಿನ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದಾರೆ ಎಂದು ಸಂತಸ ಹಂಚಿಕೊಂಡರು.

ನಾಳೆ ಡಾ.ಅಂಬೇಡ್ಕರ್ 69ನೇ ಮಹಾ ಪರಿನಿಬ್ಬಾಣ ದಿನ

ಅಶೋಕಪುರಂ ಪ್ರಮುಖ ರಸ್ತೆಗಳಲ್ಲಿ ಮೇಣದ ಬತ್ತಿ ಮೆರವಣಿಗೆ



ಮೈಸೂರು, ಡಿ.4(ಜಿಎ)–ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ 69ನೇ ಮಹಾ ಪರಿನಿಬ್ಬಾಣ ದಿನದ ಅಂಗವಾಗಿ ಡಿ.6ರಂದು ಅಶೋಕಪುರಂನ ಪ್ರಮುಖ ರಸ್ತೆಗಳಲ್ಲಿ ಮೇಣದ ಬತ್ತಿ ಮೆರವಣಿಗೆ ನಡೆಯಲಿದೆ ಎಂದು ಲೇಖಕ ಸಿದ್ದಸ್ವಾಮಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 6 ಗಂಟೆಗೆ ಡಾ.ಬಿ.ಆರ್.ಅಂಬೇಡ್ಕರ್ ಉದ್ಯಾನವನದಿಂದ ಮೇಣದ ಬತ್ತಿ ಮೆರವಣಿಗೆಗೆ ಬಾಟುಮಿ ಅಂತರರಾಷ್ಟ್ರೀಯ ಪುಶು ಪಂದ್ಯಾವಳಿಯಲ್ಲಿ ಕಂಚಿನ ಪದಕ ಗೆದ್ದ ಎಸ್.ಎಂ.ಶಾನ್ವಿ ಚಾಲನೆ ನೀಡಲಿದ್ದಾರೆ.

ಮೆರವಣಿಗೆಯಲ್ಲಿ ಬಡಾವಣೆಯ ಎಲ್ಲ ವಿದ್ಯಾರ್ಥಿಗಳು, ನಾಗರಿಕರು ಪಾಲ್ಗೊಳ್ಳಲಿದ್ದು, ಅಶೋಕಪುರಂನ ಎಲ್ಲಾ ಮುಖ್ಯ ರಸ್ತೆಗಳಲ್ಲಿ ಸಾಗಲಿದೆ. ಜೊತೆಗೆ ಪಾಲ್ಗೊಳ್ಳುವ ಎಲ್ಲರೂ ಬಿಳಿ ಉಡುಗೆ ಧರಿಸಿರುತ್ತಾರೆ. ಅಂದು ಅಶೋಕಪುರಂನಲ್ಲಿ ಯಾವುದೇ ಮನೆಯಲ್ಲಿ ಶುಭ ಸಮಾರಂಭ ಮಾಡುವುದಿಲ್ಲ. ಸಂಜೆ ಎಲ್ಲರ ಮನೆ ಮುಂದೆ ನೀರು ಹಾಕಿ ಸ್ವಚ್ಛಗೊಳಿಸಿ, ದೀಪ ಹಚ್ಚುತ್ತಾರೆ ಎಂದು ತಿಳಿಸಿದರು.

ಸುದ್ದಿ ಗೋಷ್ಠಿಯಲ್ಲಿ ಪಾಲಿಕೆ ಮಾಜಿ ಸದಸ್ಯೆ ಪಲ್ಲವಿ ಬೇಗಂ, ಗೋವಿಂದ ರಾಜ್, ಬಬಿತಾ, ಶಿವಣ್ಣ, ಕ್ಷಮಾ, ಡಾ.ಎಸ್.ರಾಜ್ ಉಪಸ್ಥಿತರಿದ್ದರು.

ವಂಚನೆ, ಹಲ್ಲೆ ಆರೋಪ: ಹೆಡ್‌ಕಾನ್ಸ್‌ಟೇಬಲ್, ಆತನ ಪತ್ನಿ ವಿರುದ್ಧ ಪ್ರಕರಣ ದಾಖಲು

ಮೈಸೂರು, ಡಿ. 4 (ಆರ್‌ಕೆ)– ಪಾಲುದಾರಿಕೆಯಲ್ಲಿ ತೊಡಗಿಸಿದ ಹಣ ಕೇಳಿದವರ ಮೇಲೆ ಹಲ್ಲೆ ನಡೆಸಿದ ಆರೋಪದ ಮೇಲೆ ಮೇಟಗಳ್ಳಿ ಠಾಣೆ ಹೆಡ್‌ಕಾನ್ಸ್‌ಟೇಬಲ್ ಪಿ.ಜೆ.ರಾಜು ಮತ್ತು ಆತನ ಪತ್ನಿ ನಂದಿನಿ ವಿರುದ್ಧ ಮೈಸೂರಿನ ಕೆಆರ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಕೆಆರ್ ಮೊಹಲ್ಲಾ ನಿವಾಸಿಗಳಾದ ಸಿದ್ದೇಶ್, ಮಂಜುಳಾ ಹಾಗೂ ಮಹಾಲಕ್ಷ್ಮಿ ಎಂಬುವರು ನೀಡಿದ್ದ ದೂರಿನ ಮೇರೆಗೆ ರಾಜು ಮತ್ತು ಪತ್ನಿ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಈ ಹಿಂದೆ 2022ರಲ್ಲಿ ಮೈಸೂರಿನ ಅಶೋಕಪುರಂ ಠಾಣೆ ಕಾನ್ಸ್‌ಟೇಬಲ್ ಆಗಿ ಕೆಲಸ ಮಾಡುತ್ತಿದ್ದಾಗ ರಾಜು ಪೇಪರ್ ಗ್ಲಾಸ್ ಫ್ಯಾಕ್ಟರಿ ನಡೆಸುತ್ತಿದ್ದು ಅದರಲ್ಲಿ ಪಾಲುದಾರರಾಗಿ ಹಣ ತೊಡಗಿಸುವಂತೆ ಪುಸಲಾಯಿಸಿ, ಮಹಾಲಕ್ಷ್ಮಿ, ಸಿದ್ದೇಶ್, ಮಂಜುಳಾರಿಂದ 35 ಲಕ್ಷ ರೂ. ಹಣ ಪಡೆದಿದ್ದ. ತದನಂತರ ಉದ್ದಿಮೆಯ ಲಾಭಾಂಶ ನೀಡದೆ ಸತಾಯಿಸುತ್ತಿದ್ದ ರಾಜು, ಪಾಲುದಾರಿಕೆಗೆಂದು ಪಡೆದಿದ್ದ ಹಣವನ್ನು ಹಿಂದಿರುಗಿಸಿರಲಿಲ್ಲ. ಹಣ ಕೇಳಲೆಂದು ಹೋದಾಗ ನಾಲ್ಕು ದಿನಗಳ ಹಿಂದೆ ರಾಜು ಮತ್ತು ಆತನ ಪತ್ನಿ ನಂದಿನಿ ತಮ್ಮ ಮೇಲೆ ಹಲ್ಲೆ ನಡೆಸಿದ್ದಲ್ಲದೆ ಬೆದರಿಕೆ ಒಡ್ಡಿದ್ದಾರೆಂದು ದೂರು ನೀಡಲಾಗಿತ್ತು.

ಈ ಹಿಂದೆ ಆರೋಪಿಗಳ ಜೊತೆ ಶಾಮೀಲಾಗಿದ್ದಾರೆಂಬ ಆರೋಪದ ಹಿನ್ನೆಲೆಯಲ್ಲಿ ಅಮಾನತುಗೊಂಡಿದ್ದಲ್ಲದೆ, ಓರ್ವ ಪೊಲೀಸ್ ಇನ್ಸ್‌ಪೆಕ್ಟರ್‌ನಿಂದಲೂ ಹಣ ಕಸಿದು ಪಂಗನಾಮ ಹಾಕಿದ್ದ.

ಇನ್ನೂ ಎರಡು ಪ್ರಕರಣಗಳಲ್ಲಿ ಆತ ಜೈಲು ಸೇರಿ ಜಾಮೀನು ಪಡೆದ ನಂತರ ಅವನನ್ನು ಮೇಟಗಳ್ಳಿ ಠಾಣೆಗೆ ವರ್ಗಾವಣೆ ಮಾಡಲಾಗಿತ್ತು.

ಕೊಡಗಿನಾದ್ಯಂತ ಸಂಭ್ರಮದ ಪುತ್ತರಿ ಹಬ್ಬ ಆಚರಣೆ

'ಪೊಲಿ ಪೊಲಿಯೇ ದೇವಾ' ಎಂದು ಧಾನ್ಯ ಲಕ್ಷ್ಮಿ ಮನೆ ತುಂಬಿಕೊಂಡ ಕೊಡವರು





ಮಡಿಕೇರಿ,ಡಿ.4– ಧಾನ್ಯಲಕ್ಷ್ಮಿಯನ್ನು ಮನೆಗೆ ಬರಮಾಡಿಕೊಳ್ಳುವ ಪುತ್ತರಿ ಹಬ್ಬವನ್ನು ಕೊಡಗು ಜಿಲ್ಲೆಯಾದ್ಯಂತ ಸಂಭ್ರಮದಿಂದ ಆಚರಿಸಲಾಯಿತು.

ನಗರದ ಓಂಕಾರೇಶ್ವರ ದೇವಾಲಯ, ಕೊಡವ ಸಮಾಜ, ಗೌಡ ಸಮಾಜ ಸಹಿತ ವಿವಿಧ ದೇವಾಲಯಗಳಲ್ಲಿ ಪುತ್ತರಿ ಹಬ್ಬವನ್ನು ಸಾಂಪ್ರದಾಯಿಕವಾಗಿ ಆಚರಿಸಲಾಯಿತು. 'ಪೊಲಿ ಪೊಲಿಯೇ ದೇವಾ' ಎಂದು ಧಾನ್ಯ ಲಕ್ಷ್ಮಿಯನ್ನು ಸ್ತುತಿಸಿ ಮನೆ ತುಂಬಿಕೊಳ್ಳಲಾಯಿತು. ಓಂಕಾರೇಶ್ವರ ದೇವಾಲಯದಲ್ಲಿರುವ ಭತ್ತದ ಗದ್ದೆಗೆ ಹಾಲು ಎರೆದು ವಿಶೇಷ ಪೂಜೆ ಸಲ್ಲಿಸಿದ ಬಳಿಕ ರಾತ್ರಿ 9.40 ಗಂಟೆಗೆ ಕದಿರು ತೆಗೆಯಲಾಯಿತು. ಇದಕ್ಕೂ ಮೊದಲು ದೇವಾಲಯದಲ್ಲಿ ಈಶ್ವರನಿಗೆ ಮೊದಲ ಪೂಜೆ ಸಲ್ಲಿಸಿ ನಾಡಿನ ಸಂಮೃದ್ಧಿಗಾಗಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಲಾಯಿತು.

ಕೊಡವ ಸಮಾಜದಿಂದ ತಳಿಯತಕ್ಕಿ ಬೊಳಕ್ ಹಾಗೂ ಸಾಂಪ್ರದಾಯಿಕ ವಾಲಗದೊಂದಿಗೆ ಸಮಾಜ ಆಡಳಿತ ಮಂಡಳಿ ಮತ್ತು ವಿವಿಧ ಕೊಡವ ಕೇರಿಗಳ ಪ್ರಮುಖರು ಮೆರವಣಿಗೆ ಸಾಗಿ ಬಂದು ಓಂಕಾರೇಶ್ವರ ದೇವಾಲಯದಲ್ಲಿ ಪೂಜೆ ಸಲ್ಲಿಸಿದರು. ಈ ವೇಳೆ ಗಾಳಿಯಲ್ಲಿ ಗುಂಡು ಹಾರಿಸುವ ಮೂಲಕ ಹಬ್ಬದ ಶುಭಸಂದೇಶ ನೀಡಲಾಯಿತು.

ತದನಂತರ ಕದಿರು ತೆಗೆದು ದೇವಾಲಯದಲ್ಲಿ ಪೂಜೆ ಸಲ್ಲಿಸಿ ಸಮಾಜಕ್ಕೆ ಕೊಂಡೊಯ್ದು ನೆಲ್ಲಕ್ಕಿ ನಡುಬಾಣೆಯಲ್ಲಿಟ್ಟು ಪೂಜೆ ಸಲ್ಲಿಸಿ ಬಳಿಕ ಕದಿರು ವಿತರಣೆ ಮಾಡಲಾಯಿತು. ನಗರದ ಗೌಡ ಸಮಾಜದಲ್ಲಿಯೂ ಹುತ್ತರಿ ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು. ಗೌಡ ಸಮಾಜದ ಆವರಣದಲ್ಲಿ ಕೃತಕ ಗದ್ದೆ ನಿರ್ಮಿಸಿ ಕದಿರು ತೆಗೆದು ಹುತ್ತರಿ ಹಬ್ಬವನ್ನು ಆಚರಿಸಲಾಯಿತು.

ಬಳಿಕ ಹಬ್ಬದ ಸಾಂಪ್ರದಾಯಿಕ ತಿನಿಸು ತಂಬಿಟ್ಟನ್ನು ನೆರೆದಿದ್ದ ಜನರಿಗೆ ಪ್ರಸಾದ ರೂಪದಲ್ಲಿ ವಿತರಿಸಲಾಯಿತು. ಬಳಿಕ ಕೊಡಗಿನ ಸಾಂಪ್ರದಾಯಿಕ ವಾಲಗಕ್ಕೆ ನೆರೆದಿದ್ದ ಜನರು ಕುಣಿದು ಕುಪಳಿಸಿ ಸಂಭ್ರಮಿಸಿದರು. ನಗರ ಪ್ರದೇಶದಲ್ಲಿ ಭತ್ತದ ಗದ್ದೆಗಳು ಇಲ್ಲದ ಕಾರಣ ನಗರ ನಿವಾಸಿಗಳು ಹೆಚ್ಚಿನ ಸಂಖ್ಯೆಯಲ್ಲಿ ದೇವಾಲಯ ಹಾಗೂ ವಿವಿಧ ಸಮಾಜಗಳಿಗೆ ತೆರಳಿ ಕದಿರು ಸ್ವೀಕರಿಸಿದರು. ಸಮಾಜ ಮತ್ತು ದೇವಾಲಯಗಳಲ್ಲಿ ನೆರೆ ಕಟ್ಟಿದ ಕದಿರನ್ನು ಜನರು ಸರತಿ ಸಾಲಿನಲ್ಲಿ ನಿಂತು ಪಡೆದು ಮನೆ ತುಂಬಿಕೊಂಡರು.

ಪೊನ್ನಂಪೇಟೆ ವರದಿ: ದಕ್ಷಿಣ ಕೊಡಗಿನ ಹಲವು ಗ್ರಾಮಗಳಲ್ಲಿ ಪುರಾತನ ಸಂಪ್ರದಾಯದಂತೆ ಹಗಲಿನ ವೇಳೆಯಲ್ಲಿ ಕದಿರು ತೆಗೆಯುವ ಮೂಲಕ ಧಾನ್ಯ ಲಕ್ಷ್ಮಿಗೆ ಪೂಜೆ ಸಲ್ಲಿಸಿ ಪುತ್ತರಿ ಹಬ್ಬಾಚರಣೆ ಮಾಡಲಾಯಿತು. ಇತಿಹಾಸ ಪ್ರಸಿದ್ಧ ಬಾಡಗರಕೇರಿಯ ಶ್ರೀ ಮೃತ್ಯುಂಜಯ ದೇವಸ್ಥಾನದಲ್ಲಿ ಪುತ್ತರಿ ಹಬ್ಬವನ್ನು ವಿಜೃಂಭಣೆಯಿಂದ ಸಾಮೂಹಿಕವಾಗಿ ಗ್ರಾಮಸ್ಥರು ಆಚರಿಸಿದರು. ತಕ್ಕ ಮುಖ್ಯಸ್ಥರು, ದೇವಸ್ಥಾನ ಆಡಳಿತ ಮಂಡಳಿ ನೇತೃತ್ವದಲ್ಲಿ ಸಾಂಪ್ರದಾಯಿಕವಾಗಿ ಕದಿರು ತೆಗೆಯಲಾಯಿತು. ದೇವಸ್ಥಾನದಿಂದ 2 ಕಿಮೀ ದೂರದಲ್ಲಿರುವ ಪಾರಂಪರಿಕವಾಗಿ ಕದಿರು ತೆಗೆಯುವ ಮಲ್ಲೇಂಗಡ ಕುಟುಂಬಸ್ಥರ ಗದ್ದೆಗೆ ದೇವಸ್ಥಾನದಿಂದ ತಳಿಯತಕ್ಕಿ ಬೊಳಕ್, ಓಡ್ಡೋಲಗದೊಂದಿಗೆ ತೆರಳಿ ಕದಿರು ತೆಗೆದು ದೇವಸ್ಥಾನಕ್ಕೆ ತರಲಾಯಿತು. ಪಟಾಕಿ ಸಿಡಿಸಿ, ಓಡ್ಡೋಲಗಕ್ಕೆ ಗ್ರಾಮಸ್ಥರು ಕುಣಿದು ಸಂಭ್ರಮಿಸಿದರು. ಪುತ್ತರಿ ಪ್ರಯುಕ್ತ ವಿಶೇಷ ಖಾದ್ಯ ತಂಬಿಟ್ಟಿನೊಂದಿಗೆ ಸಾಮೂಹಿಕ ಊಟೋಪಚಾರ ನಡೆಯಿತು. ದೇವತಕ್ಕ ಆಣ್ಣೀರ ಕುಟುಂಬದ ದಾದಾ ಗಣಪತಿ, ನಾಡ್‌ತಕ್ಕ ಕಾಯಪಂಡ ಕುಟುಂಬದ ಸದಸ್ಯರು, ಮುಖ್ಯ ಅರ್ಚಕರಾದ ಗಿರೀಶ್ ಹಾಗೂ ನೂರಾರು ಗ್ರಾಮಸ್ಥರು ಭಾಗವಹಿಸಿದ್ದರು.

ಕಿರುಗೂರು ಗ್ರಾಮದ ಶ್ರೀ ಮಹದೇವರ ದೇವಸ್ಥಾನದಲ್ಲಿ ಸಂಭ್ರಮದಿಂದ ಪುತ್ತರಿ ಹಬ್ಬವನ್ನು ಆಚರಿಸಲಾಯಿತು. ಶ್ರೀ ಮಹದೇವರ ದೇವಸ್ಥಾನ ಆಡಳಿತ ಮಂಡಳಿ ಕಾರ್ಯದರ್ಶಿ ಕಾಕಮಾಡ ಆದರ್ಶ ನೇತೃತ್ವದಲ್ಲಿ ಅರ್ಚಕ ಸುದರ್ಶನ್ ಭಟ್ ಮುಂದಾಳತ್ವದಲ್ಲಿ ಗುರುವಾರ ಬೆಳಗ್ಗೆ 10.30ಕ್ಕೆ ಕೃತಿಕ ನಕ್ಷತ್ರದಲ್ಲಿ ಗ್ರಾಮಸ್ಥರೆಲ್ಲಾ ಸೇರಿ ಮೆರವಣಿಗೆಯ ಮೂಲಕ ದೇವರ ಗದ್ದೆಗೆ ತೆರಳಿ ಕದಿರು ತೆಗೆಯಲಾಯಿತು. ದೇವರಿಗೆ ಪೂಜೆ ಸಲ್ಲಿಸಿ, ದೇವರಿಗೆ ಕದಿರು ಹಾಕಿ ತೀರ್ಥ ಪ್ರಸಾದ ಸ್ವೀಕರಿಸಲಾಯಿತು.

ಕಕ್ಕಬ್ಬೆ ಪಾಡಿ ಶ್ರೀ ಇಗ್ಗುತ್ತಪ್ಪ ದೇವಾಲಯದಲ್ಲಿ

ಕುಂಬ್ಯಾರ್ ಕಲಾಡ್ಚ ಹಬ್ಬ ಸಂಪನ್ನ



ಕಕ್ಕಬ್ಬೆಯ ಪಾಡಿ ಶ್ರೀ ಇಗ್ಗುತ್ತಪ್ಪ ಸನ್ನಿಧಿಯಲ್ಲಿ ಹುತ್ತರಿ ಹಬ್ಬದ ದಿನವಾದ ಗುರುವಾರ ವಾರ್ಷಿಕ ಕುಂಬ್ಯಾರ್ ಕಲಾಡ್ಚ ಹಬ್ಬದಲ್ಲಿ ಶ್ರದ್ಧಾಭಕ್ತಿಯಿಂದ ಜರುಗಿದ ದೇವರ ಪ್ರದರ್ಶನ ಬಲಿ.

ನಾಪೋಕ್ಲು: ಸಮೀಪದ ಕಕ್ಕಬ್ಬೆಯ ಪಾಡಿ ಶ್ರೀ ಇಗ್ಗುತ್ತಪ್ಪ ದೇವಾಲಯದಲ್ಲಿ ಹುತ್ತರಿ (ಪುತ್ತರಿ) ಹಬ್ಬದ ದಿನವಾದ ಗುರುವಾರ ವಾರ್ಷಿಕ ಕುಂಬ್ಯಾರ್ ಕಲಾಡ್ಚ ಹಬ್ಬವನ್ನು ತಕ್ಕ ಮುಖ್ಯಸ್ಥರು, ಊರಿನ ಪರವೂರಿನ ಭಕ್ತರು ಸೇರಿ ಸಾಂಪ್ರದಾಯಿಕವಾಗಿ ಆಚರಿಸುವುದರೊಂದಿಗೆ ಶ್ರದ್ಧಾಭಕ್ತಿಯಿಂದ ಸಂಪನ್ನಗೊಂಡಿತ್ತು.

ಇಗ್ಗುತ್ತಪ್ಪ ಸನ್ನಿಧಿಯಲ್ಲಿ ದೇವತಕ್ಕರಾದ ಪರದಂಡ ಕುಟುಂಬಸ್ಥರ ಎತ್ತುಪೋರಾಟದೊಂದಿಗೆ ದೇವಾಲಯಕ್ಕೆ ತಲುಪಿ ಎತ್ತು ಪೋರಾಟವನ್ನು ಒಪ್ಪಿಸಲಾಯಿತು. ನಂತರ ಹಾಲು ಬಲಿವಾಡು. ಭಕ್ತಾದಿಗಳಿಂದ ತುಲಾಭಾರ ಸೇವೆ ಸೇರಿದಂತೆ ಹರಕೆ ಇನ್ನಿತರ ಪೂಜೆಗಳನ್ನು ನೆರವೇರಿಸಿದ ಬಳಿಕ ಮಹಾಪೂಜೆ ಜರುಗಿ ಭಕ್ತಾದಿಗಳಿಗೆ ತೀರ್ಥ, ಪ್ರಸಾದ, ಅನ್ನಸಂತರ್ಪಣೆ ನೆರವೇರಿತು.

ನಂತರ ದೇವರ ನಡೆಯಲ್ಲಿ ನಿಂತು ತಕ್ಕ ಮುಖ್ಯಸ್ಥರು ನಾಡಿನ ಸುಭಿಕ್ಷಕ್ಕಾಗಿ ಪ್ರಾರ್ಥನೆ ಸಲ್ಲಿಸಿದ ಬಳಿಕ ದೇವರ ಪ್ರದರ್ಶನ ಬಲಿ ಜರುಗಿ ಎತ್ತುಪೋರಾಟದೊಂದಿಗೆ ತಕ್ಕ ಮುಖ್ಯಸ್ಥರು ಭಕ್ತಾದಿಗಳು ಇಗ್ಗುತ್ತಪ್ಪ ದೇವರ ಆದಿ ಸ್ಥಳವಾದ ಮಲ್ಮ ಬೆಟ್ಟಕ್ಕೆ ಶ್ರದ್ಧಾ ಭಕ್ತಿಯಿಂದ ತೆರಳಿದರು.

ಇದೇ ಸಂದರ್ಭ ಪೇರೂರು ಹಾಗೂ ನೆಲಜಿ ಶ್ರೀ ಇಗ್ಗುತ್ತಪ್ಪ ದೇವಾಲಯದ ತಕ್ಕ ಮುಖ್ಯಸ್ಥರು ಎತ್ತು ಪೋರಾಟದೊಂದಿಗೆ ಮಲ್ಮಕ್ಕೆ ಆಗಮಿಸಿದರು. ಅರ್ಚಕರು ಶುದ್ಧ ಕಲಶ ಪೂಜಾಕಾರ್ಯಗಳನ್ನು ನೆರವೇರಿಸಿ ಎತ್ತುಪೋರಾಟ ದುಡಿಕೊಟ್ಟ್ ಪಾಟ್ ನೆರವೇರಿತು. ಬಳಿಕ ಎತ್ತುಪೋರಾಟದ ಅಕ್ಕಿಯನ್ನು ಮೂರು ಭಾಗಮಾಡಿ ನೆಲಜಿ, ಪೇರೂರು ಹಾಗೂ ಪಾಡಿ ದೇವಾಲಯದ ತಕ್ಕ ಮುಖ್ಯಸ್ಥರು ಹಂಚಿಕೊಂಡು ದೇವರ ಕಟ್ಟು ಸಡಿಲಿಸಿ ನಾಡಿನ ಸುಭಿಕ್ಷಕ್ಕಾಗಿ ವಿಶೇಷ ಪ್ರಾರ್ಥನೆ ಸಲ್ಲಿಸಲಾಯಿತು.

ಸಂಜೆ ದೇವಾಲಯದಲ್ಲಿ ವಿವಿಧ ಕಾರ್ಯಕ್ರಮಗಳೊಂದಿಗೆ ಕಲಾಡ್ಚ ಸಂಭ್ರಮದಿಂದ ಜರುಗಿತು. ಈ ಸಂದರ್ಭ ನಾಡಿನ, ಮತ್ತು ದೇವಾಲಯದ 13 ತಕ್ಕ ಮುಖ್ಯಸ್ಥರು, ವ್ಯವಸ್ಥಾಪನಾ ಸಮಿತಿ, ಭಕ್ತ ಜನಸಂಘ ಸೇರಿದಂತೆ ಇತರ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಚುನಾಯಿತ ಪ್ರತಿನಿಧಿಗಳು, ಊರಿನ ಪರವೂರಿನ ಭಕ್ತಾದಿಗಳು ಪಾಲ್ಗೊಂಡಿದ್ದರು.

ಏಡ್ಸ್ ನಿಯಂತ್ರಣ ಆಂದೋಲನ



ನಾಪೋಕ್ಲು: ಏಡ್ಸ್ ನಿಯಂತ್ರಣ ಆಂದೋಲನ ಅಂಗವಾಗಿ ಬೊಂಬೆಯಾಟದ ಮೂಲಕ ಜನ ಜಾಗೃತಿ ಮೂಡಿಸಲಾಯಿತು.

ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ, ಜಿಲ್ಲಾಡಳಿತ ಹಾಗೂ ಜಿಲ್ಲಾ ಏಡ್ಸ್ ನಿಯಂತ್ರಣ ಹಾಗೂ ಪ್ರತಿಬಂಧಕ ಘಟಕದ ವತಿಯಿಂದ ಜಾನಪದ ಕಲಾತಂಡಗಳ ಮೂಲಕ ಏಡ್ಸ್ ನಿಯಂತ್ರಣ ಆಂದೋಲನ ಅಂಗವಾಗಿ ಇಲ್ಲಿನ ಬಸ್ ನಿಲ್ದಾಣದಲ್ಲಿ ಜನ ಜಾಗೃತಿ ಮೂಡಿಸಲಾಯಿತು. ರಾಜಾರಾಮ್ ತೊಗಲು ಗೊಂಬೆ ಕಲಾ ಸಂಘ ಹೂವಿನ ಹಳ್ಳಿ ಕಾವಲು ವತಿಯಿಂದ ಬೊಂಬೆಯಾಟದ ಮೂಲಕ ಸಾರ್ವಜನಿಕರಿಗೆ ಜಾಗೃತಿ ಕಾರ್ಯಕ್ರಮವನ್ನು ಪ್ರಸ್ತುತ ಪಡಿಸಲಾಯಿತು.

ದಿಶಾ ಸಭೆ

ಮಡಿಕೇರಿ: 2025–26ನೇ ಸಾಲಿಗೆ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ(ದಿಶಾ) ಸಭೆಯು ಸಂಸದ ಯದುವೀರ್ ಒಡೆಯರ್ ಅವರ ಅಧ್ಯಕ್ಷತೆಯಲ್ಲಿ ಡಿ.6 ರಂದು ಬೆಳಗ್ಗೆ 10.30 ಗಂಟೆಗೆ ಕೊಡಗು ಜಿಲ್ಲಾ ಪಂಚಾಯಿತಿ ಮುಖ್ಯ ಸಭಾಂಗಣದಲ್ಲಿ ನಡೆಯಲಿದೆ ಎಂದು ಜಿಪಂ ಸಿಇಓ ಆನಂದ್ ಪ್ರಕಾಶ್ ಮೀನಾ ತಿಳಿಸಿದ್ದಾರೆ.

ಇಂದು ಮಡಿಕೇರಿಯಲ್ಲಿ ಡಾ.ಅಂಬೇಡ್ಕರ್ ಕಂಚಿನ ಪ್ರತಿಮೆ ಸ್ಥಾಪನೆಗೆ ಭೂಮಿ ಪೂಜೆ



ಸಮಿತಿ ಪ್ರಧಾನ ಕಾರ್ಯದರ್ಶಿ ಸಿಜಿಮೋಹನ್ ಮೌರ್ಯ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮಡಿಕೇರಿ,ಡಿ.4– ಕೊಡಗಿನಲ್ಲಿ ಪ್ರಪ್ರಥಮ ಬಾರಿಗೆ ಭಾರತದ ಸಂವಿಧಾನ ಪಿತಾಮಹ ಬಾಬಾ ಸಾಹೇಬ್ ಡಾ. ಅಂಬೇಡ್ಕರ್ ಅವರ ಕಂಚಿನ ಪ್ರತಿಮೆ ಸ್ಥಾಪನೆಗೆ ನಗರದ ಸುದರ್ಶನ ವೃತ್ತದ ಬಳಿಯ ಸರ್ಕಾರಿ ಜಾಗದಲ್ಲಿ ನಾಳೆ (ಡಿ.5) ಭೂಮಿ ಪೂಜೆ ನಡೆಯಲಿದೆ ಎಂದು ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ನಿರ್ಮಾಣ ಸಮಿತಿ ಪ್ರಧಾನ ಕಾರ್ಯದರ್ಶಿ ಸಿಜಿಮೋಹನ್ ಮೌರ್ಯ ತಿಳಿಸಿದ್ದಾರೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದ ಸುದರ್ಶನ ವೃತ್ತದ ಸಮೀಪ ಸ್ವಾತಂತ್ರ್ಯ ಹೋರಾಟಗಾರ ಗುಡ್ಡೆಮನೆ ಅಪ್ಪಯ್ಯ ಗೌಡ ಸ್ಮಾರಕದ ಬಳಿಯಲ್ಲಿನ ನಗರಸಭೆ ಉದ್ಯಾನವನದಲ್ಲಿ ಬೆಳಗ್ಗೆ 8.30 ಗಂಟೆಗೆ ಕೊಡಗು ಜಿಲ್ಲಾಡಳಿತ, ಮಡಿಕೇರಿ ನಗರಸಭೆ ಸಹಯೋಗದಲ್ಲಿ ಆಯೋಜಿಸಲಾಗಿರುವ ಕಾರ್ಯಕ್ರಮದಲ್ಲಿ ಮಡಿಕೇರಿ ಕ್ಷೇತ್ರ ಶಾಸಕ ಡಾ. ಮಂತರ್ ಗೌಡ ಭೂಮಿ ಪೂಜೆ ನಡೆಸಲಿದ್ದಾರೆ ಎಂದು ತಿಳಿಸಿದರು.

ಅಂದಾಜು 2ರಿಂದ 3 ಸೆಂಟ್ಸ್ ಜಾಗದಲ್ಲಿ ಸುಮಾರು 44 ಲಕ್ಷ ರೂ. ವೆಚ್ಚದಲ್ಲಿ ಡಾ. ಬಿ.ಆರ್.ಅಂಬೇಡ್ಕರ್ ಪ್ರತಿಮೆ ಮತ್ತು ಉದ್ಯಾನವನ ನಿರ್ಮಾಣವಾಗಲಿದೆ. ಕಂಚಿನ ಡಾ. ಅಂಬೇಡ್ಕರ್ ಪ್ರತಿಮೆ ನಿರ್ಮಾಣದ ವೆಚ್ಚವನ್ನು ಶಾಸಕ ಡಾ.ಮಂತರ್‌ಗೌಡ ಅವರು ಭರಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಪ್ರತಿಮೆ ನಿರ್ಮಾಣಕ್ಕೆ ಜಿಲ್ಲೆಯ ವಿವಿಧ 37 ಸಂಘಟನೆಗಳು ಸಹಕರಿಸಿವೆ. ಕೊಡಗಿನ ಎಲ್ಲಾ ದಲಿತ ಸಂಘಟನೆಗಳ ನಾಯಕರು ಹಾಗೂ ಅಹಿಂದ ಮುಖಂಡರು, ಸಮಾನ ಮನಸ್ಕರ ವೇದಿಕೆ, ಮಹಿಳಾ ಸಂಘಟನೆಗಳು, ಕಾರ್ಮಿಕ ಸಂಘಟನೆಗಳು, ವಿದ್ಯಾರ್ಥಿ ಸಂಘಟನೆಗಳು, ಪ್ರಗತಿಪರ ಚಿಂತಕರು ಹಾಗೂ ಅಂಬೇಡ್ಕರ್ ಅನುಯಾಯಿಗಳ ಸಹಕಾರದಿಂದ ಡಾ.ಅಂಬೇಡ್ಕರ್ ಪ್ರತಿಮೆ ನಿರ್ಮಾಣದ ಕನಸು ನನಸಾಗುವ ಕಾಲ ಕೂಡಿ ಬಂದಿರುವುದಾಗಿ ಹೇಳಿದರು. ಪ್ರತಿಮೆ ನಿರ್ಮಾಣಕ್ಕೆ ಕಾರಣಕರ್ತರಾದ ಜಿಲ್ಲೆಯ ಶಾಸಕರಾದ ಎ.ಎಸ್.ಪೊನ್ನಣ್ಣ, ಡಾ.ಮಂತರ್ ಗೌಡ, ಜಿಲ್ಲಾಧಿಕಾರಿಗಳು, ಮಡಿಕೇರಿ ನಗರಸಭೆಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಹಾಗೂ ಪೌರಾಯುಕ್ತರು, ನಗರಸಭೆಯ ಎಲ್ಲಾ ಸದಸ್ಯರಿಗೆ ಅಂಬೇಡ್ಕರ್ ಪ್ರತಿಮೆ ನಿರ್ಮಾಣ ಸಮಿತಿ ವತಿಯಿಂದ ಅಭಿನಂದನೆ ಸಲ್ಲಿಸಿದರು.

ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆ ನಿರ್ಮಾಣ ಸಮಿತಿ ಅಧ್ಯಕ್ಷ ಜಯಪ್ಪ ಹಾನಗಲ್ಲು ಅವರು ಮಾತನಾಡಿ, ಜಿಲ್ಲೆಯಲ್ಲಿ 45 ವರ್ಷಗಳ ಹಿಂದೆ ದಸಂಸ ಸಂಘಟನೆ ಅಸ್ತಿತ್ವಕ್ಕೆ ಬಂದಿದೆ. ಜಿಲ್ಲಾ ಕೇಂದ್ರದಲ್ಲಿ ಡಾ.ಅಂಬೇಡ್ಕರ್ ಪ್ರತಿಮೆ ಸ್ಥಾಪನೆಯಾಗಬೇಕೆನ್ನುವುದು ನಮ್ಮ ಬೇಡಿಕೆಯಾಗಿದ್ದು, ಇದೀಗ ಈಡೇರುತ್ತಿರುವ ಬಗ್ಗೆ ಸಂತಸ ವ್ಯಕ್ತಪಡಿಸಿದರು.

ಸಮಿತಿ ಗೌರವಾಧ್ಯಕ್ಷ ಹೆಚ್.ಎಲ್. ದಿವಾಕರ್ ಮಾತನಾಡಿ, ಜಿಲ್ಲಾ ದಸಂಸ ನಿರಂತರವಾಗಿ ಕಳೆದ ಹತ್ತಾರು ವರ್ಷಗಳಿಂದ ಡಾ. ಅಂಬೇಡ್ಕರ್ ಪ್ರತಿಮೆ ಸ್ಥಾಪನೆಯ ಬೇಡಿಕೆಯನ್ನು ಮುಂದಿಟ್ಟು ನಡೆಸಿಕೊಂಡು ಬಂದ ಹೋರಾಟಕ್ಕೆ ಇದೀಗ ಜಯ ದೊರಕಿದೆ ಎಂದು ಹೆಮ್ಮೆಯಿಂದ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಸಮಿತಿಯ ಮಾಧ್ಯಮ ವಕ್ತಾರ ವಿನಯ್, ಉಪಾಧ್ಯಕ್ಷ ದಿಲೀಪ್ ಕುಮಾರ್, ಖಜಾಂಚಿ ಪ್ರೇಮ ಕೃಷ್ಣಪ್ಪ, ಗೌರವಾಧ್ಯಕ್ಷ ಹೆಚ್.ಎಲ್.ದಿವಾಕರ್ ಉಪಸ್ಥಿತರಿದ್ದರು.

ಗುಂಡ್ಲುಪೇಟೆಯಲ್ಲಿ ಸಣ್ಣ ಕೈಗಾರಿಕೆಗಳ ಸ್ಥಾಪನೆಗೆ ಆದ್ಯತೆ

ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್



ಕಾರ್ಯಾಗಾರವನ್ನು ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಉದ್ಘಾಟಿಸಿದರು.

ಗುಂಡ್ಲುಪೇಟೆ, ಡಿ.4– ಸಣ್ಣ ಕೈಗಾರಿಕೆಗಳಿಂದ ಹೆಚ್ಚಿನ ಉದ್ಯೋಗ ಸೃಷ್ಟಿಸಲು ಸಾಧ್ಯವಿದೆ. ಹೀಗಾಗಿ ಪಟ್ಟಣದಲ್ಲಿ ಸಣ್ಣ ಕೈಗಾರಿಕೆಗಳ ಸ್ಥಾಪನೆಗೆ ಆದ್ಯತೆ ನೀಡಲಾಗುವುದು ಎಂದು ಶಾಸಕ ಹೆಚ್.ಎಂ. ಗಣೇಶ್ ಪ್ರಸಾದ್ ತಿಳಿಸಿದರು.

ಪಟ್ಟಣದ ಹೊರವಲಯದ ಕೈಗಾರಿಕಾ ಪ್ರದೇಶ ವೀರನಪುರ ಬಡಾವಣೆಯಲ್ಲಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಹಾಗೂ ಜಿಲ್ಲಾ ಕೈಗಾರಿಕಾ ಕೇಂದ್ರ ಚಾಮರಾಜನಗರ ಇವರ ಸಂಯುಕ್ತಾಶ್ರಯದಲ್ಲಿ ಸಣ್ಣ ಕೈಗಾರಿಕೆಗಳ ಕಾರ್ಯಕ್ಷಮತೆ ಹೆಚ್ಚಿಸುವ ಮತ್ತು ವೇಗಗೊಳಿಸುವ ಯೋಜನೆಯಡಿ ಆಯೋಜಿಸಿದ್ದ ಅರಿವು ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

2 ರಾಜ್ಯಗಳ ಗಡಿ ತಾಲೂಕಿನಲ್ಲಿ ವಿದ್ಯಾವಂತ ಯುವಕರಿಗೆ ಉದ್ಯೋಗ ಒದಗಿಸುವ ದೂರದೃಷ್ಟಿಯಿಂದ ಮಾಜಿ ಸಚಿವ ದಿ.ಮಹದೇವಪ್ರಸಾದ್ ಅವರು ಕೈಗಾರಿಕಾ ಪ್ರದೇಶ ಅಭಿವೃದ್ಧಿ ಪಡಿಸಿದ್ದರು. ಕೈಗಾರಿಕೋದ್ಯಮಿಗಳಿಗೆ ಅನುಕೂಲ ಕಲ್ಪಿಸುವ ಜೊತೆಗೆ ಕೈಗಾರಿಕೆಗಳಿಗೆ ಉತ್ತೇಜನ ನೀಡುವ ಮೂಲಕ ನಿರುದ್ಯೋಗ ಸಮಸ್ಯೆ ಬಗೆಹರಿಸಲು ಮುಂದಾಗಿದ್ದರು. ಕೈಗಾರಿಕೆಗಳನ್ನು ಸ್ಥಾಪಿಸಲು ಯಾವ ರೀತಿ ಸಮಸ್ಯೆ ಉದ್ಭವವಾಗುತ್ತವೆ ಹಾಗೂ ಅವುಗಳನ್ನು ಸರಿದೂಗಿಸಿಕೊಂಡು ಕೈಗಾರಿಕೆ ಸ್ಥಾಪಿಸಲು ಎಷ್ಟು ಶ್ರಮ ವಹಿಸಬೇಕೆಂಬುದನ್ನು ನಾನು ಹತ್ತಿರದಿಂದ ನೋಡಿದ್ದೇನೆ. ಸಾಮಾನ್ಯವಾಗಿ ಜನರು ದುಡ್ಡಿರುವವರು ಮಾತ್ರ ಕೈಗಾರಿಕೆ ಸ್ಥಾಪಿಸುತ್ತಾರೆ ಎಂದು ಭಾವಿಸಿದ್ದಾರೆ. ಆದರೆ ಉದ್ಯಮಿಗಳು ಕೌಶಲ್ಯ ಬೆಳೆಸಿಕೊಂಡು ವ್ಯವಹಾರ ಅಭಿವೃದ್ಧಿಗೊಳಿಸಲು ಸಾಕಷ್ಟು ಕಷ್ಟ ಪಡಬೇಕಾಗುತ್ತದೆ. ಹೀಗಾಗಿ ಕೈಗಾರಿಕೆ ಸ್ಥಾಪಕರು ಹಾಗೂ ಉದ್ಯಮಗಳ ಮಾಲೀಕರಿಗೆ ತುಂಬಾ ಸವಾಲುಗಳಿವೆ. ಕೈಗಾರಿಕಾ ಪ್ರದೇಶಕ್ಕೆ ನೀರಿನ ಸಮಸ್ಯೆ ಇರುವ ಬಗ್ಗೆ ಕೈಗಾರಿಕೋದ್ಯಮಿಗಳು ತಿಳಿಸಿದ್ದಾರೆ. ಇದನ್ನು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದು ಸಮಸ್ಯೆ ಪರಿಹರಿಸಲಾಗಿದೆ ಎಂದರು.

ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ 30 ಕೋಟಿ ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ಹಣ ನೀಡುತ್ತಿದ್ದು, ಎಂಬಿಎ ಸೇರಿದಂತೆ ಉನ್ನತ ವ್ಯಾಸಂಗ ಮಾಡಿದವರಿಗೆ ಉದ್ಯೋಗ ದೊರಕದಿರುವುದು ದೊಡ್ಡ ದುರಂತವಾಗಿದೆ. ಹೀಗಾಗಿ ಗುಂಡ್ಲುಪೇಟೆಯಲ್ಲಿ ಸ್ಥಾಪನೆಯಾಗುವ ಸಣ್ಣ ಕೈಗಾರಿಕೆಗಳಲ್ಲಿ ಸ್ಥಳೀಯರಿಗೆ ಉದ್ಯೋಗ ನೀಡಿ ಅವರ ಆರ್ಥಿಕ ಮಟ್ಟ ಸುಧಾರಿಸುವಲ್ಲಿ ಉದ್ಯಮಿಗಳು ನೆರವಾಗಬೇಕು. ನಮ್ಮ ಆಡಳಿತಾವಧಿಯಲ್ಲಿ ಕೈಗಾರಿಕೆ ಸ್ಥಾಪನೆಗೆ ಇನ್ನೂ ಹೆಚ್ಚಿನ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ವ್ಯವಸ್ಥಾಪಕ ನಿರ್ದೇಶಕ ಡಾ.ರಾಜೇಂದ್ರ, ಸಿಇಓ ಸಿದ್ದರಾಜು, ಎಸ್‌ಬಿಐ ಮುಖ್ಯ ವ್ಯವಸ್ಥಾಪಕಿ ಎಂ.ಎನ್. ಸುರೇಖಾ, ಜಂಟಿ ನಿರ್ದೇಶಕ ದೊರೈರಾಜು, ಸಹಾಯಕ ಪ್ರಧಾನ ವ್ಯವಸ್ಥಾಪಕಿ ಪ್ರಮೀಳಾ, ಕೆಎಸ್‌ಎಸ್‌ಐಡಿಸಿ ಎಜಿಎಂ ಟಿ.ವೇದಾವತಿ, ಸಂಪನ್ಮೂಲ ವ್ಯಕ್ತಿ ಜಗದೀಶ್, ಸಹಾಯಕ ನಿರ್ದೇಶಕ ಬಿ.ವಿಜಯಕುಮಾರ್ ಸೇರಿದಂತೆ ಹಲವರಿದ್ದರು.

ಹೆದ್ದಾರಿಯಲ್ಲಿ ಅಪಘಾತ ತಡೆಗಟ್ಟಲು ಸೂಕ್ತ ಕ್ರಮ

ಶಾಸಕ ಎಂ.ಆರ್.ಮಂಜುನಾಥ್



ಶಾಸಕ ಮಂಜುನಾಥ್ ಹೆದ್ದಾರಿ ಪರಿಶೀಲನೆ ನಡೆಸಿದರು.

ಕೊಳ್ಳೇಗಾಲ, ಡಿ.4– ತಾಲೂಕಿನ ನರೀಪುರದಿಂದ ಸತ್ತೇಗಾಲ ಬೈಪಾಸ್‌ವರೆಗೆ ರಾಷ್ಟ್ರೀಯ ಹೆದ್ದಾರಿ 948ರಲ್ಲಿ ಅಪಘಾತ ಪ್ರಕರಣಗಳು ದಿನೇ ದಿನೆ ಹೆಚ್ಚುತ್ತಿದ್ದು, ಅದನ್ನು ತಡೆಗಟ್ಟಲು ಶೀಘ್ರ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಶಾಸಕ ಎಂ.ಆರ್.ಮಂಜುನಾಥ್ ತಿಳಿಸಿದರು.

ಜಿಲ್ಲಾಧಿಕಾರಿ ಶಿಲ್ಪನಾಗ್ ಅವರೊಂದಿಗೆ ನರೀಪುರ ಹಾಗೂ ಸತ್ತೇಗಾಲ ಬೈಪಾಸ್ ಸರ್ಕಲ್‌ಗಳನ್ನು ಪರಿಶೀಲಿಸಿದ ಶಾಸಕ ಮಂಜುನಾಥ್ ಸಾರ್ವಜನಿಕರಿಂದ ಅಹವಾಲು ಆಲಿಸಿ ಅವರು ಮಾತನಾಡಿದರು.

ಸ್ಥಳೀಯರ ಸುಗಮ ಸಂಚಾರಕ್ಕೆ ಹೆದ್ದಾರಿಯ 2 ಬದಿಗಳಲ್ಲಿ ಸರ್ವೀಸ್ ರಸ್ತೆಗಳ ನಿರ್ಮಾಣ, ಸತ್ತೇಗಾಲ ಬೈಪಾಸ್‌ನಿಂದ ಉಗನಿಯ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಸ್ಥಳದಲ್ಲಿ ಅಂಡರ್ ಪಾಸ್ ನಿರ್ಮಾಣಕ್ಕೆ ಕ್ರಮ ವಹಿಸಲಾಗುವುದು. ಅಲ್ಲದೇ ದಾರಿಯುದ್ದಕ್ಕೂ ಲೈಟ್‌ಗಳನ್ನು ಅಳವಡಿಸಲಾಗುವುದು ಎಂದರು.

ಈ ವೇಳೆ ಎಸಿ ದಿಲೀಪ್ ಕುಮಾರ್ ಮೀನಾ, ತಹಸೀಲ್ದಾರ್ ಬಸವರಾಜು, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳಾದ ಎನ್.ಹೆಚ್. ಚಾರುಲತಾ ಜೈನ್, ವಿಶ್ವ, ತಾಪಂ ಇಓ ಗುರುಶಾಂತಪ್ಪ ಬೆಳ್ಳುಂಡಗಿ, ಸೆಸ್ಕ್ ಎಇಇ ರಾಜು, ಸತ್ತೇಗಾಲ ಗ್ರಾಮಸ್ಥರು ಮತ್ತು ರೈತ ಮುಖಂಡರು ಉಪಸ್ಥಿತರಿದ್ದರು.

ಜಿಲ್ಲಾ ಬಿಜೆಪಿ ನೂತನ ಪ್ರಧಾನ ಕಾರ್ಯದರ್ಶಿಗಳ ನೇಮಕ







ಚಾಮರಾಜನಗರ, ಡಿ.4– ಜಿಲ್ಲಾ ಬಿಜೆಪಿ ನೂತನ ಪ್ರಧಾನ ಕಾರ್ಯದರ್ಶಿಗಳಾಗಿ ಪಿ.ವೃಷಭೇಂದ್ರಪ್ಪ, ಮೂಡ್ನಾಕೂಡು ಪ್ರಕಾಶ್, ಹೊನ್ನೂರು ಎಂ.ಮಹದೇವಸ್ವಾಮಿ ಅವರನ್ನು ನೇಮಕ ಮಾಡಿ ಆದೇಶ ಹೊರಡಿಸಲಾಗಿದೆ.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಆದೇಶದ ಮೇರೆಗೆ ಚಾಮರಾಜನಗರ ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನ್ ಕುಮಾರ್ ನೇಮಕಗೊಳಿಸಿ ಆದೇಶ ಹೊರಡಿಸಿದ್ದು, ತಮಗೆ ನೀಡಿರುವ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಿ ಪಕ್ಷ ಸಂಘಟನೆಗೆ ಶ್ರಮಿಸುವಂತೆ ನೂತನ ಪ್ರಧಾನ ಕಾರ್ಯದರ್ಶಿಗಳಿಗೆ ಸಲಹೆ ನೀಡಿದ್ದಾರೆ.

ಅಂಬೇಡ್ಕರ್, ಭಗೀರಥ ಉಪ್ಪಾರ ಭವನ ಉದ್ಘಾಟನೆ



ಕುಂತೂರು ಗ್ರಾಪಂ ವ್ಯಾಪ್ತಿಯ ಹಲವು ಗ್ರಾಮಗಳಲ್ಲಿ ನಿರ್ಮಾಣವಾಗಿರುವ ಭವನಗಳನ್ನು ಶಾಸಕ ಎ.ಆರ್.ಕೃಷ್ಣಮೂರ್ತಿ ಉದ್ಘಾಟಿಸಿದರು.

ಕೊಳ್ಳೇಗಾಲ, ಡಿ.4–ತಾಲೂಕಿನ ಕುಂತೂರು ಗ್ರಾಪಂ ವ್ಯಾಪ್ತಿಯ ಹಲವು ಗ್ರಾಮಗಳಲ್ಲಿ ನಿರ್ಮಾಣವಾಗಿರುವ ಭವನಗಳನ್ನು ಉದ್ಘಾಟಿಸಿದ ಶಾಸಕ ಎ.ಆರ್.ಕೃಷ್ಣಮೂರ್ತಿ ಅವರು ಹಲವು ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿದರು.

ಮಲ್ಲಹಳ್ಳಿಮಾಳ ಗ್ರಾಮದಲ್ಲಿ ನಿರ್ಮಿಸಿರುವ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನ, ಕುಂತೂರು ಮೋಳೆ ಗ್ರಾಮದಲ್ಲಿ ನಿರ್ಮಿಸಿರುವ ಭಗೀರಥ ಉಪ್ಪಾರ ಸಮುದಾಯ ಭವನವನ್ನು ಶಾಸಕರು ಉದ್ಘಾಟಿಸಿದರು. ಅಲ್ಲದೇ ಕುಂತೂರು ಗ್ರಾಮದಲ್ಲಿ 10 ಲಕ್ಷ ರೂ. ವೆಚ್ಚದ ಅಂಬೇಡ್ಕರ್ ಭವನದ ಮುಂದುವರೆದ ಕಾಮಗಾರಿಗಳಿಗೆ ಶಾಸಕರು ಭೂಮಿ ಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಶಾಸಕರು ನಮ್ಮದು ನುಡಿದಂತೆ ನಡೆದ ಗ್ಯಾರಂಟಿ ಸರ್ಕಾರ. ನಮ್ಮ ಕಾಂಗ್ರೆಸ್ ಸರ್ಕಾರ ಜನಪರ ಕಾಳಜಿಯಿಂದ ಕಾರ್ಯ ನಿರ್ವಹಿಸುತ್ತಿದೆ. ರಾಜ್ಯ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಎರಡೂವರೆ ವರ್ಷಗಳಾಗಿದ್ದು, ಇದುವರೆಗೆ ಜನತೆಗೆ ನೀಡಿದ ಹಲವು ಬೇಡಿಕೆ ಈಡೇರಿಸುವ ಮೂಲಕ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಿದ್ದೇನೆ ಎಂದರು.

ಈ ವೇಳೆ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಚಂದ್ರು, ತಾಲೂಕು ಅಧ್ಯಕ್ಷ ರಾಜೇಂದ್ರ, ಯಳಂದೂರು ತಾಲೂಕು ಅಧ್ಯಕ್ಷ ಪ್ರಭುಪ್ರಸಾದ್, ಉಪ್ಪಾರ ನಿಗಮ ಮಾಜಿ ರಾಜ್ಯಾಧ್ಯಕ್ಷ ಶಿವಕುಮಾರ್, ಕುಂತೂರು ಗ್ರಾಪಂ ಅಧ್ಯಕ್ಷೆ ಗಂಗಮ್ಮಣಿ, ಉಪಾಧ್ಯಕ್ಷೆ ನಾಗರತ್ನಮ್ಮ, ಉಪ್ಪಾರ ಸಂಘದ ಅಧ್ಯಕ್ಷ ರಮೇಶ್, ತಾಪಂ ಮಾಜಿ ಉಪಾಧ್ಯಕ್ಷ ಮಲ್ಲಣ್ಣ, ಮುಖಂಡರಾದ ತೋಟೇಶ್, ಚೇತನ್ ದೊರೆ, ತಾಪಂ ಇಓ ಗುರುಶಾಂತಪ್ಪ ಬೆಳ್ಳುಂಡಗಿ, ನಿರ್ಮಿತಿ ಕೇಂದ್ರ ಉಪಯೋಜನಾ ವ್ಯವಸ್ಥಾಪಕ ಪ್ರತಾಪ್ ಇದ್ದರು.

ಕಾರಾಗೃಹದಲ್ಲಿ ಅರ್ಥಪೂರ್ಣ ಹೆಚ್‌ಐವಿ ಜಾಗೃತಿ ಕಾರ್ಯಕ್ರಮ



ಜಿಲ್ಲಾ ಕಾರಾಗೃಹದಲ್ಲಿ ಏಡ್ಸ್ ಕುರಿತು ಜಾಗೃತಿ, ಅರಿವು ಕಾರ್ಯಕ್ರಮ ನಡೆಯಿತು.

ಚಾಮರಾಜನಗರ, ಡಿ.4– ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ, ಜಿಲ್ಲಾಡಳಿತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಪಂ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಏಡ್ಸ್ ನಿಯಂತ್ರಣ ಘಟಕ, ಜಿಲ್ಲಾ ಕಾರಾಗೃಹ ಹಾಗೂ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸಹಯೋಗದಲ್ಲಿ ವಿಶ್ವ ಏಡ್ಸ್ ದಿನಾಚರಣೆ ಅಂಗವಾಗಿ ನಗರದ ಜಿಲ್ಲಾ ಕಾರಾಗೃಹದಲ್ಲಿರುವ ವಿಚಾರಣಾಧೀನ ಖೈದಿ ಹಾಗೂ ಸಿಬ್ಬಂದಿಗಳಿಗೆ ಹೆಚ್‌ಐವಿ/ಏಡ್ಸ್ ಕುರಿತು ಜಾಗೃತಿ, ಅರಿವು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಈಶ್ವರ ಅವರು ಕಾರ್ಯಕ್ರಮ ಉದ್ಘಾಟಿಸಿ ಪ್ರತಿಜ್ಞಾ ವಿಧಿ ಬೋಧಿಸಿ, ಹೆಚ್‌ಐವಿ/ಏಡ್ಸ್ ಹರಡುವಿಕೆ ಹಾಗೂ ಅದರಿಂದ ಆಗುವ ಪರಿಣಾಮಗಳ ಕುರಿತು ವಿವರಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಎಸ್.ಚಿದಂಬರ ಮಾತನಾಡಿ, ಸೋಂಕಿತರ ಸಂಖ್ಯೆ ಹೆಚ್ಚಾಗುತ್ತಿರುವುದು ಕಳವಳಕಾರಿ. ಹೆಚ್‌ಐವಿ/ಏಡ್ಸ್ ಹರಡುವಿಕೆ ಬಗ್ಗೆ ತಿಳುವಳಿಕೆ, ಅರಿವು ಇದ್ದವರೂ ಕೂಡ ಸೋಂಕಿಗೆ ತುತ್ತಾಗುತ್ತಿರುವುದು ವಿಷಾದನೀಯ. ಸಂಪೂರ್ಣ ಚಿಕಿತ್ಸೆಯನ್ನು ಸರ್ಕಾರವೇ ಉಚಿತವಾಗಿ ಒದಗಿಸುತ್ತಿದೆ. ಸುಖಕ್ಕಾಗಿ ಜೀವನ ಹಾಳುಮಾಡಿಕೊಳ್ಳಬಾರದು ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾರಾಗೃಹ ಅಧೀಕ್ಷಕ ಎನ್.ಎಸ್.ಶಿವಕುಮಾರ್, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಆರೋಗ್ಯದ ಕಡೆಗೆ ಹೆಚ್ಚಿನ ಗಮನ ಹರಿಸಬೇಕು. ವಿಶೇಷವಾಗಿ ಯುವಜನರು ಒಳ್ಳೆಯ ಹವ್ಯಾಸ ರೂಢಿಸಿಕೊಂಡು ಉತ್ತಮ ಜೀವನ ಶೈಲಿ ಅಳವಡಿಸಿಕೊಳ್ಳಬೇಕೆಂದು ಸಲಹೆ ನೀಡಿದರು.

ಇದೇ ವೇಳೆ ಅನಿಕೇತನ ರಂಗ ಕಲಾ ತಂಡದಿಂದ ಹೆಚ್‌ಐವಿ, ಏಡ್ಸ್ ಕುರಿತ ಜಗೃತಿಗಾಗಿ ಬೀದಿನಾಟಕ ಪ್ರದರ್ಶಿಸಲಾಯಿತು. ತಾಲೂಕು ಆರೋಗ್ಯಾಧಿಕಾರಿ ಡಾ.ಶ್ರೀನಿವಾಸ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ದೊರೆಸ್ವಾಮಿ ನಾಯಕ್, ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕದ ಮೇಲ್ವಿಚಾರಕ ಎನ್.ಜೆ.ಮಹದೇವ ಪ್ರಸಾದ್, ಸಂಯೋಜಕ ರವಿಕುಮಾರ್, ಕೂರ್ಗ್ ಸಂಪರ್ಕ ಕಾರ್ಯಕರ್ತರು ಹಾಗೂ ಯೋಜನೆಯ ಸಂಯೋಜಕ ಸುರೇಶ್ ಇತರರಿದ್ದರು.

ಕೊಳ್ಳೇಗಾಲ: 8 ಬ್ಯಾಟರಿಗಳ ಕಳವು

ಕೊಳ್ಳೇಗಾಲ, ಡಿ.4– ಪಟ್ಟಣದ ಅಮರಾನ್ ಬ್ಯಾಟರಿ ಶಾಪ್‌ನಲ್ಲಿ ಚಾರ್ಜ್ ಮಾಡಲು ಇಟ್ಟಿದ್ದ 8 ಬ್ಯಾಟರಿಗಳನ್ನು ದುಷ್ಕರ್ಮಿಗಳು ಬುಧವಾರ ರಾತ್ರಿ ಕಳವು ಮಾಡಿ ಪರಾರಿಯಾಗಿದ್ದಾರೆ.

ಪಟ್ಟಣದ ಅಜ್ಗಾಲ್ ಹೋಟೆಲ್ ಹಿಂಭಾಗದ ಬ್ಯಾಟರಿ ಶಾಪ್‌ನ ಬೀಗ ಒಡೆದು ಒಳ ನುಗ್ಗಿರುವ ದುಷ್ಕರ್ಮಿಗಳು ಬ್ಯಾಟರಿಗಳನ್ನು ಕಳವು ಮಾಡಿದ್ದಾರೆ. ಗುರುವಾರ ಬೆಳಗ್ಗೆ ಮಾಲೀಕ ಯೂಸಫ್ ಆದಿಲ್ ಅಂಗಡಿ ಬಾಗಿಲು ತೆರೆಯಲು ಬಂದಾಗ ಕಳ್ಳತನವಾಗಿರುವುದು ಬೆಳಕಿಗೆ ಬಂದಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಪಟ್ಟಣ ಠಾಣೆ ಪೊಲೀಸರು ಪರಿಶೀಲನೆ ನಡೆಸಿದರು. ಈ ಸಂಬಂದ ಕೊಳ್ಳೇಗಾಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜಿಲ್ಲಾ ವಿಕಲಚೇತನರ ಪುನರ್ವಸತಿ ಕೇಂದ್ರ ಉದ್ಘಾಟನೆ



ಜಿಲ್ಲಾ ವಿಕಲಚೇತನರ ಪುನರ್ವಸತಿ ಕೇಂದ್ರವನ್ನು ಶಾಸಕ ಪುಟ್ಟರಂಗಶೆಟ್ಟಿ ಉದ್ಘಾಟಿಸಿದರು.

ಚಾಮರಾಜನಗರ: ನಗರದ ಹೊರವಲಯದ ಸಿಮ್ಸ್ ಬೋಧನಾ ಆಸ್ಪತ್ರೆಯಲ್ಲಿ 30 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ನೂತನ ಜಿಲ್ಲಾ ವಿಕಲಚೇತನರ ಪುನರ್ವಸತಿ ಕೇಂದ್ರವನ್ನು ಶಾಸಕ ಸಿ.ಪುಟ್ಟರಂಗಶೆಟ್ಟಿ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಪುನರ್ವಸತಿ ಕೇಂದ್ರ ವಿಕಲಚೇತನರಿಗೆ ಕೃತಕ ಅಂಗಾಂಗಗಳನ್ನು ಜೋಡಣೆ ಮಾಡುವುದು, ದುರಸ್ತಿ ಪಡಿಸುವುದು, ಯುಡಿಐಡಿ ಕಾರ್ಡ್ ವಿತರಣೆ ಸೇರಿದಂತೆ ಇತರೆ ಕಾರ್ಯಗಳಿಗೆ ಅನುಕೂಲವಾಗಿದೆ. ಅಲ್ಲದೇ ವಿಕಲಚೇತನರಿಗೆ ಪುನರ್ವಸತಿ ಕಲ್ಪಿಸುವ ಜೊತೆಗೆ ವಿಕಲಚೇತನರಿಗೆ ಫಿಜಿಯೋಥೆರಪಿ, ಆಡಿಯಾಲಜಿ ಸೇರಿದಂತೆ ಇತರೆ ಹಲವು ಸೌಲಭ್ಯಗಳು ಪುನರ್ವಸತಿ ಕೇಂದ್ರದಲ್ಲಿ ಲಭ್ಯವಿರಲಿದೆ. ಪುನರ್ವಸತಿ ಕೇಂದ್ರವು ಪ್ರಮುಖವಾಗಿ ವಿಕಲಚೇತನರ ಕ್ಷೇಯೋಭಿವೃದ್ಧಿಗಾಗಿ ಕಾರ್ಯ ನಿರ್ವಹಿಸಲಿದೆ ಎಂದರು.

ಸಿಮ್ಸ್ ಡೀನ್ ಡಾ.ಮಂಜುನಾಥ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಡಿಡಿ ಸುರೇಶ್, ಅಂಗವಿಕಲರ ಇಲಾಖೆ ಅಧಿಕಾರಿ ಡಾ.ಮಂಜುನಾಥ್, ಡಿಎಸ್ ಚಿನ್ನಸ್ವಾಮಿ, ಆರ್‌ಎಂಓ ಯೋಗೇಶ್, ಡಿಡಿಆರ್‌ಸಿ ಪ್ರಭುಸ್ವಾಮಿ, ನಿರ್ಮಿತಿ ಕೇಂದ್ರದ ಭೀಮಸಾಗರ್, ಜಿಲ್ಲಾ ಅಂಗವಿಕಲರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ರಮೇಶ್, ರೂಪೇಶ್, ಕೃಷ್ಣಮೂರ್ತಿ, ಮಹದೇವಸ್ವಾಮಿ ಸೇರಿದಂತೆ ಇತರರಿದ್ದರು.

ದೇಶಪ್ರೇಮದ ಕಥೆ

ಆಜಾದ್ ಭಾರತ್



ನಟಿ, ನಿರ್ದೇಶಕಿಯಾಗಿ ಗುರುತಿಸಿಕೊಂಡಿರುವ ರೂಪಾ ಅಯ್ಯರ್ ಅವರೀಗ ದೇಶಭಕ್ತಿ ಸಾರುವ ಚಿತ್ರ ನಿರ್ದೇಶಿಸಿದ್ದಾರೆ. ಅದರ ಹೆಸರು ಆಜಾದ್ ಭಾರತ್. 2026ರ ಜ.2ಕ್ಕೆ ತೆರೆಕಾಣಲಿರುವ ಈ ಚಿತ್ರದ ಟ್ರೈಲರ್ ಬಿಡುಗಡೆ ಹಾಗೂ ಪತ್ರಿಕಾಗೋಷ್ಠಿ ಇತ್ತೀಚೆಗೆ ನಡೆಯಿತು.

ಈ ಸಂದರ್ಭದಲ್ಲಿ ಮಾತನಾಡಿದ ರೂಪಾ ಅಯ್ಯರ್, ಈ ಚಿತ್ರವನ್ನು ನೇತಾಜಿ ಸುಭಾಷ್‌ಚಂದ್ರ ಬೋಸ್ ಅವರಿಗೆ ಅರ್ಪಿಸಿದ್ದೇವೆ. ಅವರು ಸ್ಥಾಪಿಸಿದ ಮೊದಲ ಮಹಿಳಾ ಆರ್ಮಿಯ ಕಥೆ 'ಆಜಾದ್ ಭಾರತ್' ಚಿತ್ರದಲ್ಲಿದೆ. ಬಾಲಿವುಡ್ ನಟ ಶ್ರೇಯಸ್ ತಲ್ಪಾಡೆ ನೇತಾಜಿಯ ಪಾತ್ರಕ್ಕೆ ಬಣ್ಣ ಹಚ್ಚಿದ್ದಾರೆ. ನೀರಾ ಆರ್ಯ ಪಾತ್ರದಲ್ಲಿ ನಾನೇ ನಟಿಸಿದ್ದು, ಹಿತಾ ಚಂದ್ರಶೇಖರ್ ದುರ್ಗಾ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

ಸುರೇಶ್ ಒಬೆರಾಯ್, ಬಿರಾದಾರ್, ಸುಚೇಂದ್ರ ಪ್ರಸಾದ್, ಸುಭಾಷ್‌ಚಂದ್ರ ಉಳಿದ ಪಾತ್ರಗಳಲ್ಲಿದಾರೆ. ನನ್ನ ಪತಿ ಗೌತಮ್ ಶ್ರೀವತ್ಸ ಸಂಗೀತ ಸಂಯೋಜನೆ ಮಾಡಿದ್ದಾರೆ. ಜನವರಿ ತಿಂಗಳನ್ನು ಸುಭಾಷ್‌ಚಂದ್ರಬೋಸ್ ಅವರ ಜನ್ಮಮಾಸ ಎಂದು ಆಚರಿಸುತ್ತಾರೆ. ಹಾಗಾಗಿ ಜ.2ಕ್ಕೆ ನಮ್ಮ ಸಿನಿಮಾ ಬಿಡುಗಡೆ ಮಾಡುತ್ತಿದ್ದೇವೆ ಎಂದರು.

ನಟ ಸುಚೇಂದ್ರ ಪ್ರಸಾದ್ ಮಾತನಾಡುತ್ತಾ, ರೂಪಾ ಅಯ್ಯರ್ ಅವರು ಒಂದು ಕಾಲದ, ಹೇಳದೇ ಹೋದ ಘಟನೆಗಳನ್ನು ತೆರೆ ಮೇಲೆ ಹೇಳಹೊರಟಿದ್ದಾರೆ. ಇದಕ್ಕೆ ಮುಖ್ಯ ಕಾರಣ ಅವರಲ್ಲಿರುವ ರಾಷ್ಟ್ರಪ್ರೇಮ ಎಂದರು. ಇಂತಹ ದೇಶಪ್ರೇಮ ಸಾರುವ ಚಿತ್ರದಲ್ಲಿ ನಟಿಸಿದ ಖುಷಿ ನನಗಿದೆ ಎಂದು ಹಿತಾ ಚಂದ್ರಶೇಖರ್ ಹೇಳಿದರು.



ಗ್ರಾಮ ಪಂಚಾಯ್ತಿ ಅಧ್ಯಕ್ಷೆ

ಜೈ ಲಲಿತಾ



ಅತಿಥಿ ಪಾತ್ರದಲ್ಲಿ ಯಶವಂತ ಸರದೇಶಪಾಂಡೆ

ಹಳ್ಳಿಯಲ್ಲಿ ಮಾವ-ಸೊಸೆ ನಡುವೆ ನಡೆಯುವ ಪೊಲಿಟಿಕಲ್ ಡ್ರಾಮಾ ಕಥಾನಕ ಒಳಗೊಂಡ ಧಾರಾವಾಹಿ ಜೈಲಲಿತಾ. ಡಿ.೩ರಿಂದ ಸುವರ್ಣ ವಾಹಿನಿಯಲ್ಲಿ ಮೂಡಿಬರಲಿರುವ ಈ ಕಥೆಗೆ ದರ್ಶಿತ್ ಆಕ್ಷನ್ ಕಟ್ ಹೇಳುತ್ತಿದ್ದು, ಶ್ರೀನಿಧಿ ಡಿಎಸ್. ನಿರ್ಮಾಣದ ಜವಾಬ್ದಾರಿ ಹೊತ್ತಿದ್ದಾರೆ. ನಾಯಕ ಜೈರಾಜ್ ಪಾತ್ರದಲ್ಲಿ ಶಿವಾಂಕ್, ನಾಯಕಿ ಲಲಿತಾಳಾಗಿ ಮನಸ್ವಿ ಹಾಗೂ ಮಾವನಾಗಿ ಸುನಿಲ್ ಪುರಾಣಿಕ್ ನಟಿಸಿದ್ದಾರೆ. ಸ್ಪಂದನಾ ಪ್ರಸಾದ್ ಅತ್ತೆ ಪರಮೇಶ್ವರಿ ಪಾತ್ರ ನಿರ್ವಹಿಸಿದ್ದಾರೆ. ಇತ್ತೀಚೆಗೆ ನಡೆದ ಪತ್ರಿಕಾಗೋಷ್ಠಿಯಲ್ಲಿ ಜೈ ಲಲಿತಾ ತಂಡ ಒಂದಷ್ಟು ಮಾಹಿತಿ ಹಂಚಿಕೊಂಡಿತು.

ಹಳ್ಳಿಯ ಸಂಪ್ರದಾಯಸ್ಥ ಕುಟುಂಬದಲ್ಲಿ ಬೆಳೆದ ಲಲಿತಾ, ಅಚಾನಕ್ಕಾಗಿ ರಾಜಕೀಯಕ್ಕೆ ಎಂಟ್ರಿ ಕೊಟ್ಟು ಚುನಾವಣೆಗೆ ನಿಂತು ಗ್ರಾಮಪಂಚಾಯ್ತಿ ಅಧ್ಯಕ್ಷೆಯೂ ಆಗುತ್ತಾಳೆ. ಅವಳ ಏಳಿಗೆ ಸಹಿಸದ ರಾಜಕಾರಣಿ ದೇವರಾಜ್, ಲಲಿತಾಳನ್ನು ತನ್ನ ಸೊಸೆ ಮಾಡಿಕೊಳ್ಳುತ್ತಾನೆ. ಮದುವೆ ಬಗ್ಗೆ ತನ್ನದೇ ಕನಸು ಕಟ್ಟಿಕೊಂಡಿದ್ದ ಲಲಿತಾಗೆ ವಿವಾಹಬಂಧನ ಶರಪಂಜರವಾಗುತ್ತದೆ, ಊರನ್ನೇ ಗೆದ್ದವಳು ಅತ್ತೆಯ ಮನಗೆದ್ದು ಸೊಸೆಯ ಸ್ಥಾನ ಉಳಿಸಿಕೊಳ್ತಾಳಾ? ಆಕೆಯ ಮುಗ್ದತೆಗೆ ಜೈರಾಜ್ ಮನ ಸೋಲ್ತಾನಾ? ಇದೆಲ್ಲದಕ್ಕೂ ಜೈ ಲಲಿತಾ ಉತ್ತರವಾಗಲಿದೆ.

ನಿರ್ದೇಶಕ ದರ್ಶಿತ್ ಮಾತನಾಡಿ, ಹಳ್ಳಿಯ 3 ಪಾತ್ರಗಳ ಸುತ್ತ ನಡೆಯುವ ಪೊಲಿಟಿಕಲ್ ಡ್ರಾಮಾ. ಎಲ್ಲರಿಗೂ ಕನೆಕ್ಟ್ ಆಗುವಂಥ ಕಥೆ ಇದರಲ್ಲಿದೆ. ನಿರ್ಮಾಪಕರು ನಾವು ಕೇಳಿದ್ದಕ್ಕಿಂತ ಹೆಚ್ಚಾಗೇ ಕೊಟ್ಟಿದ್ದರಿಂದ ಯಾವುದೇ ಸಿನಿಮಾಗೂ ಕಮ್ಮಿ ಇಲ್ಲದಂತೆ ಜೈ ಲಲಿತಾ ಮೂಡಿಬಂದಿದೆ. ಲಲಿತಾ ಪಾತ್ರಕ್ಕೆ ಮನಸ್ವಿ ಹೇಳಿ ಮಾಡಿಸಿದಂತಿದ್ದರು. ಅವರಿಂದಲೇ ಆ ಪಾತ್ರಕ್ಕೆ ತೂಕ ಬಂದಿದೆ. ತಂದೆಯ ಪಾತ್ರದಲ್ಲಿ ಸುನಿಲ್ ಪುರಾಣಿಕ್ ಅದ್ಭುತವಾಗಿ ನಟಿಸಿದ್ದಾರೆ. ಜೈ ತಾಯಿ ಪರಮೇಶ್ವರಿಯದು ಸವಾಲಿನ ಪಾತ್ರ. ಅದನ್ನು ಸ್ಪಂದನಾ ಪ್ರಸಾದ್ ಸಮರ್ಥವಾಗಿ ನಿಭಾಯಿಸಿದ್ದಾರೆ. ದಿ.ಯಶವಂತ್ ಸರದೇಶಪಾಂಡೆ ಅವರು ಅತಿಥಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, ನಮ್ಮ ಜತೆ ಕೆಲಸ ಮಾಡಿದ ಕೆಲವೇ ದಿನಗಳಲ್ಲಿ ನಿಧನರಾದರು ಎಂದರು. ನಟಿ ಸ್ಪಂದನಾ ಪ್ರಸಾದ್ ಮಾತನಾಡಿ, ಖಡಕ್ ಅಮ್ಮ, ಮನೆ ಸದಸ್ಯರು, ತಪ್ಪು ಹೆಜ್ಜೆ ಇಟ್ಟಾಗ ಬುದ್ದಿ ಹೇಳುವ ಮಗ ಅಂದ್ರೆ ತುಂಬಾ ಇಷ್ಟಪಡುವ, ರಾಜಕಾರಣಿ ಕುಟುಂಬದಲ್ಲೇ ಇದ್ದರೂ ಅದರಿಂದ ದೂರವಿರುವವಳು ಎಂದು ತನ್ನ ಪಾತ್ರ ವಿವರಿಸಿದರು. ನಾಯಕಿ ಮನಸ್ವಿ ಮಾತನಾಡಿ, ಎಲ್ಲಾ ರೀತಿಯ ಎಮೋಷನ್ಸ್ ಕ್ಯಾರಿ ಮಾಡುವಂಥ ಲಲಿತಾ ಪಾತ್ರ ನನ್ನದು ಎಂದರು.



ನವೀನ್ ಸಜ್ಜು ಈಗ

ಲೋ ನವೀನಾ




ಗಾಯಕ ನವೀನ್ ಸಜ್ಜು ಇದೀಗ ನಾಯಕನಾಗಿದ್ದಾರೆ, ಅವರ ನಟನೆಯ 'ಲೋ ನವೀನ' ಚಿತ್ರದ ಕೋಣಾಣೆ ಎಂಬ ಹಾಡು ಇತ್ತೀಚೆಗೆ ಬಿಡುಗಡೆಯಾಯಿತು. ಜನಪದ ಶೈಲಿಯ ಈ ಹಾಡನ್ನು ಹೆಚ್.ಡಿ.ಕೋಟೆಯ ಗ್ರಾಮೀಣ ಪ್ರತಿಭೆಗಳಾದ ಚಮ್ಮಮ್ಮ ಹಾಗೂ ಲಕ್ಷ್ಮಮ್ಮ ಹಾಡಿದ್ದಾರೆ. ಕೀರ್ತಿಸ್ವಾಮಿ ಅವರ ನಿರ್ಮಾಣದ, ದನುರ್ಧಾರಿ ಪವನ್ ನಿರ್ದೇಶನದ ಲೋ ನವೀನ ಚಿತ್ರದ ಮೊದಲ ಹಾಡು ಇದಾಗಿದೆ.

ನಾಯಕ, ಸಂಗೀತ ನಿರ್ದೇಶಕ ನವೀನ್ ಸಜ್ಜು ಮಾತನಾಡುತ್ತಾ, ಆರ್ಕೆಸ್ಟ್ರಾದಲ್ಲಿ ಹಾಡುತ್ತಿದ್ದಾಗ ನನ್ನ ಪ್ರತಿಭೆ ಗುರುತಿಸಿದ ಪೂರ್ಣಚಂದ್ರ ತೇಜಸ್ವಿ ಅವರು ಲೂಸಿಯಾ ಚಿತ್ರದಲ್ಲಿ ಅವಕಾಶ ಕೊಟ್ಟರು. ನಾನು, ಸುನೀಲ್ ಮೈಸೂರು ಹಾಗೂ ಸ್ನೇಹಿತರೆಲ್ಲ ಸೇರಿ ಈ ಚಿತ್ರದ ಕಥೆ ಬರೆದಿದ್ದೇವೆ. ಚಿತ್ರವೀಗ ಬಿಡುಗಡೆಯ ಹಂತಕ್ಕೆ ಬಂದಿದೆ. ಐದು ಹಾಡುಗಳು ಚಿತ್ರದಲ್ಲಿದ್ದು, ಮೊದಲ ಹಾಡು ಕೋಣಾಣೆ ಈಗ ಬಿಡುಗಡೆಯಾಗಿದೆ. ಲೊಕೇಶನ್ ಹುಡುಕಲು ಹೆಚ್.ಡಿ.ಕೋಟೆಯ ಹಿರೇನಂದಿ ಗ್ರಾಮಕ್ಕೆ ಹೋಗಿದ್ದಾಗ, ಅಲ್ಲಿ ಚಮ್ಮಮ್ಮ ಹಾಗೂ ಲಕ್ಷಮ್ಮ ಹೊಲದಲ್ಲಿ ಕೆಲಸ ಮಾಡುತ್ತಾ ಹಾಡುತ್ತಿದ್ದುದನ್ನು ನೋಡಿದೆ. ಅವರ ಧ್ವನಿ ತುಂಬಾ ಚೆನ್ನಾಗಿತ್ತು, ಇವರ ಕೈಲಿ ನಮ್ಮ ಚಿತ್ರದ ಹಾಡನ್ನು ಹಾಡಿಸಬೇಕೆಂದು ನಿರ್ಧರಿಸಿ, ಅವರನ್ನು ಕರೆಸಿಕೊಂಡು, ಅವರಿಂದಲೇ ಈ ಸಾಂಗ್ ಹಾಡಿಸಿದ್ದೇನೆ. ಉಳಿದ ಹಾಡುಗಳು ಹಾಗೂ ಟ್ರೈಲರ್ ಸದ್ಯದಲ್ಲೇ ಬಿಡುಗಡೆಯಾಗಲಿವೆ ಎಂದರು.

ನಿರ್ಮಾಪಕಿ ಕೀರ್ತಿಸ್ವಾಮಿ ಮಾತನಾಡುತ್ತಾ, ನನ್ನ ಪತಿ ಮಳವಳ್ಳಿಯವರು. 35 ವರ್ಷಗಳಿಂದ ಅಮೇರಿಕಾದಲ್ಲಿದ್ದೇವೆ. ಅಲ್ಲೂ ಸಾಕಷ್ಟು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುತ್ತೇವೆ. ಕಾರ್ಯಕ್ರಮವೊಂದರಲ್ಲಿ ನವೀನ್ ಸಜ್ಜು ಭೇಟಿಯಾದಾಗ ಚಿತ್ರದ ಕುರಿತು ಹೇಳಿದರು. ಹಳ್ಳಿಯ ಸೊಗಡಿನ ಕಥೆ ನಮಗೂ ಇಷ್ಟವಾಯಿತು. ಹಾಗಾಗಿ ಚಿತ್ರ ನಿರ್ಮಾಣಕ್ಕೆ ಮುಂದಾದೆವು ಎಂದರು.

ನಾನು ಮಳವಳ್ಳಿಯವನು. ಚಿಕ್ಕ ವಯಸ್ಸಿನಲ್ಲೇ ಗ್ರಾಮೀಣ ಜನಪದ ಹಾಡುಗಳನ್ನು ಕೇಳುತ್ತಾ ಬೆಳೆದವನು. ನಲವತ್ತು ವರ್ಷಗಳಿಂದ ಅಮೇರಿಕಾದಲ್ಲಿದ್ದರೂ ಕನ್ನಡವನ್ನೇ ಮಾತನಾಡುತ್ತೇನೆ. ನವೀನ್ ಸಜ್ಜು ಹಳ್ಳಿಯ ಸೊಗಡಿನ ಕಥೆ ಹೇಳಿದಾಗ ನನಗೆ ಬಹಳ ಖುಷಿಯಾಯಿತು ಎಂದು ಮತ್ತೊಬ್ಬ ನಿರ್ಮಾಪಕ ಬೆನ್ ಚಿಕ್ಕಸ್ವಾಮಿ ಹೇಳಿದರು.



ಸಿನಿಪದಬಂಧ-605



ಉಮ್ಮತ್ತೂರು ಇಂದುಶೇಖರ್
ಮೊ.9880820462

■	1		2		■	3	4		5	
■	■	■		■	■	■		■		■
6	7	■		■	8				■	■
■		■		■		■		■	■	9
■	10							■	11	
■		■	■	■		■	■	■	■	
12	■	13	■	14		15				
	■		■		■		■	■	■	
16						■	■	17	■	
	■		■		■	18				
	■		■		■	■	■		■	■

ಹೆಸರು
ವಿಳಾಸ

ದೂರವಾಣಿ ಸಂಖ್ಯೆ

ಎಡದಿಂದ ಬಲಕ್ಕೆ

1. ಅಂಬರೀಷ್ – ಅಂಬಿಕಾಳ 'ರುಧಿರಕ್ಕೆ ಶ್ರೀಕುಮಾರನ್ ತಂಬಿ ನಿರ್ದೇಶಕ 4
3. ವರ್ಷ ಚಿತ್ರದಲ್ಲಿ ವಿಷ್ಣುವರ್ಧನ್ ಸಹೋದರಿಯರಲ್ಲಿ ಒಬ್ಬಾಕೆ ! 5
6. ಸ್ವಾತಿ ಮುತ್ತು ಚಿತ್ರದ ನಾಯಕಿ 2
8. ಕನ್ನಡದ 'ಲವ್ ಸ್ಟೋರಿ' 4
10. ಪ್ರಕಾಶ್ ರೈ – ಅಮೂಲ್ಯ ಅಭಿನಯದಲ್ಲಿ ತಂದೆ ಮತ್ತು ಮಗಳ ಸಂಬಂಧವಿದೆ 7
11. ಆನಂದದೊಂದಿಗೆ ಬಂದ ಕೂಸು 2
14. 'ಇಂದಿಗಿಂತ ಅಂದೇನೆ ಚುದವು... ಆಹಾ ಎಂಥ ಚಂದ ಆ ನಮ್ಮ ಕಾಲವು...', ಗೀತೆಯ ಚಿತ್ರ 7
16. ಶ್ರೀನಾಥ್ – ಆರತಿ ಚಳಿಗಾಲದಲ್ಲಿ ಕಂಡ ಸ್ವಪ್ನ 6
18. ಜಿ. ವಿಶ್ವನಾಥನ್ ನಿರ್ದೇಶನದ ಸರ್ಪಸ್ತ್ರೀ 5

ಮೇಲಿನಿಂದ ಕೆಳಕ್ಕೆ

2. ಮನ್ಮಥನ ಹೆಂಡತಿ ಓದಿದ ಕಾಮ ಪುಸ್ತಕ 5
4. ಶಂಕರ್ ನಾಗ್ ಕಂಡ ಹೆತ್ತವಳ ಸ್ವಪ್ನ 5
5. ಗಜಪತಿಯ "ಸೊಕ್ಕು" ಭಂಗವಾಗಿದೆ 2
7. ತನ್ನನ್ನು ಬಿಟ್ಟರೆ ಯಾರಿಲ್ಲ ಎಂದುರಿಯಲ್ ಸ್ಟಾರ್ ಹೇಳಿಕೊಂಡಿದ್ದಾನೆ 4
8. ಅಜಯ್ ರಾವ್ – ಶೀಲಾ ಕೌರ್ ಅಭಿನಯದ ಚಿತ್ರ 5
9. ಚಿತ್ರದುರ್ಗದ ಕಲ್ಲಿನ ಕೋಟೆಯ ವೀರ 7
12. ಶ್ರೀನಾಥ್ ಏನೂ ಅರಿಯದ ಮನುಷ್ಯ 5
13. ಅಂಬರೀಷ್ ಗೆಲುವಿನ ಕಠಾರಿ ಹಿಡಿದಿದ್ದಾನೆ 5
14. ಮಗನ ಹೆಂಡತಿ 'ಸಿತಾರಾ' ಸೊಗಸಿನವಳು 5
15. ಕಿಂಕರನ ಬಾಸ್ 2
17. ಗುರುಬ್ರಹ್ಮ ಚಿತ್ರದ ನಾಯಕಿ ಒಳ್ಳೆಯ ಹೆಣ್ಣು 3

ಸಿನಿ ಪದಬಂಧ 604ರ ಉತ್ತರ

■	ಕಾ	ದಂ	ಬ	ರಿ	■	ಅಂ	ಗು	ಲಿ	ಮಾ	ಲ
■	■	■	ಜಾ	■	■	■	ರು	■	ರಿ	■
ಸೋ	ಮ	■	ರ್	■	ಬಾ	ಲ	ಶಿ	ವ	■	■
■	ಧು	■	ಭೀ	■	ಳಿ	■	ಷ್ಯ	■	■	ಮ
■	ಮಾ	ಡಿ	ಮ	ಡಿ	ದ	ವ	ರು	■	ರಾ	ಮ
■	ಸ	■	■	■	ಮ	■	■	■	■	ತೆ
ಚಂ	■	ಹ	■	ಮ	ನೆ	ಯೇ	ಮಂ	ತ್ರಾ	ಲ	ಯ
ಡ	■	ರ್ಷ	■	ಣ್ಣಿ	■	ಸು	■	■	■	ಮ
ಮಾ	ನ	ವ	ದಾ	ನ	ವ	■	■	ಚಂ	■	ಡಿ
ರು	■	ರ್ಧ	■	ಮ	■	ಒ	ಡೆ	ದ	ಹಾ	ಲು
ತ	■	ನ್	■	ಗ	■	■	■	ನ	■	■

ವಿಜೇತರು: ಎಂ.ಎಸ್.ಧರ್ಮರಾಜೇ ಅರಸ್, ನಂ.733, 'ಬೃಂದಾವನ', EWS ಹುಡ್ಕೋ ಎಂ ಬ್ಲಾಕ್, ಕುವೆಂಪುನಗರ, ಮೈಸೂರು-08

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಫಸ್ಟ್ ಸ್ಯಾಲರಿ ತಾಯಿ ಮಗನ ಕಥೆ



ರಾಘವೇಂದ್ರ ಚಿತ್ರವಾಣಿಯ ಸುಧೀಂದ್ರ ಶ್ರೀವೆಂಕಟೇಶ್ ನಿರ್ಮಾಣದ 'ಫಸ್ಟ್ ಸ್ಯಾಲರಿ' ಕಿರುಚಿತ್ರದ ಪ್ರಥಮ ಪ್ರದರ್ಶನ ಹಾಗೂ ಪತ್ರಿಕಾಗೋಷ್ಠಿ ಇತ್ತೀಚೆಗೆ ನಡೆಯಿತು. ಈ ಚಿತ್ರಕ್ಕೆ ಅವರ ಪುತ್ರ ಪವನ್ ವೆಂಕಟೇಶ್ ನಿರ್ದೇಶನ ಮಾಡಿದ್ದಾರೆ. ಈ ಸಂದರ್ಭದಲ್ಲಿ ಹಿರಿಯ ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್, ನಟಿ ಶ್ರುತಿ ಕೃಷ್ಣ ಹಾಗೂ ಗುರುಗಳಾದ ಕಮಲಾಕರ್ ಉಪಸ್ಥಿತರಿದ್ದರು.

ರಾಕ್‌ಲೈನ್ ವೆಂಕಟೇಶ್ ಮಾತನಾಡುತ್ತಾ, ಸುಧೀಂದ್ರ ನನಗೆ ಬಹಳ ಆತ್ಮೀಯರು. ಈಗ ಅವರ ಮೊಮ್ಮಗ ಪವನ್, ಕಿರುಚಿತ್ರ ನಿರ್ದೇಶಿಸುವ ಮೂಲಕ ಚಿತ್ರರಂಗಕ್ಕೆ ಎಂಟ್ರಿ ಕೊಟ್ಟಿದ್ದಾರೆ. ಇದರಲ್ಲಿರುವ ಕಥೆ ಮನಮುಟ್ಟುವಂತಿದೆ. ಕಲಾವಿದರು ಕೂಡ ಚೆನ್ನಾಗಿ ನಟಿಸಿದ್ದಾರೆ ಎಂದರು.

ನಟಿ ಶ್ರುತಿ ಕೃಷ್ಣ ಮಾತನಾಡುತ್ತಾ, ಈ ಚಿತ್ರ ನೋಡುತ್ತಿರುವಾಗಲೇ ನನ್ನ ಫಸ್ಟ್‌ಸ್ಯಾಲರಿ ಎಷ್ಟು ಅಂತ ಅಪ್ಪನಿಗೆ ಕಾಲ್‌ಮಾಡಿ ಕೇಳಿದೆ. ಅವರು 3500 ರೂ. ಅಂದರು. ಅಲ್ಲದೆ ಸುಧೀಂದ್ರ ಅವರ 'ನಗುನಗುತಾ ನಲಿ' ಚಿತ್ರದಲ್ಲೂ ನಾನು ಅಭಿನಯಿಸಿದ್ದೆ. ಈಗ ಅವರ ಮೊಮ್ಮಗ ನಿರ್ದೇಶಕನಾಗಿದ್ದಾನೆ. ತಾಯಿ, ಮಗನ ಸೆಂಟಿಮೆಂಟ್ ಸನ್ನಿವೇಶಗಳು ಮನಸಿಗೆ ಹತ್ತಿರವಾಯಿತು. ಕಣ್ಣಂಚಲಿ ನೀರು ತರಿಸಿತು ಎಂದರು.

ಮಗನ ಪ್ರಯತ್ನಕ್ಕೆ ಬೆನ್ನೆಲುಬಾಗಿ ನಿಂತಿರುವ ತಂದೆ ಸುಧೀಂದ್ರ ವೆಂಕಟೇಶ್ ಮಾತನಾಡುತ್ತಾ, ನನ್ನ ಮೊದಲ ಸ್ಯಾಲರಿ ಕೊಟ್ಟವರು ರಾಕ್‌ಲೈನ್ ವೆಂಕಟೇಶ್. ನಮ್ಮ ಮೊದಲ ಚಿತ್ರದಲ್ಲಿ ನಟಿಸಿದವರು ಶೃತಿ ಹಾಗಾಗಿ ಇವರ ಸಮ್ಮುಖದಲ್ಲೇ ನನ್ನ ಮಗನ ಚಿತ್ರವನ್ನು ಲಾಂಚ್ ಮಾಡಿಸಿದೆ. ನಮ್ಮ ಚಿಕ್ಕಪ್ಪ ಡಿ.ವಿ.ಸುಧೀಂದ್ರ ಅವರು ಆರು ಚಿತ್ರಗಳನ್ನು ನಿರ್ಮಿಸಿದ್ದರು. ನಾನು ಮೊದಲ ಬಾರಿಗೆ ಈ ಕಿರುಚಿತ್ರ ನಿರ್ಮಿಸಿದ್ದೇನೆ. ಮಗ ಪವನ್ ಹಾಗೂ ಸ್ನೇಹಿತರು ಈ ಚಿತ್ರಕ್ಕಾಗಿ ತುಂಬಾ ಶ್ರಮಪಟ್ಟಿದ್ದಾರೆ ಎಂದರು.

ನಿರ್ದೇಶಕ ಪವನ್ ಮಾತನಾಡುತ್ತಾ, ನನ್ನ ಗೆಳೆಯ ವಿಜಯ್ ಶಿವಕುಮಾರ್ ಈ ಕಥೆ ಬರೆದು ನಾಯಕನ ಪಾತ್ರದಲ್ಲೂ ಅಭಿನಯಿಸಿದ್ದಾರೆ. ನನ್ನ ನಿರ್ದೇಶನದ ಕನಸನ್ನು ನನ್ನ ತಂದೆ ನನಸು ಮಾಡಿದ್ದಾರೆ. ಹಿರಿಯರೆಲ್ಲ ಬಂದು ಶುಭ ಹಾರೈಸಿದ್ದು ನನಗೆ ಸ್ಫೂರ್ತಿ ನೀಡಿದೆ. ಮುಂದೆ ಇನ್ನೂ ಒಳ್ಳೆಯ ಸಿನಿಮಾ ಮಾಡುವ ಯೋಚನೆಯಿದೆ ಎಂದರು. ತಾಯಿ ಪಾತ್ರದಲ್ಲಿ ಹರಿಣಿ ಶ್ರೀಕಾಂತ್, ಯತಿರಾಜ್, ತ್ರಿಶೂಲ್ ಸ್ನೇಹಶ್ರೀ, ರಕ್ಷಿತ್ ಕೂಡ ನಟಿಸಿದ್ದಾರೆ. ವಿಜಯ್ ಹರಿತ್ಸ ಅವರ ಸಂಗೀತ, ರಿಚರ್ಡ್ ಡ್ಯಾನಿಯಲ್ ಅವರ ಛಾಯಾಗ್ರಹಣ ಹಾಗೂ ಸಂಕಲನ, ಮನೋಜ್ ಕುಮಾರ್, ರವಿ ಸಾಸನೂರ್ ಸಹ ನಿರ್ದೇಶನ ಈ ಚಿತ್ರಕ್ಕಿದೆ.

'ಮುಜುಗರ' ಚಿತ್ರದಲ್ಲಿ ರಾಜೇಶ್ ಮೊಮ್ಮಗ



ಕನ್ನಡದ ಹಿರಿಯ ನಟ ರಾಜೇಶ್ ಅವರ ಮೊಮ್ಮಗ ಸಾಯಿನಂದ್ ಇದೀಗ ಚಿತ್ರರಂಗಕ್ಕೆ ಬಂದಿದ್ದಾರೆ. ತರುಣ್ ಎನ್.(ಜ್ಯೋತಿಪ್ರಿಯ) ನಿರ್ದೇಶನದ 'ಮುಜುಗರ' ಚಿತ್ರದಲ್ಲಿ ಅವರು ನಾಯಕನಾಗಿ ನಟಿಸುತ್ತಿದ್ದು, ಈ ಚಿತ್ರದ ಮುಹೂರ್ತ ಸಮಾರಂಭ ಗಣಪತಿ ದೇವಸ್ಥಾನದಲ್ಲಿ ನೆರವೇರಿತು. ಪ್ರಥಮ ಸನ್ನಿವೇಶಕ್ಕೆ ನಟ ಪ್ರಮೋದ್ ಶೆಟ್ಟಿ ಆರಂಭ ಫಲಕ ತೋರಿಸಿದರೆ, ನಿರ್ಮಾಪಕಿ ಶಾಂತ ಶ್ರೀನಿವಾಸ್ ಕ್ಯಾಮರಾ ಚಾಲನೆ ಮಾಡಿದರು.

ನಿರ್ದೇಶಕ ತರುಣ್ ಮಾತನಾಡಿ, ಇದು ನನ್ನ ಮೊದಲ ಚಿತ್ರ ಕಾಫಿ ತೋಟದ ಸುತ್ತ ನಡೆಯುವ ಪ್ರೇಮ ಕಥೆಯೊಂದನ್ನು ಈ ಚಿತ್ರದ ಮೂಲಕ ಹೇಳಹೊರಟಿದ್ದೇನೆ. ನಾಯಕರಾಗಿ ಸಾಯಿನಂದ್, ಸುಭಾಷ್, ನಾಯಕಿಯರಾಗಿ ನಿಮಿಷ್ಕ ಹಾಗೂ ತನು ಅಭಿನಯಿಸುತ್ತಿದ್ದಾರೆ. ಪ್ರಮೋದ್ ಶೆಟ್ಟಿ ಖಳನಾಯಕನಾಗಿ ಕಾಣಿಸಿಕೊಳ್ಳಲಿದ್ದಾರೆ. ಸಕಲೇಶಪುರ, ಚಿಕ್ಕಮಗಳೂರು, ಹೊರನಾಡು, ಮಡಿಕೇರಿ ಸುತ್ತಮುತ್ತ ಚಿತ್ರೀಕರಣ ನಡೆಯಲಿದೆ. ಜೈ ಆನಂದ್ ಛಾಯಾಗ್ರಹಣ, ಶ್ರೀಧರ್ ಸಂಭ್ರಮ್ ಸಂಗೀತ ಚಿತ್ರಕ್ಕಿದೆ ಎಂದರು.

ನಿರ್ಮಾಪಕ ಶ್ರೀನಿವಾಸ್ ಮಾತನಾಡುತ್ತಾ, ನಮ್ಮ ಸಂಸ್ಥೆಯ ನಿರ್ಮಾಣದ 2ನೇ ಚಿತ್ರವಿದು. ನಿರ್ದೇಶಕರು ಹೇಳಿದ ಕಥೆ ಇಷ್ಟವಾಗಿ ನಿರ್ಮಾಣಕ್ಕೆ ಮುಂದಾದೆ ಎಂದರು. ನಾಯಕ ಸಾಯಿನಂದ್ ಮಾತನಾಡುತ್ತಾ, ನಾನು ನಟನಾಗಲು ನನ್ನ ತಾತ ರಾಜೇಶ್ ಅವರೇ ಸ್ಫೂರ್ತಿ. ಇಂದು ಅವರಿದ್ದಿದ್ದರೆ ತುಂಬಾ ಖುಷಿಪಡುತ್ತಿದ್ದರು. ನಾಗತಿಹಳ್ಳಿ ಚಂದ್ರಶೇಖರ್ ಅವರ ಶಾಲೆಯಲ್ಲಿ ಅಭಿನಯ ಕಲಿತಿದ್ದೇನೆ. ನಾಯಕನಾಗಿ ನನ್ನ ಮೊದಲ ಚಿತ್ರವಿದು ಎಂದರು. ಸುಭಾಷ್, ನಿಮಿಷ್ಕ ಹಾಗೂ ತನು ತಂತಮ್ಮ ಪಾತ್ರಗಳ ಬಗ್ಗೆ ಚಿಕ್ಕದಾಗಿ ಪರಿಚಯಿಸಿಕೊಂಡರು. ಈ ಚಿತ್ರದಲ್ಲಿ ಐದು ಹಾಡುಗಳಿವೆ.

ಮೈಸೂರು ಮಿತ್ರ

ನಂ.ಗೂಡಲ್ಲಿ ಶ್ರೀಕಂಠೇಶ್ವರಸ್ವಾಮಿಯವರ ವೈಭವದ ಚಿಕ್ಕಜಾತ್ರಾ ಮಹೋತ್ಸವ

ಸಾವಿರಾರು ಭಕ್ತರು ಜಾತ್ರೆಯಲ್ಲಿ ಭಾಗಿ, ಚಲಿಸುವ ರಥೋತ್ಸವದ ಸೊಬಗು ಕಂಡು ಪುಳಕಿತರಾದ ಭಕ್ತವೃಂದ, ಹರಕೆ ತೀರಿಸಿದ ಭಕ್ತರು

ನಂಜನಗೂಡು: ದಕ್ಷಿಣಾಕಾಶಿ ಎಂದೇ ಪ್ರಸಿದ್ಧವಾಗಿರುವ ನಂಜನಗೂಡಿನ ಶ್ರೀ ಶ್ರೀಕಂಠೇಶ್ವರ ಸ್ವಾಮಿಯವರ ಚಿಕ್ಕಜಾತ್ರಾ ಮಹೋತ್ಸವವು ಗುರುವಾರ ಸಾವಿರಾರು ಭಕ್ತರ ಉದ್ಘೋಷ, ಜಯಘೋಷ ಜೈಕಾರದ ನಡುವೆ ವೈಭವಯುತವಾಗಿ ವಿಜೃಂಭಣೆಯಿಂದ ನೆರವೇರಿತು.

ಜಾತ್ರಾ ಮಹೋತ್ಸವದಲ್ಲಿ ಸಾವಿರಾರು ಭಕ್ತರು ಸಂಭ್ರಮ, ಸಡಗರದಿಂದ ಪಾಲ್ಗೊಂಡು ರಥೋತ್ಸವಗಳ ವೈಭವವನ್ನು ಕಂಡು ಭಕ್ತಿಯಿಂದ ಹಣ್ಣು ಜವನ ಎಸೆದು ಹರಕೆ ತೀರಿಸಿದರು. ಚಿಕ್ಕಜಾತ್ರಾ ಮಹೋತ್ಸವ ಹಾಗೂ ಹುಣ್ಣಿಮೆಯ ಅಂಗವಾಗಿ ಬೆಳಿಗ್ಗೆ 4 ಗಂಟೆಯಿಂದಲೇ ದೇವಾಲಯದಲ್ಲಿ ಪಾರ್ವತಿ ಸಮೇತ ಶ್ರೀಕಂಠೇಶ್ವರಸ್ವಾಮಿಯವರಿಗೆ ಕ್ಷೀರಾಭಿಷೇಕ, ಫಲಪಂಚಾಮೃತಾಭಿಷೇಕ ಹಾಗೂ ಮಹಾನ್ಯಾಸ ಪೂರ್ವಕವಾಗಿ ರುದ್ರಾಭಿಷೇಕವನ್ನು ನೆರವೇರಿಸಲಾಯಿತು.

ನಂತರ ದೇವಾಲಯದ ಪ್ರಧಾನ ಅರ್ಚಕರಾದ ನಾಗಚಂದ್ರ ದೀಕ್ಷಿತ್‌ರವರ ನೇತೃತ್ವದಲ್ಲಿ ಪ್ರಾತಃಕಾಲಪೂಜೆ, ನಿತ್ಯೋತ್ಸವ ಹಾಗೂ ಸಂಗಮಕಾಲಪೂಜೆ, ಮಾಧ್ಯಾನಕಾಲ ಪೂಜೆಯೊಂದಿಗೆ ಮಹಾಮಂಗಳಾರತಿಯನ್ನು ನೆರವೇರಿಸಿದ ಬಳಿಕ ದೇವಾಲಯದ ಒಳಾವರಣದಲ್ಲಿ ಗಣಪತಿ ಪೂಜೆ, ನವಗ್ರಹ ಪೂಜೆ, ಸ್ವಾಮಿಯವರ ಉತ್ಸವವನ್ನು ನೆರವೇರಿಸಿದ ನಂತರ ವಿವಿಧ ಧಾರ್ಮಿಕ ವಿಧಿ ವಿಧಾನಗಳನ್ನು ಪೂರೈಸಿ, ಬೆಳಿಗ್ಗೆ 9 ರಿಂದ 9.30 ಗಂಟೆಗೆ ಸಲ್ಲುವ ಶುಭ ಧನುರ್ ಲಗ್ನದಲ್ಲಿ ರಥೋತ್ಸವದಲ್ಲಿ ದೇವರ ಉತ್ಸವಮೂರ್ತಿಯನ್ನು ಪ್ರತಿಷ್ಠಾಪಿಸಲಾಯಿತು. ನಂತರ ಮಹಾಮಂಗಳಾರತಿ ನೆರವೇರಿಸುವುದರೊಂದಿಗೆ ರಥೋತ್ಸಕ್ಕೆ ಚಾಲನೆ ದೊರಕಿತು.

ಮೊದಲಿಗೆ ಮಹಾಗಣಪತಿ ಮತ್ತು ಚಂಡಿಕೇಶ್ವರ ರಥ, ಪಾರ್ವತಿ ಸಮೇತ ಶ್ರೀಕಂಠೇಶ್ವರ ರಥ, ಕೊನೆಯದಾಗಿ ಮನೋನ್ಮಣಿ ಅಮ್ಮನವರು ಮೂರು ರಥಗಳನ್ನು ರಥ ಬೀದಿಯಲ್ಲಿ ಎಳೆಯಲಾಯಿತು. ಮೂರೂ ರಥಗಳು ಯಾವುದೇ ಅಡ್ಡಿ ಆತಂಕವಿಲ್ಲದೆ 1.5 ಕಿಮೀ ದೂರದ ರಥ ಬೀದಿಯನ್ನು ಕ್ರಮಿಸಿ 10.10 ಗಂಟೆ ವೇಳೆಗೆ ಸ್ವಸ್ಥಾನವನ್ನು ತಲುಪಿದವು.

ರಥ ಸಂಚರಿಸುವಾಗ ರಸ್ತೆಯ ಇಕ್ಕೆಲಗಳಲ್ಲಿ ನಿಂತಿದ್ದ ಭಕ್ತರು ದೇವರ ದರ್ಶನ ಪಡೆದು ಹಣ್ಣು–ಜವನ ಎಸೆದು ಹರಕೆ ತೀರಿಸಿ ಭಕ್ತಿ ಮೆರೆದರು. ನಂತರ ಹಂಸವಾಹನ ಉತ್ಸವ, ಸಂಜೆ ನಟೇಶ ಉತ್ಸವಗಳು ಜರಗುವ ಮೂಲಕ ರಥೋತ್ಸವವು ಯಶಸ್ವಿಯಾಯಿತು. ಡಿ.6ರ ಶನಿವಾರದಂದು ಕಪಿಲಾನದಿಯ ತೇಲುವ ದೇವಾಲಯದಲ್ಲಿ ತೆಪ್ಪೋತ್ಸವ ನಡೆಯಲಿದ್ದು ನಂತರ ಶಯನೋತ್ಸವ ಜರುಗುವುದರೊಂದಿಗೆ ಚಿಕ್ಕಜಾತ್ರಾ ಮಹೋತ್ಸವಕ್ಕೆ ತೆರೆ ಬೀಳಲಿದೆ.



ಹುಣ್ಣಿಮೆಯ ದಿನವಾದ ಗುರುವಾರ ನಂಜನಗೂಡಿನಲ್ಲಿ ಶ್ರೀಕಂಠೇಶ್ವರಸ್ವಾಮಿಯವರ ಚಿಕ್ಕಜಾತ್ರಾ ಮಹೋತ್ಸವ ವೈಭವದಿಂದ ನಡೆಯಿತು.

ಚಿಕ್ಕ ಜಾತ್ರಾ ಮಹೋತ್ಸವದ ಅಂಗವಾಗಿ ವಿವಿಧ ಸಂಘ ಸಂಸ್ಥೆಗಳು ಪ್ರಸಾದ ವಿತರಣೆ ಮಾಡಿದ್ದವು. ದೇವಾಲಯದ ದಾಸೋಹ ಭವನದಲ್ಲಿ ವಿಶೇಷವಾಗಿ ಪ್ರಸಾದ ವ್ಯವಸ್ಥೆಯನ್ನು ಕಲ್ಪಿಸಲಾಗಿತ್ತು. ಮುಂಜಾಗ್ರತಾ ಕ್ರಮವಾಗಿ ಬಿಗಿ ಪೊಲೀಸ್ ಬಂದೋ ಬಸ್ತ್ ನಿಯೋಜಿಸಲಾಗಿತ್ತು. ರಥೋತ್ಸವ ವೇಳೆ ದೇವಾಲಯದ ಇಓ ಜಗದೀಶ್ ಕುಮಾರ್ ಹಾಗೂ ಅರ್ಚಕ ವೃಂದ, ಸಿಬ್ಬಂದಿಗಳು ಉಪಸ್ಥಿತರಿದ್ದರು.

ತಿ.ನರಸೀಪುರದಲ್ಲಿ ವಾಟಾಳು ಮಠದ ಶ್ರೀಗಳಿಗೆ ಭಕ್ತರಿಂದ ಸನ್ಮಾನ

ತಿ.ನರಸೀಪುರ, ಡಿ.4– ಕಳೆದ 43 ವರ್ಷಗಳಿಂದಲೂ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಗೌರವಾಧ್ಯಕ್ಷರಾಗಿ ಮಹಾಸಭಾವನ್ನು ಮುನ್ನಡೆಸಿಕೊಂಡು, ಮಾರ್ಗದರ್ಶನ ನೀಡುತ್ತಾ ಬಂದಿರುವ ವಾಟಾಳು ಶ್ರೀ ಸೂರ್ಯಸಿಂಹಾಸನ ಮಠಾಧ್ಯಕ್ಷರಾದ ಡಾ.ಶ್ರೀ ಸಿದ್ದಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರನ್ನು ಪೂಜಿತ್ ಮೆಡಿಕಲ್ ಕುಮಾರ್ ಸ್ನೇಹ ಬಳಗದವರು ಮತ್ತು ಭಕ್ತರು ಅಭಿನಂದಿಸಿದರು.



ವಾಟಾಳು ಶ್ರೀ ಮಠದ ಸಿದ್ದಲಿಂಗಶಿವಾಚಾರ್ಯ ಸ್ವಾಮೀಜಿಯವರನ್ನು ಸನ್ಮಾನಿಸಲಾಯಿತು.

ಪಟ್ಟಣದ ಎಪಿಎಂಸಿ ಆವರಣದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ವತಿಯಿಂದ ನಿರ್ಮಿಸಿರುವ ನವೀಕೃತ ಸಭಾಭವನ ಉದ್ಘಾಟನಾ ಕಾರ್ಯಕ್ರಮಕ್ಕೆ ಆಗಮಿಸಿ ಧಾರ್ಮಿಕ ಸಭೆಯಲ್ಲಿ ಪಾಲ್ಗೊಂಡಿದ್ದ ವಾಟಾಳು ಶ್ರೀಗಳಿಗೆ ಸುತ್ತೂರು ಶ್ರೀಗಳೊಂದಿಗೆ ವಾಟಾಳು ಶ್ರೀಗಳು ಇರುವ ಬೃಹತ್ ಭಾವಚಿತ್ರ ನೀಡಿ ಸನ್ಮಾನಿಸಲಾಯಿತು.

ಈ ವೇಳೆ ಮಾತನಾಡಿದ ಪೂಜಿತ್ ಕುಮಾರ್ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ವಾಟಾಳ್ ಶ್ರೀಗಳ ಮಾರ್ಗದರ್ಶನ ಆಶೀರ್ವಾದದಿಂದ ಸಮಾಜಕ್ಕೆ ಉತ್ತಮ ಸೇವೆ ನೀಡುತ್ತಲಿದೆ. ಶ್ರೀಗಳು ಮಹಾಸಭಾ ಸ್ಥಾಪನೆಯಾಗಿ 43 ವರ್ಷಗಳನ್ನು ಪೂರೈಸಿದ್ದು, ಸ್ಥಾಪನೆಯಾದಾಗಿನಿಂದ ಈವರೆಗೂ ಸುದೀರ್ಘವಾಗಿ ವಾಟಾಳು ಶ್ರೀಗಳೇ ಗೌರವಾಧ್ಯಕ್ಷರಾಗಿ ಸಮಾಜವನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಮುಂದೆಯೂ ಮಹಾಸಭಾಕ್ಕೆ ಅವರ ಮಾರ್ಗದರ್ಶನದ ಅವಶ್ಯಕತೆ ಇದೆ ಎಂದರು.

ಈ ಸಂದರ್ಭದಲ್ಲಿ ಸಚಿವ ಡಾ.ಎಚ್.ಸಿ. ಮಹದೇವಪ್ಪ, ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ, ಸುತ್ತೂರು ಮಠಾಧ್ಯಕ್ಷರಾದ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ, ಸಿದ್ದಗಂಗಾ ಮಠದ ಕಿರಿಯ ಶ್ರೀಗಳಾದ ಶ್ರೀ ಶಿವಸಿದ್ದೇಶ್ವರ ಸ್ವಾಮೀಜಿ, ಸಾಲೂರು ಬೃಹನ್ಮಠದ ಡಾ.ಶ್ರೀ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ, ಹಲವಾರ ಮಠಾಧ್ಯಕ್ಷರಾದ ಶ್ರೀ ಷಡಕ್ಷರಿ ದೇಶೀ ಕೇಂದ್ರ ಸ್ವಾಮೀಜಿ,ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಸಿ.ಎಂ.ಪ್ರಕಾಶ್, ಪ್ರಧಾನ ಕಾರ್ಯದರ್ಶಿ ಕುರುಬೂರು ಶಿವು, ಉಪಾಧ್ಯಕ್ಷ ಎಸ್.ಕೆ ಕಿರಣ್, ಕಾರ್ಯದರ್ಶಿ ಹಲವಾರ ಪರಮೇಶ್ ಪಟೇಲ್, ನಿರ್ದೇಶಕರುಗಳಾದ ಗುರುಸ್ವಾಮಿ, ತೋಂಟೇಶ್, ಕೆಇಬಿ ಸಿದ್ದಲಿಂಗ ಸ್ವಾಮಿ, ವಕೀಲ ಜ್ಞಾನೇಂದ್ರ ಮೂರ್ತಿ, ಉಪನ್ಯಾಸಕ ಮೂಗೂರು ಕುಮಾರಸ್ವಾಮಿ, ಕೆಬ್ಬೇಹುಂಡಿ ಶಿವಕುಮಾರ್, ಯುವ ಘಟಕದ ಅಧ್ಯಕ್ಷ ಕೈಯಂಬಳ್ಳಿ ಅಶೋಕ್, ನಿಲಸೋಗೆ ಪ್ರಸಾದ್, ಎಸ್.ಮಧು ಕುಮಾರ್ ಸೇರಿದಂತೆ ಮತ್ತಿತರರು ಹಾಜರಿದ್ದರು.

ನಾಳೆ ವಿದ್ಯುತ್ ಗ್ರಾಹಕರ ಕುಂದು ಕೊರತೆ ಸಭೆ

ನಂಜನಗೂಡು, ಡಿ.4– ಶನಿವಾರ (ಡಿ.6) ಚೆಸ್ಕಾಂ ಕಾರ್ಯನಿರ್ವಾಹಕ ಇಂಜಿನಿಯರ್ ಅವರ ಅಧ್ಯಕ್ಷತೆಯಲ್ಲಿ ಚೆಸ್ಕಾಂ ಕಛೇರಿ ಆವರಣದಲ್ಲಿ ಬೆಳಿಗ್ಗೆ 11 ರಿಂದ 1 ಗಂಟೆಯವರೆಗೆ ವಿದ್ಯುತ್ ಗ್ರಾಹಕರ ಕುಂದು ಕೊರತೆ ಸಭೆಯನ್ನು ಏರ್ಪಡಿಸಲಾಗಿದೆ ಎಂದು ಸಹಾಯಕ ಕಾರ್ಯಪಾಲಕ ಇಂಜಿನಿಯರ್ ದೇವರಾಜಯ್ಯ ಹೇಳಿದರು.

ಈ ಸಭೆಯಲ್ಲಿ ನಂಜನಗೂಡು ಪಟ್ಟಣ, ತಾಂಡವಪುರ, ಕೆ.ಎಸ್.ಹುಂಡಿ, ಹುಳಿಮಾವು, ಹದಿನಾರು, ಹೊಸಕೋಟೆ, ಬಿಳಿಗೆರೆ, ತುಂನೇರಳೆ, ಮರಳೂರು, ಸುತ್ತೂರು, ನಗರ್ಲೆ, ಹೊರಳವಾಡಿ, ಕೂಡ್ಲಾಪುರ, ದೇವರಸನಹಳ್ಳಿ, ಕಳಲೆ, ಸಿಂಧುವಳ್ಳಿ, ಕಸುವಿನಹಳ್ಳಿ, ದೇವೀರಮ್ಮನಹಳ್ಳಿ, ನವಿಲೂರು, ದೇಬೂರು, ಬದನವಾಳು, ದೇವನೂರು, ದೊಡ್ಡಕವಲಂದೆ, ಹೆಡತಲೆ, ಹೆಮ್ಮರಗಾಲ, ಕೋಣನೂರು, ನೇರಳೆ, ಹೆಗ್ಗಡಹಳ್ಳಿ, ಶಿರಮಳ್ಳಿ, ಹಗಿನವಾಳು, ಹುಲ್ಲಹಳ್ಳಿ, ರಾಂಪುರ, ಕುರಿಹುಂಡಿ, ನೆಲ್ಲಿತಾಳಪುರ, ಹರದನಹಳ್ಳಿ, ದುಗ್ಗಳ್ಳಿ, ಹುರಾ, ಹಲ್ಲರೆ, ಹಾಡ್ಯ, ಹೆಡಿಯಾಲ, ದೇವರಾಯಶೆಟ್ಟಿಪುರ, ದಾಸನೂರು, ಕಾರ್ಯ, ಮಲ್ಲೂಪುರ, ತಗಡೂರು ಸೇರಿದಂತೆ ಇತರ ಗ್ರಾಮಸ್ಥರು ಭಾಗವಹಿಸಬಹುದಾಗಿದೆ.

ಕೆ.ಆರ್.ನಗರ–ಹುಣಸೂರು ರಸ್ತೆ ಚತುಷ್ಪಥ ರಸ್ತೆ



ರಸ್ತೆ ಅಭಿವೃದ್ಧಿ ಕಾಮಗಾರಿ ಪರಿಶೀಲನೆ ವೇಳೆ ಜನರಿಂದ ಅಹವಾಲು ಆಲಿಸುತ್ತಿರುವ ಶಾಸಕ ಡಿ.ರವಿಶಂಕರ್.

ಕೆ.ಆರ್.ನಗರ, ಡಿ.4– ಸಾರ್ವಜನಿಕರ ಅನುಕೂಲಕ್ಕಾಗಿ ಕೆ.ಆರ್.ನಗರದಿಂದ ಹುಣಸೂರಿಗೆ ಸಂಪರ್ಕ ಕಲ್ಪಿಸುವ ರಸ್ತೆಯನ್ನು ಚತುಷ್ಪಥ ರಸ್ತೆಯನ್ನಾಗಿ ಅಭಿವೃದ್ಧಿ ಮಾಡುತ್ತಿದ್ದು ಶೀಘ್ರದಲ್ಲಿಯೇ ಕಾಮಗಾರಿ ಪೂರ್ಣಗೊಳಿಸಿ ಸಾರ್ವಜನಿಕ ಸಂಚಾರಕ್ಕೆ ಅನುಕೂಲ ಮಾಡಿಕೊಡಲಾಗುವುದು ಎಂದು ಶಾಸಕ ಡಿ.ರವಿಶಂಕರ್ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದ ಮುಂಭಾಗ ಇರುವ ಹುಣಸೂರು–ಕೆ.ಆರ್.ನಗರ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಪರಿಶೀಲಿಸಿ ಮಾತನಾಡಿದ ಅವರು ಕಾಮಗಾರಿ ಕೆಲಸ ಪ್ರಾರಂಭವಾಗಿದ್ದು ಇದಕ್ಕೆ ಸ್ಥಳೀಯರು ಸಹಕಾರ ನೀಡಿದ್ದಾರೆ. ಅಲ್ಲದೆ ರಸ್ತೆ ಬದಿಗಳಲ್ಲಿರುವ ವಿದ್ಯುತ್ ಕಂಬಗಳು ರಸ್ತೆ ಸಂಚಾರಕ್ಕೆ ಅಡಚಣೆ ಉಂಟಾಗುವಂತಹ ಕೆಲವು ಮರಗಳನ್ನು ತೆರವುಗೊಳಿಸಿ ಅಗತ್ಯವಿರುವಡೆ ಮತ್ತೆ ಗಿಡಗಳನ್ನು ನೆಟ್ಟು ಪೋಷಿಸುವ ಕೆಲಸ ಮಾಡಲಾಗುವುದು ಎಂದು ತಿಳಿಸಿದರು.

ಮುಳ್ಳೂರು ರಸ್ತೆ, ಮುಸ್ಲಿಂ ಬಡಾವಣೆ, ಜೂನಿಯರ್ ಕಾಲೇಜು ರಸ್ತೆ ಹಾಗೂ ಕೆ.ಆರ್.ನಗರ ಮತ್ತು ಹುಣಸೂರು ಸಂಪರ್ಕ ಕಲ್ಪಿಸುವ ಪ್ರವಾಸಿ ಮಂದಿರದ ಮುಂಭಾಗದ ಐದೂ ರಸ್ತೆಗಳು ಕೂಡುವ ಸ್ಥಳದಲ್ಲಿ ವೃತ್ತ ಒಂದನ್ನು ನಿರ್ಮಿಸಿ ಯಾವುದೇ ಅಡಚಣೆಯಾಗದಂತೆ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಲಾಗುವುದು ಎಂದು ಹೇಳಿದರು.

ಇದಕ್ಕೆ ಎರಡು ಬದಿ ಅಂಗಡಿ ಮಾಲೀಕರುಗಳು ಸಹಕಾರ ನೀಡಬೇಕೆಂದು ಕೋರಿದ ಶಾಸಕರು ಯಾವುದೇ ಕಾರಣಕ್ಕೂ ಸ್ಥಳೀಯರಿಗೆ ಹಾಗೂ ಸಾರ್ವಜನಿಕರಿಗೆ ತೊಂದರೆ ಆಗದಂತೆ ಕಾಮಗಾರಿಯನ್ನು ನಿರ್ಮಾಣ ಮಾಡಲಾಗುವುದಲ್ಲದೆ ಕಾಮಗಾರಿಯಲ್ಲಿ ಗುಣಮಟ್ಟವನ್ನು ಕಾಯ್ದುಕೊಳ್ಳಲು ಸಂಬಂಧಪಟ್ಟ ಇಲಾಖೆಗೆ ಸೂಚಿಸಲಾಗಿದೆ ಎಂದು ತಿಳಿಸಿದರು.

ನಗರ ಯೋಜನೆ ಪ್ರಾಧಿಕಾರದ ಅಧ್ಯಕ್ಷ ಗಡ್ಡ ಮಹೇಶ್, ನಿರ್ದೇಶಕರಾದ ಕೆ.ಎನ್.ಪ್ರಸನ್ನಕುಮಾರ್, ಸೈಯದ್ ಜಾಬೀರ್, ಸರಿತಾ ಜವರಪ್ಪ, ಪುರಸಭಾ ಮಾಜಿ ಅಧ್ಯಕ್ಷರಾದ ಶಿವುನಾಯಕ್, ಸೈಯದ್ ಸಿದ್ದಿಕ್, ನರಸಿಂಹರಾಜು, ಮಾಜಿ ಸದಸ್ಯರಾದ ನಟರಾಜ್, ಶಂಕರ್ ಸ್ವಾಮಿ, ಕೆ.ವಿನಯ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಎಸ್.ಮಹದೇವ್, ನಗರಾಧ್ಯಕ್ಷ ಎಂ.ಜೆ.ರಮೇಶ್, ನಗರ ಯುವ ಕಾಂಗ್ರೆಸ್ ಅಧ್ಯಕ್ಷ ಕೆಂಚಿಮಂಜು, ತಾಲೂಕು ಯುವ ಕಾಂಗ್ರೆಸ್ ಅಧ್ಯಕ್ಷ ಕಾಮೇನಹಳ್ಳಿಹೇಮಂತ್, ಸಾಲಿಗ್ರಾಮ ಎಸ್‌ಸಿ ಘಟಕದ ಅಧ್ಯಕ್ಷ ಕಂಠಿ ಕುಮಾರ್, ಗ್ರಾಪಂ ಸದಸ್ಯ ಕೆ.ಪಿ.ಜಗದೀಶ್, ಮಂಜುನಾಥ್ ಸೇರಿದಂತೆ ಇನ್ನಿತರರಿದ್ದರು.

ಶ್ರೀವಿರಕ್ತ ಮಠದಲ್ಲಿ ಹುಣ್ಣಿಮೆ ಪೂಜೆ



ಸರಗೂರು: ಪಟ್ಟಣದ ಬಿಡಗಲುವಿನ ಪಡವಲು ಶ್ರೀವಿರಕ್ತ ಮಠದಲ್ಲಿ ಹುಣ್ಣಿಮೆ ಅಂಗವಾಗಿ ಗುರುವಾರ ಶ್ರೀಕಾಳವಡೆಯ ಗುರುಗಳ ಗದ್ದಿಗೆ ಹಾಗೂ ಶ್ರೀವೀರ ಭದ್ರೇಶ್ವರ ಸ್ವಾಮಿಗೆ ರುದ್ರಾಭಿಷೇಕ ಬಿಲ್ವಾರ್ಚನೆ ಹಾಗೂ ವಿವಿಧ ಪೂಜಾ ಕೈಂಕರ್ಯಗಳನ್ನು ನಡೆಸಲಾಯಿತು.

ಧಾರ್ಮಿಕ ಕಾರ್ಯಕ್ರಮದಲ್ಲಿ ಪಡವಲು ಶ್ರೀವಿರಕ್ತ ಮಠದ ಮಹದೇವ ಸ್ವಾಮೀಜಿ ಮಾತನಾಡಿ ಮಾರ್ಗಶಿರ ಮಾಸದ ಹುಣ್ಣಿಮೆಯನ್ನು ಹೊಸ್ತಿಲ ಹುಣ್ಣಿಮೆಯೆಂದು ಕರೆಯಲಾಗುತ್ತದೆ, ಇದು ವಿಶೇಷ ಸಹಯೋಗದೊಂದಿಗೆ ಆಚರಣೆಯನ್ನು ಪಡೆದುಕೊಂಡಿದೆ, ಹೊಸ್ತಿಲ ಹುಣ್ಣಿಮೆಗೆ ವಿಶೇಷ ಧಾರ್ಮಿಕ ಮತ್ತು ಆಧ್ಯಾತ್ಮಿಕ ಮಹತ್ವವಿದೆ, ಈ ದಿನ ಪವಿತ್ರ ನದಿಯಲ್ಲಿ ಸ್ನಾನ ಧ್ಯಾನ ಮತ್ತು ಪೂಜೆಯೊಂದಿಗೆ ಉಪವಾಸ ಮಾಡಿ ಶ್ರೀಕಾಳವಡೆಯ ಗುರುಗಳ ಹಾಗೂ ಶ್ರೀವೀರಭದ್ರೇಶ್ವರಸ್ವಾಮಿ ಆರಾಧನೆ ಮಾಡಿದರೆ ಭಗವಂತನ ಅನುಗ್ರಹ ಸಿಗಲಿದೆ ಎಂದು ಆಶೀರ್ವಚನ ನೀಡಿದರು.

ಹುಣ್ಣಿಮೆ ಪೂಜೆ ಕಾರ್ಯಕ್ರಮದಲ್ಲಿ ಪಡುವಲು ಶ್ರೀವಿರಕ್ತ ಮಠದ ಅಧ್ಯಕ್ಷರಾದ ಶ್ರೀ ಮಹದೇವಸ್ವಾಮಿ, ಸುಪ್ರೀಂ ಕೋರ್ಟ್ ವಕಿಲರಾದ ಕೊಳ್ಳೆಗಾಲ ಗಿರೀಶ್‌ಜಿ, ರಾಜೇಶ್ವರಿ ಗಿರೀಶ್‌ಜಿ, ಪ್ರಭುಸ್ವಾಮಿ, ಬಿಡಗಲು ದೊಡ್ಡಯಜಮಾನರಾದ ಮಲ್ಲೇಶ್, ಚಿಕ್ಕಯಜಮಾನ ಪ್ರದೀಪ್ ಕುಮಾರ್, ವೀರಶೈವ ಲಿಂಗಾಯತ ಸಮಾಜದ ಮುಖಂಡರಾದ ಶ್ರೀಕಂಠಸ್ವಾಮಿ, ರಾಜಶೇಖರ ಮೂರ್ತಿ, ಶ್ರೀಕಂಠೇಶ್ವರ ಆಟೋಪಾರ್ಟ್ಸ್ ಮಾಲೀಕರಾದ ಶ್ರೀಕಂಠಸ್ವಾಮಿ, ಮಾಜಿ ಯಜಮಾನರಾದ ನಾಗಣ್ಣ, ಶಿವು, ಶಂಕರ್ ಚಿತ್ರಮಂದಿರದ ಮ್ಯಾನೇಜರ್ ಚಂದ್ರಶೇಖರ್, ಮಲ್ಲಿಕಾರ್ಜುನ ಟ್ರೇಡರ್ಸ್ ಮಾಲೀಕರಾದ ವಿನಯ್, ವಿಜಯ್, ಚಿಕ್ಕಿ ಮಹೇಶ್, ಹಾಗೂ ಬಿಡಗಲು ಗ್ರಾಮಸ್ಥರು, ವೀರಶೈವ ಲಿಂಗಾಯಿತ ಸಮಾಜ ಸೇರಿದಂತೆ ಯುವಕ ಸಂಘದವರು ಭಾಗಿಯಾಗಿದ್ದರು, ನಂಜನಗೂಡು ತಾಲೂಕು ಚಿಲಕಳ್ಳಿ ವೀರಶೈವ ಲಿಂಗಾಯತ ಸಮಾಜದ ಬಂಧುಗಳು ಇಂದಿನ ಹುಣ್ಣಿಮೆ ಪೂಜಾ ಹಾಗೂ ಭಕ್ತರಿಗೆ ಅನ್ನದಾಸೋಹ ಸೇವೆಯನ್ನು ನೆರವೇರಿಸಿದರು.

ಮಾಜಿ ಪುರಸಭಾ ಸದಸ್ಯರಿಗೆ ಇನ್ನಷ್ಟು ಅಧಿಕಾರ ಸಿಗಲಿ

ತಿ.ನರಸೀಪುರ, ಡಿ.4– ಮೈಸೂರು ಜಿಲ್ಲಾ ಬಿಜೆಪಿ ಗ್ರಾಮಾಂತರ ಉಪಾಧ್ಯಕ್ಷರಾಗಿ ಆಯ್ಕೆಯಾಗಿರುವ ಚಲನ ಚಿತ್ರ ನಟರು ಹಾಗೂ ಮಾಜಿ ಪುರಸಭಾ ಸದಸ್ಯರೂ ಆದ ಆರ್.ಅರ್ಜುನ್ ಅವರಿಗೆ ರಾಜಕೀಯದಲ್ಲಿ ಹೆಚ್ಚಿನ ಅವಕಾಶಗಳು ದೊರಕುವ ಮೂಲಕ ಅವರು ಮತ್ತಷ್ಟು ಎತ್ತರಕ್ಕೆ ಬೆಳೆಯುವಂತಾಗಲಿ ಎಂದು ಕನ್ನಡ ಸೇನೆ ಜಿಲ್ಲಾ ಕಾರ್ಮಿಕ ಘಟಕದ ಉಪಾಧ್ಯಕ್ಷ ಕೆ.ರಾಜು ಹೇಳಿದರು.

ಪುರಸಭೆ ಮಾಜಿ ಸದಸ್ಯ ಆರ್.ಅರ್ಜುನ್ ಅವರನ್ನು ಬಿಜೆಪಿ ಪಕ್ಷ ಮೈಸೂರು ಜಿಲ್ಲಾ ಗ್ರಾಮಾಂತರ ಉಪಾಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡಿದ ಹಿನ್ನೆಲೆಯಲ್ಲಿ ಪಟ್ಟಣದ ಪಿಡಬ್ಲ್ಯೂಡಿ ಅತಿಥಿ ಗೃಹದಲ್ಲಿ ಗುರುವಾರ ಇನ್ನಿತರೆ ಸಹೋದ್ಯೋಗಿಗಳೊಂದಿಗೆ ಅರ್ಜುನ್ ಅವರನ್ನು ಆತ್ಮೀಯವಾಗಿ ಸನ್ಮಾನಿಸಿ ಮಾತನಾಡಿದರು.



ಮೈಸೂರು ಜಿಲ್ಲಾ ಬಿಜೆಪಿ ಗ್ರಾಮಾಂತರ ಉಪಾಧ್ಯಕ್ಷರಾಗಿ ಆಯ್ಕೆಯಾದ ಪುರಸಭೆ ಮಾಜಿ ಸದಸ್ಯ ಆರ್.ಅರ್ಜುನ್ ಅವರನ್ನು ಕನ್ನಡ ಸೇನೆ ಜಿಲ್ಲಾ ಕಾರ್ಮಿಕ ಘಟಕದ ಉಪಾಧ್ಯಕ್ಷ ಕೆ.ರಾಜು ತಿ.ನರಸೀಪುರದಲ್ಲಿ ಅಭಿನಂದಿಸಿದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಜಿಲ್ಲಾ ಗ್ರಾಮಾಂತರ ಬಿಜೆಪಿ ಉಪಾಧ್ಯಕ್ಷ ಆರ್.ಅರ್ಜುನ್ ಪಕ್ಷದ ವರಿಷ್ಠರು ನನಗೆ ಕೊಟ್ಟಿರುವ ಜವಾಬ್ದಾರಿಯನ್ನು ಸಮರ್ಥ ವಾಗಿ ನಿಭಾಯಿಸಿ ನನ್ನ ಆಯ್ಕೆಯನ್ನು ಸಮರ್ಥಿಸಿಕೊಳ್ಳುತ್ತೇನೆ. ಇಷ್ಟು ದಿನ ಅರ್ಜುನ್ ತಟಸ್ಥನಾಗಿದ್ದ ಎಂಬ ಪ್ರಶ್ನೆ ಎಲ್ಲರ ಮನಸ್ಸಿನಲ್ಲಿದೆ. ಆದರೆ ಪಕ್ಷ ವಹಿಸುವ ಜವಾಬ್ದಾರಿಯೇ ಬೇರೆ, ಚುನಾಯಿತ ಪ್ರತಿನಿದಿಯ ಜವಾಬ್ದಾರಿಯೇ ಬೇರೆ ಆಗಿದ್ದು, ಇಷ್ಟು ದಿನಗಳ ಕಾಲ ಬಿಜೆಪಿ ಪಕ್ಷದ ಟಿಕೆಟ್ ಪಡೆದು ಪುರಸಭೆ ಸದಸ್ಯನಾಗಿ ಆಯ್ಕೆಯಾಗಿ, ಪಕ್ಷದ ಅಜೆಂಡಾ ಎತ್ತಿ ಹಿಡಿಯುವ ಕೆಲಸ ಮಾಡಿದ್ದೇನೆ. ಈಗ ಪಕ್ಷದ ನಾಯಕರು ಪಕ್ಷದ ಜವಾಬ್ದಾರಿ ನೀಡಿದ್ದಾರೆ. ಮೈಸೂರು ಗ್ರಾಮಾಂತರ ಜಿಲ್ಲೆಗೆ ಸಂಬಂಧಿಸಿದಂತೆ ಬಿಜೆಪಿ ಪಕ್ಷವನ್ನು ಸಂಘಟಿಸುವುದು ನನ್ನ ಮೊದಲ ಆದ್ಯತೆಯಾಗಿದೆ ಎಂದರು.

ಈ ವೇಳೆ ಮುಖಂಡರಾದ ಸಿ.ಡಿ.ವೆಂಕಟೇಶ್, ನಾಗರಾಜು, ತಬಲ ರಾಚಪ್ಪ, ಪುಟ್ಟಸ್ವಾಮಿ, ಮಹೇಶ್, ನಂಜುಂಡಸ್ವಾಮಿ, ಶಿವಶಂಕರ್, ತಾಲೂಕು ಬಾಬು ಜಗಜೀವನರಾಂ ಸಂಘದ ಉಪಾಧ್ಯಕ್ಷ ವಿ.ಎಸ್.ಶಿವಕುಮಾರ್, ಐ.ಬಿ. ಶಿವು ಹಾಜರಿದ್ದರು.

ಸೂಳೆ ಕೋಟೆಯಲ್ಲಿ ಹನುಮ ಜಯಂತಿ ಆಚರಣೆ



ಬೆಟ್ಟದಪುರದ ಸೂಳೆಕೋಟೆಯ ಆಂಜನೇಯ ದೇವಾಲಯದಲ್ಲಿ ಮಂಗಳವಾರ ಹನುಮ ಜಯಂತಿ ಕಾರ್ಯಕ್ರಮ ವಿಜೃಂಭಣೆಯಿಂದ ನಡೆಯಿತು. ಮಂಗಳವಾರ ಮುಂಜಾನೆಯಿಂದಲೇ ತೀರ್ಥ ಸಂಗ್ರಹಣೆ ಪಂಚಾಮೃತ ಅಭಿಷೇಕ, ಲೋಕಕಲ್ಯಾಣಾರ್ಥ ಶ್ರೀ ರಾಮ ತಾರಕ ಹೋಮ, ಮಹಾಮಂಗಳಾರತಿ ಸೇರಿದಂತೆ ವಿಶೇಷ ಪೂಜಾ ಕೈಂಕರ್ಯಗಳು ಜರುಗಿದವು.

ತಿ.ನರಸೀಪುರದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರರಿಗೆ ಭವ್ಯ ಸ್ವಾಗತ



ತಿ.ನರಸೀಪುರಕ್ಕೆ ಆಗಮಿಸಿದ ವೇಳೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ಅಖಿಲ ಭಾರತ ವೀರಶೈವ ಮಹಾಸಭಾದ ಯುವ ಘಟಕದ ಉಪಾಧ್ಯಕ್ಷ ಎಸ್.ಕೆ.ಕಿರಣ್ ಕ್ರೇನ್ ಮೂಲಕ ಬೃಹತ್ ಗಾತ್ರದ ಹೂವಿನ ಹಾರ ಹಾಕುವ ಮೂಲಕ ಭವ್ಯ ಸ್ವಾಗತ ಕೋರಿದರು.

ಸುತ್ತೂರು ಸರ್ಕಾರಿ ಶಾಲೆಯ ವಿದ್ಯಾರ್ಥಿಗಳ ಸಾಧನೆ



ನಂಜನಗೂಡು ತಾಲೂಕು ಸುತ್ತೂರಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ಜೆಎಸ್‌ಎಸ್ ಅಂತರ ಸಂಸ್ಥೆಗಳ ಕ್ರೀಡಾಕೂಟದಲ್ಲಿ ಭಾಗವಹಿಸಿ ಉತ್ತಮ ಸಾಧನೆ ಮಾಡಿದ್ದಾರೆ. ಶುಭಶ್ರೀ 800 ಮೀಟರ್ ಹಾಗೂ 1500 ಮೀಟರ್ ಓಟದಲ್ಲಿ ಪ್ರಥಮ ಸ್ಥಾನಗಳಿಸಿದ್ದಾರೆ. ಶ್ವೇತಾ ಲಾಂಗ್ ಜಂಪಿನಲ್ಲಿ ಪ್ರಥಮ ಸ್ಥಾನಗಳಿಸಿದ್ದಾರೆ. ಶುಭಶ್ರೀ 400 ಮೀಟರಿನಲ್ಲಿ ದ್ವಿತೀಯ ಸ್ಥಾನ, ಅಮೃತ 100 ಮೀಟರ್‌ನಲ್ಲಿ ದ್ವಿತೀಯ ಸ್ಥಾನ ಗಳಿಸಿದ್ದಾರೆ. ಸ್ಪಂದನ, ಶುಭಶ್ರೀ, ಶ್ವೇತ, ಅಮೃತ ರಿಲೇಯಲ್ಲಿ ಬಹುಮಾನ ಪಡೆದಿದ್ದಾರೆ. ಈ ಸಾಧನೆ ಪರಿಗಣಿಸಿ ಚಾಂಪಿಯನ್‌ಶಿಪ್ ಟ್ರೋಫಿ ನೀಡಲಾಯಿತು.

ರಾಮೇನ ಹಳ್ಳಿಯ 143 ಮಂದಿಗೆ ಹಕ್ಕುಪತ್ರ ವಿತರಣೆ

ಗ್ರಾಮಸ್ಥರ ಬಹುದಿನಗಳ ಬೇಡಿಕೆ ಈಡೇರಿಸಿದ ಶಾಸಕ ಅನಿಲ್ ಚಿಕ್ಕಮಾದು

ಹೆಚ್.ಡಿ.ಕೋಟೆ: ರಾಮೇನಹಳ್ಳಿ ಗ್ರಾಮದ 143 ನಿವಾಸಿಗಳಿಗೆ ಶಾಸಕ ಅನಿಲ್ ಚಿಕ್ಕಮಾದು ಹಕ್ಕುಪತ್ರಗಳನ್ನು ವಿತರಿಸಿದರು.

ತಾಲೂಕಿನ ಬೀಚನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ರಾಮೇನಹಳ್ಳಿ ಗ್ರಾಮದಲ್ಲಿ ನಡೆದ ಜನಸ್ಪಂದನಾ ಕಾರ್ಯಕ್ರಮ ಉದ್ಘಾಟಿಸಿ 143 ಜನರಿಗೆ ಹಕ್ಕುಪತ್ರ ವಿತರಣೆ ಮಾಡಿ ಮಾತನಾಡಿದ ಅವರು ಕಳೆದ 50 ವರ್ಷಗಳಿಂದ ಈ ಗ್ರಾಮದ ಜನರಿಗೆ ಮನೆ ದಾಖಲಾತಿ ಇಲ್ಲದೆ ತೊಂದರೆ ಅನುಭವಿಸುತ್ತಿದ್ದಾರೆ. ಗ್ರಾಮಸ್ಥರು ಹಲವು ಬಾರಿ ಮನವಿ ಮಾಡಿದ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳ ನೇತೃತ್ವದಲ್ಲಿ ಹಕ್ಕು ಪತ್ರ ವಿತರಣೆ ಮಾಡಿದ್ದೇನೆ ಎಂದರು.



ರಾಮನಹಳ್ಳಿ ಗ್ರಾಮಸ್ಥರಿಗೆ ಶಾಸಕ ಅನಿಲ್ ಚಿಕ್ಕಮಾದು ಹಕ್ಕು ಪತ್ರ ವಿತರಿಸಿದರು.

ನಾನು ಶಾಸಕನಾಗಿ ಬಂದ ಬಳಿಕ ರಾಮೇನಹಳ್ಳಿ ಗ್ರಾಮಕ್ಕೆ ಹಲವು ಅಭಿವೃದ್ಧಿ ಕಾಮಗಾರಿಗಳನ್ನು ಮಾಡಿಸಿರುವೆ. 33 ಲಕ್ಷ ರೂ. ವೆಚ್ಚದಲ್ಲಿ ಮೂರು ಶಾಲಾ ಕೊಠಡಿಗಳ ನಿರ್ಮಾಣಗೊಂಡಿದೆ. ಗ್ರಾಮಕ್ಕೆ ಜೆಜೆಎಂನಲ್ಲಿ ಸಂಪೂರ್ಣ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ. ಭವನಗಳ ನಿರ್ಮಾಣಕ್ಕೆ ಉಳಿಕೆ ಹಣ ಮಂಜೂರು ಮಾಡಲಾಗಿತ್ತು ಆದರೂ ಕಾಮಗಾರಿ ಪೂರ್ಣಗೊಂಡಿಲ್ಲ, ಮುಂದಿನ ದಿನಗಳಲ್ಲಿ ಕಾಮಗಾರಿ ಸಂಪೂರ್ಣಗೊಳಿಸಲು ಹಣ ಮಂಜೂರು ಮಾಡಲಾಗುವುದು ಎಂದರು.

ಕಬಿನಿ ಜಲಾಶಯದಿಂದ ಮುಳುಗಡೆಯಾಗಿ ಪುನರ್ವಸತಿ ಗ್ರಾಮವಾಗಿ ರಾಮೇನಹಳ್ಳಿ ಸ್ಥಾಪನೆಯಾದ ಬಳಿಕ ಇಲ್ಲಿ ನೆಲೆಸಿದ ಗ್ರಾಮಸ್ಥರಿಗೆ ಹಕ್ಕುಪತ್ರ ವಿತರಿಸಲಾಗಿದೆ ಎಂದ ಅವರು ಆನಗಟ್ಟಿ, ರಾಮೇನ ಹಳ್ಳಿ ರಸ್ತೆ ಡಾಂಬರೀಕರಣ ಕಾಮಗಾರಿಗೆ ನಾಲ್ಕು ಕೋಟಿ ಹಣ ಮಂಜೂರಾಗಿದ್ದು, ಶೀಘ್ರದಲ್ಲಿ ಕಾಮಗಾರಿ ಆರಂಭವಾಗಲಿದೆ ಎಂದರು.

ಗ್ರಾಮಸ್ಥರಿಂದ ಬಂದ ಮನವಿಗಳನ್ನು ಆಯಾ ಇಲಾಖೆಗೆ ಪರಿಹರಿಸುವಂತೆ ವರ್ಗಾಯಿಸಲಾಗಿದೆ, ಮುಂದಿನ ಮೂರು ತಿಂಗಳ ಅವಧಿಯಲ್ಲಿ ಈ ಸಮಸ್ಯೆಗಳು ಬಗೆಹರಿಯದಿದ್ದರೆ, ಆ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಲಾಗುವುದು ಎಂದರು.

ಗ್ರಾಮಸ್ಥರಿಂದ ಮನವಿಗಳ ಸುರಿಮಳೆ: ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಆನಗಟ್ಟಿಯಿಂದ ರಾಮೇನಹಳ್ಳಿಯವರೆಗಿನ ರಸ್ತೆಗೆ ಡಾಂಬರೀಕರಣದ ಅವಶ್ಯಕತೆ ಇದೆ, ಅಲ್ಲದೇ ವಾಲ್ಮೀಕಿ ಭವನ ಅರ್ಧದಷ್ಟು ಕಾಮಗಾರಿ ಮುಗಿದಿದ್ದು ಉಳಿದ ಕಾಮಗಾರಿಗೆ ಹಣ ಬಿಡುಗಡೆ ಮಾಡುವಂತೆ ಮನವಿ ಮಾಡಿದರು.

ಗ್ರಾಮದ ಸಮೀಪದಲ್ಲಿ ರಾಮೇನಹಳ್ಳಿ ಹಾಡಿ ಇದ್ದು ಇಲ್ಲಿ ಸಿಮೆಂಟ್ ರಸ್ತೆಯ ಅಗತ್ಯವಿದೆ, ಗ್ರಾಮಕ್ಕೆ ಒಂದು ರಂಗಮಂದಿರ ಅವಶ್ಯಕತೆ ಇದೆ. ಶಾಲೆಯಲ್ಲಿ ಮಕ್ಕಳು ಕುಳಿತು ಊಟ ಮಾಡಲು ಸ್ಥಳಾವಕಾಶದ ಕೊರತೆ ಇದ್ದು, ಊಟದ ಕೊಠಡಿಯನ್ನು ನಿರ್ಮಿಸಿಕೊಡಬೇಕು, ಅಂಬೇಡ್ಕರ್ ಭವನಕ್ಕೆ ಕಾಂಪೌಂಡ್ ನಿರ್ಮಾಣ, ಗ್ರಾಮದ ಸರ್ವೇ ನಂ 162ರಲ್ಲಿ 200 ಎಕರೆ ದುರಸ್ತಿಯಾಗಿಲ್ಲ, ದುರಸ್ತಿ ಮಾಡಿಸುವಂತೆ ಗ್ರಾಮಸ್ಥರು ಮನವಿ ಮಾಡಿದರು.

ಗ್ರಾಮ ಪಂಚಾಯಿತಿ ಅಧ್ಯಕ್ಷೆ ರತ್ನಮ್ಮ ನಾಗನಾಯಕ, ಉಪಾಧ್ಯಕ್ಷ ಬಸವರಾಜ ನಾಯಕ, ಸದಸ್ಯರಾದ ಭಾಸ್ಕರ್, ಸೀತಾ ಬಸವಣ್ಣ, ನಂದಿನಿ ರಮೇಶ್, ಗೌರಮ್ಮ ಗೋವಿಂದರಾಜು, ಆರ್.ವಿ. ಉಮೇಶ್, ಮಂಜುಳಾ ಚಿಕ್ಕನಾಯಕ, ಪಾಪೇಗೌಡ, ಮಹದೇವಮ್ಮ ಗೋಪಾಲಶೆಟ್ಟಿ, ಎನ್.ಸಿ. ಪ್ರಕಾಶ್, ಶಿವಮ್ಮ ಶಿವನಂಜು, ಲಕ್ಷ್ಮೀ, ಎಂ.ಎಸ್.ರವಿ, ಎಂ.ಎಸ್.ಲೋಕೇಶ್, ಅಧಿಕಾರಿಗಳಾದ ತಹಸೀಲ್ದಾರ್ ಶ್ರೀನಿವಾಸ್, ತಾಲೂಕು ಪಂಚಾಯಿತಿ ಇಓ ಧರಣೇಶ್, ವೈ ಪ್ರಸಾದ್, ಬಿಇಓ ರಾಜು, ಶಿವರಾಜು, ರಮೇಶ್, ಮಹೇಶ್, ಶಶಿಕಲಾ, ಎಇಇಗಳಾದ ಗಣೇಶ್, ನಟಶೇಖರಮೂರ್ತಿ, ಪಿ.ಹರ್ಷಿತಾ, ಮಾದೇಶ್, ನೇತ್ರಾವತಿ, ಪಿಡಿಓ ಚನ್ನಪ್ಪ, ರೇಣುಕಾ, ಮುಖಂಡರುಗಳಾದ ಜವರ ನಾಯಕ, ಬಸವರಾಜು, ನಿಂಗನಾಯಕ, ಬೋಜನಾಯಕ, ಶೇಖರ್, ಪ್ರೇಮ್ ಕುಮಾರ್, ಸೋಮಣ್ಣ, ಚಿಕ್ಕವೀರ, ಶಿವಪ್ಪ, ಪ್ರಕಾಶ, ಜವರಯ್ಯ, ಚಿಕ್ಕನಾಯಕ, ಚಂದ್ರನಾಯಕ, ಸಣ್ಣಲಿಂಗನಾಯಕ, ಗೋವಿಂದರಾಜು, ಪುಟ್ಟನಾಯಕ, ಹೇಮಂತ್, ಸಿದ್ದರಾಮು, ಮಣಿ ಮಂಜುಶೆಟ್ಟಿ ಗೋಪಾಲ್, ಪರಶಿವ, ವಿ.ಎ.ಯೋಗೇಶ್, ಜವರನಾಯಕ, ಬಸವರಾಜಶೆಟ್ಟಿ, ಮಹೇಶ್ ಇದ್ದರು.

ಪ್ರಯೋಜನಕ್ಕೆ ಬಾರದ ಜಾಗದಲ್ಲಿ ಶಾಸಕ ದರ್ಶನ್‌ರಿಂದ ಶಾಲಾ ಕಟ್ಟಡ ನಿರ್ಮಾಣ

ನೇರಳೆ ಗ್ರಾಪಂ ಅಧ್ಯಕ್ಷ ಬಿ.ಆರ್.ಗಿರೀಶ್ ಆರೋಪ



ನಂಜನಗೂಡು: ತಾಲೂಕಿನ ಹಳೇಪುರ ಗ್ರಾಮದಲ್ಲಿ ಶಾಸಕ ದರ್ಶನ್ ಧ್ರುವನಾರಾಯಣ್ ಗ್ರಾಮಸ್ಥರ ಆಶಯಗಳಿಗೆ ವಿರುದ್ಧವಾಗಿ ಪ್ರಯೋಜನಕ್ಕೆ ಬಾರದ ಕಡೆ ಶಾಲಾ ಕಟ್ಟಡ ನಿರ್ಮಾಣಕ್ಕೆ ಮುಂದಾಗಿದ್ದಾರೆ ಎಂದು ನೇರಳೆ ಗ್ರಾಮ ಪಂಚಾಯಿತಿ ಅಧ್ಯಕ್ಷ ಬಿ.ಆರ್.ಗಿರೀಶ್ ಆರೋಪಿಸಿದ್ದಾರೆ.

ನಗರದ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಹಳೇಪುರ ಗ್ರಾಮದಲ್ಲಿ ನಮ್ಮ ತಂದೆ ಶಾಲಾ ಕಟ್ಟಡ ನಿರ್ಮಾಣಕ್ಕಾಗಿ 10 ಗುಂಟೆ ನಿವೇಶನವನ್ನು ದಾನವಾಗಿ ನೀಡಿದ್ದರು, ಜಾಗದಲ್ಲಿ ಕಟ್ಟಿದ ಕಟ್ಟಡದಲ್ಲಿ ಶಾಲೆ ನಡೆಸಲಾಗುತ್ತಿದೆ, ಶಾಸಕರ ಅನುದಾನದಲ್ಲಿ ಹೆಚ್ಚುವರಿ ಶಾಲಾ ಕೊಠಡಿಗಳ ನಿರ್ಮಾಣಕ್ಕಾಗಿ 14.5 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಈಗಿರುವ ಶಾಲಾ ಕಟ್ಟಡದಲ್ಲಿ ಮೇಲಂತಸ್ತಿನಲ್ಲಿ ಶಾಲಾ ಕೊಠಡಿಗಳಿಗಾಗಿ ಕಟ್ಟಡ ನಿರ್ಮಿಸಿದರೆ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ ಎಂಬ ಗ್ರಾಮಸ್ಥರ ಮನವಿಯನ್ನು ಧಿಕ್ಕರಿಸಿ, ಗ್ರಾಮದ ಕೆಲವು ಯುವಕರ ಆಣತಿಯಂತೆ ಗ್ರಾಮದ ದೇವಾಲಯಕ್ಕೆ ಸೇರಿದ ಜಾಗದಲ್ಲಿ ಶಾಲಾ ಕಟ್ಟಡ ನಿರ್ಮಾಣ ಮಾಡುವ ತೀರ್ಮಾನ ಕೈಗೊಂಡು ಗ್ರಾಪಂ ಅಧ್ಯಕ್ಷನಾದ ನನ್ನನ್ನು ಕಡೆಗಣಿಸಿ ಮೊನ್ನೆ ಭೂಮಿ ಪೂಜೆ ನಡೆಸಿದ್ದಾರೆ ಎಂದರು. ಹಾಲಿ ಶಾಲೆಯ ಕಟ್ಟಡಕ್ಕೆ ಸುಸಜ್ಜಿತ ಕಾಂಪೌಂಡ್ ಇದ್ದು, ಶಾಲಾ ಕಟ್ಟಡ ಸುಭದ್ರವಾಗಿದೆ, ಹಾಲಿ ಶಾಲಾ ಕಟ್ಟಡದಲ್ಲಿ ಮೇಲಂತಸ್ತಿನಲ್ಲಿ ಶಾಲಾ ಕಟ್ಟಡ ನಿರ್ಮಿಸುವಂತೆ ಗ್ರಾಪಂ ಅಧ್ಯಕ್ಷನಾದ ನನ್ನ ಮನವಿಗೂ ಸ್ಪಂದಿಸದೆ, ದೇವಾಲಯಕ್ಕೆ ಸೇರಿದ ಜಾಗದಲ್ಲಿ ಶಾಲಾ ಕಟ್ಟಡ ನಿರ್ಮಾಣ ಮಾಡಲು ಹೊರಟಿದ್ದಾರೆ, ಇದರಿಂದಾಗಿ ಗ್ರಾಮಸ್ಥರ ಸ್ವಾಭಿಮಾನಕ್ಕೆ ಧಕ್ಕೆಯಾಗಿದೆ, ಶಾಸಕರ ನಿರ್ಧಾರದ ವಿರುದ್ಧ ಪ್ರತಿಭಟನೆ ನಡೆಸಲಾಗುವುದು ಎಂದು ಹೇಳಿದರು. ಬದನವಾಳು ನಾಗರಾಜ್ ಮಾತನಾಡಿದರು. ಪತ್ರಿಕಾಗೋಷ್ಠಿಯಲ್ಲಿ ಗೌಡಿಕೆ ಕಾಳಪ್ಪ, ರಾಚಪ್ಪ, ಬಸವಣ್ಣ ಉಪಸ್ಥಿತರಿದ್ದರು.

ನಿವೇಶನಗಳ ಖಾತೆ ನೀಡಲು ವಿಳಂಬ ಮಾಡಿದರೆ ಶಿಸ್ತು ಕ್ರಮಕ್ಕೆ ಸರ್ಕಾರಕ್ಕೆ ಶಿಪಾರಸ್ಸು

ಮೈಸೂರಿನ ರಮ್ಮನಹಳ್ಳಿ ಪಟ್ಟಣ ಪಂಚಾಯಿತಿಯಲ್ಲಿ ಪ್ರಗತಿ ಪರಿಶೀಲನೆ ವೇಳೆ

ಅಧಿಕಾರಿಗಳಿಗೆ ಶಾಸಕ ಜಿ.ಟಿ.ದೇವೇಗೌಡರ ಎಚ್ಚರಿಕೆ

- 399 ಖಾತೆ ವಿತರಣೆ ಆಗದೇ ಹಾಗೆ ಬಾಕಿ ಉಳಿದಿವೆ
- ಇನ್ನು 15 ದಿನದಲ್ಲಿ ಖಾತೆ ಮಾಡಿಕೊಡಲು ತಾಕೀತು
- ಮೂಲಭೂತ ಸೌಕರ್ಯಕ್ಕೆ 10 ಕೋಟಿ ಬಿಡುಗಡೆ
- ಉಂಡುವಾಡಿ ಯೋಜನೆ ಅನುಷ್ಠಾನಗೊಂಡರೆ ದಿನದ 24 ಗಂಟೆ ನೀರು ಪೂರೈಕೆ



ಮೈಸೂರಿನ ರಮ್ಮನಹಳ್ಳಿ ಪಟ್ಟಣ ಪಂಚಾಯಿತಿಯಲ್ಲಿ ಶಾಸಕ ಜಿ.ಟಿ.ದೇವೇಗೌಡರು ಪ್ರಗತಿ ಪರಿಶೀಲನಾ ಸಭೆ ನಡೆಸಿದರು.

ಮೈಸೂರು, ಡಿ.4(ಬಿಎಲ್‌ಯು)– ನಿವೇಶನಗಳ ಖಾತೆ ಮಾಡಿಕೊಡಲು ಅನಾವಶ್ಯಕವಾಗಿ ವಿಳಂಬ ಮಾಡಿದರೆ ನಿಮ್ಮ ವಿರುದ್ಧ ಶಿಸ್ತು ಕ್ರಮಕ್ಕೆ ಸರ್ಕಾರಕ್ಕೆ ಶಿಪಾರಸು ಮಾಡಲಾಗುವುದು ಎಂದು ಶಾಸಕ ಜಿ.ಟಿ.ದೇವೇಗೌಡ ಅವರು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದ್ದಾರೆ.

ಮೈಸೂರಿನ ರಮ್ಮನಹಳ್ಳಿ ಪಟ್ಟಣ ಪಂಚಾಯಿತಿಯಲ್ಲಿ ಇಂದು ಪ್ರಗತಿ ಪರಿಶೀಲನೆ ನಡೆಸಿದ ಅವರು, ಸಕಾರಣ ವಿಲ್ಲದೆ ಬಾಕಿ ಉಳಿಸಿಕೊಂಡಿರುವ ಖಾತೆಗಳನ್ನು ಇನ್ನು 15 ದಿನದಲ್ಲಿ ಮಾಡಿಕೊಡಬೇಕು ಎಂದು ತಾಕೀತು ಮಾಡಿದರು.

ರಮ್ಮನಹಳ್ಳಿ ಪಟ್ಟಣ ಪಂಚಾಯಿತಿಯಲ್ಲಿ 399 ಖಾತೆ ಮಾಡಿಕೊಡದೆ ಹಾಗೆ ಉಳಿಸಿಕೊಳ್ಳಲಾಗಿದೆ. ಯಾವ ಕಾರಣಕ್ಕೆ ಉಳಿಸಿಕೊಂಡಿದ್ದೀರಾ ಎಂದು ಜಿ.ಟಿ.ದೇವೇಗೌಡರು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಖಾತೆ ಮಾಡಿಕೊಡುವ ವಿಚಾರಕ್ಕೆ ಸಂಬಂಧಿಸಿದಂತೆ ಜನರನ್ನು ಅಲೆದಾಡಿಸಬೇಡಿ, ಖಾತೆ ಸಿಗದಿದ್ದರೆ ಮನೆ ನಿರ್ಮಾಣ, ನಿವೇಶನ ಮಾರಾಟ ಸೇರಿದಂತೆ ಅವರ ಇತರೆ ಕೆಲಸಕ್ಕೆ ತೊಂದರೆಯಾಗುತ್ತದೆ. ಈ ಹಿನ್ನೆಲೆ ಕೂಡಲೇ ಖಾತೆ ಮಾಡಿಕೊಡಬೇಕು. ಇಲ್ಲದಿದ್ದರೆ ಬೇಜವಾಬ್ದಾರಿ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮಕ್ಕೆ ಸರ್ಕಾರಕ್ಕೆ ಶಿಪಾರಸು ಮಾಡುತ್ತೇನೆ ಎಂದು ಎಚ್ಚರಿಸಿದರು.

ಈಗ ಗ್ರೇಟರ್ ಮೈಸೂರು ಮಾಡಲು ರಾಜ್ಯ ಸಚಿವ ಸಂಪುಟ ಒಪ್ಪಿಗೆ ನೀಡಿದೆ. ಇದರಿಂದ ಖಾಸಗಿ ಬಡಾವಣೆಗಳೆಷ್ಟು, ಗ್ರಾಮ ಹಾಗೂ ಮನೆಗಳೆಷ್ಟು, ಕಂದಾಯ ವಸೂಲಿಗಾರರು ಎಷ್ಟಿದ್ದಾರೆ, ವಾಟರಮನ್‌ಗಳು, ಪೌರ ಕಾರ್ಮಿಕರು ಎಷ್ಟಿದ್ದಾರೆ, ಯಾರ್ಯಾರಿಗೆ ಎಷ್ಟು ಜವಾಬ್ದಾರಿ ನೀಡಲಾಗಿದೆ ಎಂಬ ಬಗ್ಗೆ ಪಟ್ಟಿ ತಯಾರಿಸಿ ಮುಂದಿನ ಸಭೆಗೆ ವರದಿ ಮಂಡಿಸಬೇಕು ಎಂದು ಸೂಚಿಸಿದರು.

ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಬಡಾವಣೆಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸಲು ಹತ್ತುಕೋಟಿ ಬಿಡುಗಡೆಯಾಗಿದ್ದು, ಕಾಮಗಾರಿ ಆರಂಭಕ್ಕೆ ಕೂಡಲೇ ಟೆಂಡರ್ ಕರೆಯಬೇಕು ಎಂದು ಜಿ.ಟಿ.ದೇವೇಗೌಡರು ಹೇಳಿದರು.

ಕುಡಿಯುವ ನೀರಿನ ಪೈಪ್‌ಲೈನ್, ಒಳಚರಂಡಿ ಪೈಪ್‌ಲೈನ್ ಹಾಗೂ ಬಾಕ್ಸ್ ಡ್ರೈನ್‌ಗಳ ಕಾಮಗಾರಿಯನ್ನು ಮೊದಲು ಮಾಡಿ ಮುಗಿಸಬೇಕು. ತರುವಾಯ ಇತರೆ ಕಾಮಗಾರಿಗಳನ್ನು ಕೈಗೊಳ್ಳಬೇಕು ಎಂದು ತಾಕೀತು ಮಾಡಿದರು.

ಉಂಡುವಾಡಿ ಕುಡಿಯುವ ನೀರಿನ ಯೋಜನೆ ಅನುಷ್ಠಾನಗೊಂಡರೆ ದಿನದ 24 ಗಂಟೆ ಸಮರ್ಪಕ ಕುಡಿಯುವ ನೀರು ಪೂರೈಕೆಯಾಗುತ್ತದೆ. ಈ ಹಿನ್ನೆಲೆ ಯಾವ ಯಾವ ಪ್ರದೇಶಗಳಿಗೆ ಯಾವ ರೀತಿಯ ಪೈಪ್‌ಲೈನ್ ಅಳವಡಿಸಬೇಕು ಎಂಬ ಬಗ್ಗೆ ಯೋಜನೆ ರೂಪಿಸಿ ಎಂದು ಸೂಚನೆ ನೀಡಿದರು.

ಇದೇ ವೇಳೆ ಜಿ.ಟಿ.ದೇವೇಗೌಡರು ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದರು. ಸರ್ಕಾರದ ಮೇಲೆ ಒತ್ತಡ ತಂದು ಕಷ್ಟ ಪಟ್ಟು ಗ್ರೇಟರ್ ಮೈಸೂರು ಯೋಜನೆಗೆ ಸರ್ಕಾರದ ಒಪ್ಪಿಗೆ ನೀಡುವಂತೆ ಮಾಡಿದ್ದೇನೆ. ಖಾತೆ ಸೇರಿದಂತೆ ನಿಮ್ಮ ಹಲವು ಸಮಸ್ಯೆಗಳನ್ನು ಶೀಘ್ರ ಪರಿಹರಿಸಲಾಗುವುದು ಎಂದು ಭರವಸೆ ನೀಡಿದರು.

ಪಟ್ಟಣ ಪಂಚಾಯಿತಿ ಮೈಸೂರು ನಗರ ಪಾಲಿಕೆಗೆ ಹಸ್ತಾಂತರವಾದ ನಂತರ ಎಲ್ಲಾ ಕೆಲಸಗಳು ಸುಲಲಿತವಾಗಿ ನಡೆಯಲಿವೆ. ಇದರಿಂದ ನೀವು ನಿರೀಕ್ಷೆ ಮಾಡಿದಂತೆ ಎಲ್ಲಾ ಅಭಿವೃದ್ಧಿ ಕೆಲಸಗಳು ಕಾರ್ಯರೂಪಕ್ಕೆ ಬರಲಿವೆ. ಆದರೆ ಸ್ವಲ್ಪ ಸಮಯ ಕಾಯಬೇಕು ಎಂದು ಜಿ.ಟಿ.ದೇವೇಗೌಡರು ಸಲಹೆ ನೀಡಿದರು.

ಜಿಲ್ಲಾ ನಗರಾಭಿವೃದ್ಧಿ ಕೋಶ ಯೋಜನಾಧಿಕಾರಿ ವಿ.ಪ್ರಿಯಾದರ್ಶಿನಿ, ಆಡಳಿತಾಧಿಕಾರಿ ಮಹೇಶ್ ಕುಮಾರ್, ಮುಖ್ಯಾಧಿಕಾರಿ ಎಸ್.ಎನ್.ರವಿಕೀರ್ತಿ ಸಭೆಯಲ್ಲಿ ಹಾಜರಿದ್ದರು.

ಡಿ.7ಕ್ಕೆ ಉದ್ಯೋಗ ಮೇಳ; ಔಷಧ ರಹಿತ ಚಿಕಿತ್ಸಾ ಕಾರ್ಯಾಗಾರ

ಮೈಸೂರು, ಡಿ.4(ಎಂಕೆ)– ಮೈಸೂರಿನ ವಿವೇಕಾನಂದ ನಗರದ ವಿಶ್ವಧಾತ್ರಿ ರಸ್ತೆಯಲ್ಲಿರುವ ದೇವಮಲ್ಲು ಕ್ಷತ್ರಿಯ ಜಟ್ಟಿ ಸಂಘದಲ್ಲಿ ಡಿ.7ರಂದು ಬೆಳಗ್ಗೆ 9 ಗಂಟೆಗೆ ರಂಗೋಲಿ ಸಾಮಾಜಿಕ ಸೇವಾ ಪ್ರತಿಷ್ಠಾನ, ನಿಖ್ಷ್ ಇನ್ಫೋಟೆಕ್ ಸಲ್ಯೂಷನ್ಸ್, ಡ್ರಿಯಾ ಔರ್ ಸ್ಕ್ಯಾನಿಂಗ್ ಮತ್ತು ಹೀಲಿಂಗ್ ಸೆಂಟರ್ ವತಿಯಿಂದ ಕನ್ನಡ ರಾಜ್ಯೋತ್ಸವದ ಅಂಗವಾಗಿ 'ಉದ್ಯೋಗ ಮೇಳ ಹಾಗೂ ಔಷಧಿ ರಹಿತ ಚಿಕಿತ್ಸಾ ಕಾರ್ಯಾಗಾರ'ವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಂಘಟಕ ಕೆ. ಮಹೇಶ್ ಅರಸ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಗುರುವಾರ ಸುದ್ದಿಗೋಷ್ಠಿ ನಡೆಸಿದ ಅವರು, ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ನಾರಾಯಣಮೂರ್ತಿ ಉದ್ಘಾಟಿಸಲಿದ್ದು, ಶ್ರೀರಾಮ ಸೇವಾ ಅರಸು ಮಂಡಳಿ ಅಧ್ಯಕ್ಷ ಡಾ.ಸುಂದರ್ ರಾಜೇ ಅರಸ್ ಅಧ್ಯಕ್ಷತೆ ವಹಿಸಲಿದ್ದಾರೆ. ನಿವೃತ್ತ ಪಿಎಸ್‌ಐ ಪಿ.ಕೃಷ್ಣ ಅರಸ್, ಜೈ ಕಪೂರ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದು, ಉದ್ಯೋಗ ಮೇಳಕ್ಕೆ ಉಚಿತ ನೋಂದಣಿ ಇರಲಿದೆ. ಸಾಫ್ಟ್‌ವೇರ್, ಜೆ.ಕೆ. ಟಯರ್ಸ್, ಬ್ಯಾಂಕಿಂಗ್, ಫಾರ್ಮಸಿ ಮೊದಲಾದ ವಲಯಗಳ ಹಲವು ಕಂಪನಿಗಳು ಪಾಲ್ಗೊಳ್ಳುತ್ತಿವೆ ಎಂದು ಮಾಹಿತಿ ನೀಡಿದರು. ಸುದ್ದಿಗೋಷ್ಠಿಯಲ್ಲಿ ರಾಜೇಶ್, ಬಿ.ಎನ್.ಪ್ರದೀಪ್, ಜೆ.ವಿ.ಪರಮೇಶ್, ಕೆ.ವಾಸುಕಿ ಉಪಸ್ಥಿತರಿದ್ದರು.

ಅತ್ಯಾಚಾರ ಜರುಗಿದ ದಿನ ಮುರುಘಾ ಶ್ರೀ ದೇಶದಲ್ಲೇ ಇರಲಿಲ್ಲ; 2ನೇ ಪೋಕ್ಸೋ ಕೇಸ್‌ನಿಂದಲೂ ಖುಲಾಸೆ



ಚಿತ್ರದುರ್ಗ, ಡಿ.4– ಶಿವಮೂರ್ತಿ ಮುರುಘಾ ಶ್ರೀ ವಿರುದ್ಧದ ಪೋಕ್ಸೋ ಪ್ರಕರಣದ ಎರಡನೇ ಸಂತ್ರಸ್ತೆ ತನ್ನ ಮೇಲೆ ಲೈಂಗಿಕ ಕೃತ್ಯ ನಡೆಸಿದರು ಎಂದು ನಮೂದಿಸಿದ ದಿನ ಶರಣರು ವಿದೇಶ ಪ್ರವಾಸದಲ್ಲಿರುವುದು ಸಾಬೀತಾದ ಹಿನ್ನೆಲೆಯಲ್ಲಿ ಎರಡನೇ ದೋಷಾರೋಪದಿಂದ ನ್ಯಾಯಾಲಯ ಖುಲಾಸೆಗೊಳಿಸಿದೆ. ಸಂತ್ರಸ್ತೆಯ ಹೇಳಿಕೆಯಲ್ಲಿನ ವೈರುಧ್ಯಗಳು ಮತ್ತು ಅತಾರ್ಕಿಕ ಸಾಕ್ಷ್ಯವು ದೋಷಾರೋಪದ ತಳಹದಿಯನ್ನೇ ಸಂಶಯಿಸುವಂತಿದೆ ಎಂದು ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರು ಅಭಿಪ್ರಾಯಪಟ್ಟಿದ್ದಾರೆ.

ಶರಣರು 2022ರ ಜುಲೈ 23 ರಂದು ಬಾಂಬೆಯಲ್ಲಿದ್ದು ಅಂದಿನಿಂದ 28ರವರೆಗೆ ವಿದೇಶ ಪ್ರವಾಸದಲ್ಲಿರುವುದು ಅವರ ಪಾಸ್‌ಪೋರ್ಟ್ ಮತ್ತು ವೀಸಾ ಸ್ಟ್ಯಾಂಪಿಂಗ್ ಮೂಲಕ ರುಜುವಾತಾಗಿದೆ. ಹಾಗಾಗಿ 24 ಜುಲೈ 2022 ರಂದು ಸಂತ್ರಸ್ತೆ ಆರೋಪಿಯ ಕೋಣೆಗೆ ಹೋಗಿದ್ದು ಅಂದು ಅತ್ಯಾಚಾರ ಜರುಗಿದೆ ಎಂದು ನುಡಿದಿರುವುದು ಇಡೀ ಪ್ರಕರಣದ ಸತ್ಯಾಸತ್ಯತೆಯನ್ನೇ ಸಂಶಯಿಸುವಂತೆ ಮಾಡಿದೆ.

ಸಂತ್ರಸ್ತೆ ಮೊದಲನೇ ಬಾರಿ ಮುರುಘಾ ಶ್ರೀಗಳನ್ನು ಭೇಟಿ ಮಾಡಿದಾಗ ಪಕ್ಕದಲ್ಲಿ ಕುಳ್ಳಿರಿಸಿಕೊಂಡು ತನ್ನ ತಾಯಿ, ಸಹೋದರ, ಕುಟುಂಬದ ಕುರಿತು ಮಾತನಾಡಿದ್ದರು. ಆಗ ತನ್ನ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿಲ್ಲ ಎಂದಿದ್ದರು.

ಎರಡನೇ ಬಾರಿ 24–06–2022 ರಂದು ಎರಡನೇ ಆರೋಪಿಯ ವಾರ್ಡನ್ ರಶ್ಮಿ ಖಾಸಗಿ ಕೋಣೆಗೆ ಹೋಗಿದ್ದೆ. ಅಂದು ವಾರ್ಡನ್ ರಶ್ಮಿ, ಶರಣರ ಖಾಸಗಿ ಕೋಣೆಗೆ ಹೋಗು ಎಂದು ಒತ್ತಾಯಿಸಿದಾಗ ತಾನು ನಿರಾಕರಿಸಿದ್ದಾಗಿ ಸಂತ್ರಸ್ತೆಯು ಹೇಳಿಕೆ ನೀಡಿದ್ದಾರೆ. ಇದೇ ಕಾರಣಕ್ಕೆ ವಾರ್ಡನ್ ರಶ್ಮಿ ಸಂತ್ರಸ್ತೆಯ ಮೇಲೆ ಹಲ್ಲೆ ಮಾಡಿ, ಹಾಸ್ಟೆಲ್‌ನಿಂದ ಹೊರಗೆ ಹಾಕಿದ್ದರಿಂದ ಸಂತ್ರಸ್ತೆ ಆಟೋ ಹತ್ತಿಕೊಂಡು ಬೆಂಗಳೂರಿಗೆ ಬಂದಿರುತ್ತಾರೆ.

ಸಂತ್ರಸ್ತೆಯು ಪ್ರಕರಣದ ಬೇರೆ ಬೇರೆ ಹಂತಗಳಲ್ಲಿ ವೈದ್ಯರು ಮತ್ತು ನ್ಯಾಯಾಲಯದಲ್ಲಿ ನುಡಿದಿರುವ ಹೇಳಿಕೆಗಳು ಪರಸ್ಪರ ವ್ಯತಿರಿಕ್ತವಾಗಿರುವುದು ಹಾಗೂ ಪದೇ ಪದೆ ತನ್ನ ಹೇಳಿಕೆಗಳನ್ನು ಬದಲಿಸಿರುವುದು. ಸಂತ್ರಸ್ತೆ ನೀಡಿರುವ ಸಾಕ್ಷ್ಯಗಳು ಆರಂಭದಿಂದ ಕಡೆಯವರೆಗೂ ನಂಬಲರ್ಹವಾಗಿಲ್ಲವೆಂದು ತೀರ್ಪಿನಲ್ಲಿ ಉಲ್ಲೇಖಿಸಲಾಗಿದೆ.

ಸಂತ್ರಸ್ತೆ ಕಾಟನ್‌ಪೇಟೆ ಪೊಲೀಸರ ಮುಂದೆ ನೀಡಿದ ಆರಂಭಿಕ ಹೇಳಿಕೆಗೂ ನಂತರದಲ್ಲಿ ನುಡಿದ ಸಾಕ್ಷ್ಯಕ್ಕೂ ಅಜಗಜಾಂತರವಿದೆ. ಸಂತ್ರಸ್ತೆ ಸುಳ್ಳು ಹೇಳುವ ಅಥವಾ ಪದೇ ಪದೆ ತನ್ನ ಹೇಳಿಕೆ ಬದಲಾಯಿಸುವ ಸ್ವಭಾವವನ್ನು ಪಾಟೀ ಸವಾಲಿನಲ್ಲಿ ಬಯಲು ಮಾಡಲಾಗಿದೆ.

ಸಂತ್ರಸ್ತೆಯನ್ನು ಮೈಸೂರಿಗೆ ಕರೆದೊಯ್ದುವ ಮೊದಲು ಬೆಂಗಳೂರಿನಲ್ಲಿ ಒಡನಾಡಿಯ ಸ್ಟ್ಯಾನ್ಲಿ ಮತ್ತು ಪರುಶು ಅವರು ಸಂತ್ರಸ್ತೆಯನ್ನು ಬಸವರಾಜನ್ ದಂಪತಿಯ ಜೊತೆಯಲ್ಲಿ ಮಾನವ ಹಕ್ಕು ಆಯೋಗದ ಮುಂಭಾಗ ಪಾರ್ಕ್‌ನಲ್ಲಿ ಭೇಟಿ ಮಾಡಿದ್ದಾರೆ. ಈ ಸಮಯದಲ್ಲಿ ಬೆಂಗಳೂರಿನಲ್ಲಿರುವ ಪೊಲೀಸ್ ಮುಖ್ಯಸ್ಥರಿಗಾಗಲೀ ಅಥವಾ ಮಕ್ಕಳ ಆಯೋಗಕ್ಕಾಗಲಿ ಕರೆದೊಯ್ಯದೆ ಮೈಸೂರಿಗೆ ಮರು ದಿನ ಕರೆಸಿಕೊಂಡು ಹೋಗಿ ದೂರು ನೀಡಿರುವುದು ತೀರಾ ಅಸಹಜವಾಗಿದೆ ಎಂದು ತೀರ್ಪಿನಲ್ಲಿ ತಿಳಿಸಲಾಗಿದೆ. ನಂತರ ಮೈಸೂರಿನ ನಜರ್‌ಬಾದ್ ಪೊಲೀಸರು ವಿಚಾರಣೆ ನಡೆಸಿ ಹೇಳಿಕೆಯನ್ನು ಬರೆದುಕೊಂಡಿದ್ದಾರೆ. ನಂತರ ಮಕ್ಕಳ ಕಲ್ಯಾಣ ಸಮಿತಿಗೆ ಕರೆದೊಯ್ಯಲಾಯಿತು. ಅಲ್ಲಿಯೂ ಸಹಾ ಸಂತ್ರಸ್ತೆಯ ಹೇಳಿಕೆಯನ್ನು ಪಡೆಯಲಾಗಿದೆ.

ನಜರ್‌ಬಾದ್ ಪೊಲೀಸರು ಪ್ರಕರಣ ದಾಖಲಿಸಿದ ನಂತರ ಮೈಸೂರಿನಲ್ಲಿರುವ ಆಸ್ಪತ್ರೆಗೆ ಕಳುಹಿಸಲಾಯಿತು ಎಂದು ಸಂತ್ರಸ್ತೆ ಹೇಳಿದ್ದಾರೆ. ಅಲ್ಲದೇ, ಮೈಸೂರಿನ ವೈದ್ಯರ ಮುಂದೆ ಹೇಳಿಕೆ ನೀಡಿರುವುದಾಗಿ ಹೇಳಿದ್ದು, ತನಿಖೆಯಲ್ಲಿ ನಜರ್‌ಬಾದ್ ಪೊಲೀಸರು ಮೈಸೂರಿನಲ್ಲಿ ಆಸ್ಪತ್ರೆಗೆ ಕಳುಹಿಸಿದ ಸಂಗತಿಯನ್ನಾಗಲೀ, ಅಥವಾ ಮಕ್ಕಳ ಕಲ್ಯಾಣ ಸಮಿತಿಯು ಮಾಡಿಕೊಂಡಿರುವ ಹೇಳಿಕೆಗಳನ್ನಾಗಲೀ ಅಂತಿಮ ವರದಿಯಲ್ಲಿ ದಾಖಲಿಸಿಲ್ಲ. ಇದು ಕೂಡಾ ಸಂತ್ರಸ್ತೆಯ ಸಾಕ್ಷ್ಯಗಳ ಕುರಿತು ಸಂಶಯಕ್ಕೆ ಕಾರಣವಾಗಿದೆ.

ಸಂತ್ರಸ್ತೆ ಸೌಭಾಗ್ಯ ಬಸವರಾಜನ್ ಮನೆಯಲ್ಲಿರುವಾಗಲೇ ಆಕೆಯ ತಂದೆ, ಚಿಕ್ಕಪ್ಪ, ಅಜ್ಜಿ ಬಂದು ಭೇಟಿ ಮಾಡಿದಾಗಲೂ ತನ್ನ ಮೇಲೆ ಲೈಂಗಿಕ ದೌರ್ಜನ್ಯವಾದ ಬಗ್ಗೆ ಹೇಳಿಲ್ಲ. ಸಾಮಾನ್ಯವಾಗಿ ಹೆಣ್ಣು ಮಕ್ಕಳು ತಮಗಾಗಿರುವ ಕಹಿ ಅನುಭವಗಳನ್ನು ತಮ್ಮ ಪೋಷಕರ ಜತೆ ಹಂಚಿಕೊಳ್ಳುತ್ತಾರೆ. ಸಂತ್ರಸ್ತೆ ಪೋಷಕರ ಜತೆ ಏನನ್ನೂ ಹೇಳದಿರುವುದು ತೀರ ಸೋಜಿಗವಾದ ಸಂಗತಿಯಾಗಿದೆ.

ಸಂತ್ರಸ್ತೆಯ ಪೋಷಕರ ವಿಳಾಸವನ್ನೂ ಪತ್ತೆ ಮಾಡದೇ ನೇರವಾಗಿ ಬಸವರಾಜನ್ ದಂಪತಿಗಳಿಗೆ ಮಕ್ಕಳನ್ನು ಒಪ್ಪಿಸಿರುವುದು ಮತ್ತು ಧನಂಜಯ, ಬಸವರಾಜನ್ ನಿಕಟವರ್ತಿಯಾಗಿರುವುದು ಷಡ್ಯಂತ್ರ ಎಂದು ಉಲ್ಲೇಖಿಸಲಾಗಿದೆ.

ಮಕ್ಕಳ ಭವಿಷ್ಯ ಉಜ್ವಲವಾಗಿ ರೂಪಿಸುವಲ್ಲಿ ಪೋಷಕರು, ಶಿಕ್ಷಕರು, ಸರ್ಕಾರದ್ದು ಸಮಾನ ಪಾತ್ರ

- ಮೈಸೂರು ವಿವಿ ಕುಲಸಚಿವೆ ಎಂ.ಕೆ.ಸವಿತಾ ಪ್ರತಿಪಾದನೆ
- ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್‌ನ 'ನೈಪುಣ್ಯೋತ್ಸವ- ಜನಪದ ತೇರು' ವಾರ್ಷಿಕೋತ್ಸವಕ್ಕೆ ಅದ್ದೂರಿ ತೆರೆ





ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಡಾ. ಹಾಸನ ರಘು ಅವರಿಗೆ 'ನೈಪುಣ್ಯ ಗೌರವ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಮತ್ತೊಂದು ಚಿತ್ರದಲ್ಲಿ ಜಾನಪದ ಸಂಗಮ ನೃತ್ಯ ಪ್ರದರ್ಶನ ಮಾಡಿದ ನೈಪುಣ್ಯ ಶಾಲಾ ಮಕ್ಕಳನ್ನು ಕಾಣಬಹುದು.

ಮೈಸೂರು, ಡಿ.4(ವಿವಿಹೆಚ್)– ಪ್ರಸ್ತುತ ಶಿಕ್ಷಣ ವ್ಯವಸ್ಥೆಯಲ್ಲಿ ಮಕ್ಕಳ ಭವಿಷ್ಯವನ್ನು ಉಜ್ವಲವಾಗಿ ರೂಪಿಸಲು ಪೋಷಕರು, ಶಿಕ್ಷಕರು ಹಾಗೂ ಸರ್ಕಾರ ಸಮಾನ ಪಾತ್ರ ವಹಿಸಬೇಕು ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವೆ (ಆಡಳಿತ) ಎಂ.ಕೆ.ಸವಿತಾ ಅಭಿಪ್ರಾಯಪಟ್ಟರು.

ನಗರದ ಕಲಾಮಂದಿರ ಆವರಣದಲ್ಲಿ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ವತಿಯಿಂದ ಗುರುವಾರ ಆಯೋಜಿಸಲಾಗಿದ್ದ ಎರಡು ದಿನಗಳ 'ನೈಪುಣ್ಯೋತ್ಸವ– ಜನಪದ ತೇರು' ವಾರ್ಷಿಕೋತ್ಸವದ ಸಮಾರೋಪ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಮಕ್ಕಳು ತಮ್ಮ ಪೋಷಕರನ್ನು ಅನುಸರಿಸುತ್ತಾರೆ. ಅವರನ್ನೇ ತಮ್ಮ ರೋಲ್–ಮಾಡೆಲ್‌ಗಳಾಗಿ ಸ್ವೀಕರಿಸುತ್ತಾರೆ. ಪೋಷಕರಾಗಿ ನಾವು ಮಕ್ಕಳಿಗೆ ಎಲ್ಲವೂ ಆಗಿರುತ್ತೇವೆ. ನಮ್ಮ ನಡವಳಿಕೆ, ಸ್ವಭಾವಗಳು ಮಕ್ಕಳ ಮೇಲೆ ನೇರವಾಗಿ ಪ್ರಭಾವ ಬೀರಲಿದ್ದು, ಇದನ್ನರಿತು ಎಲ್ಲಾ ಒತ್ತಡಗಳನ್ನು ಬದಿಗಿಟ್ಟು ಮಕ್ಕಳೊಂದಿಗೆ ಪೋಷಕರು ಬೆರೆಯುವುದನ್ನು ಕಲಿಯಬೇಕು. ಅವರಿಗೆ ಶಿಕ್ಷಣದೊಂದಿಗೆ ಗುಣಾತ್ಮಕ ನಡವಳಿಕೆಯನ್ನು ಪೋಷಕರು ಕಲಿಸಬೇಕು ಎಂದರು.

ಮಕ್ಕಳ ಸರ್ವತೋಮುಖ ಬೆಳವಣಿಗೆಯಲ್ಲಿ ಪೋಷಕರ ಪಾತ್ರ ಬಹಳ ಮುಖ್ಯ. ಕೇವಲ ಓದು ಮಾತ್ರವಲ್ಲದೇ ಇನ್ನಿತರೆ ವಿಚಾರಗಳಲ್ಲಿ ಆಸಕ್ತಿ ಇರುವ ಮಕ್ಕಳಿಗೆ ಪೋಷಕರು ಸಹಕಾರ ಮತ್ತು ಬೆಂಬಲ ನೀಡಬೇಕು. ಬೆನ್ನುತಟ್ಟಿ ಉರಿದುಂಬಿಸುವ ಕೆಲಸ ಆದಲ್ಲಿ ಮಕ್ಕಳ ಪ್ರತಿಭೆ ಅನಾವರಣವಾಗುತ್ತದೆ ಎಂದರು.

ಶಾಲಾ ಹಂತದಲ್ಲಿಯೇ ಅಂಕ, ಶ್ರೇಣಿ, ಪೈಪೋಟಿ ಎಂದು ಮಕ್ಕಳಿಗೆ ಮಾನಸಿಕ ಹಿಂಸೆ ನೀಡಲಾಗುತ್ತಿದೆ. ಇದು ಅವರ ಬೆಳವಣಿಗೆ ಮೇಲೆ ಅಡ್ಡ ಪರಿಣಾಮ ಬೀರುತ್ತಿದೆ. ಮಕ್ಕಳ ಮೇಲೆ ಒತ್ತಡ ಹೇರುವುದು ಬಿಟ್ಟು, ಬಾಲ್ಯವನ್ನು ಅನುಭವಿಸಲು ಅವಕಾಶ ನೀಡಿ ಎಂದು ಕಿವಿಮಾತು ಹೇಳಿದರು.

ಇಂದಿನ ದಿನಗಳಲ್ಲಿ ಮೊಬೈಲ್, ಸಾಮಾಜಿಕ ಮಾಧ್ಯಮಗಳ ಪ್ರಭಾವ ಹೆಚ್ಚಾಗಿದ್ದು, ಮಕ್ಕಳು ಇವುಗಳಿಂದ ಏನನ್ನು ಕಲಿಯುತ್ತಾರೆ, ಏನನ್ನು ನೋಡುತ್ತಾರೆ ಎಂಬುದರತ್ತ ಕಣ್ಣಿಡಬೇಕು. ನಮ್ಮ ಮಕ್ಕಳ ರಕ್ಷಣೆ ನಮ್ಮ ಜವಾಬ್ದಾರಿ ಎಂದು ಸಲಹೆ ನೀಡಿದರು.

> ಜನಪದದಲ್ಲಿ ನಮ್ಮ ಜೀವಂತಿಕೆಯಿದೆ. ಕಲೆ ಸಾಹಿತ್ಯ, ಆರೋಗ್ಯ, ಶಿಕ್ಷಣ, ಸಂಸ್ಕೃತಿ, ಮನರಂಜನೆ, ನಾಟ್ಯ ಎಲ್ಲವನ್ನು ಕಲಿಸುತ್ತದೆ. ಇಂತಹ ಜನಪದ ಕಾರ್ಯಕ್ರಮವನ್ನು ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಆಯೋಜಿಸಿ, ಉತ್ತೇಜಿಸುತ್ತಿರುವುದು ಉತ್ತಮ ಸಂಗತಿ
> -ಎಂ.ಕೆ.ಸವಿತಾ, ಕುಲಸಚಿವೆ (ಆಡಳಿತ), ಮೈಸೂರು ವಿವಿ

ಶೈಕ್ಷಣಿಕ ಸಲಹೆಗಾರರಾದ ಡಾ. ಎಲ್.ಸವಿತಾ ಮಾತನಾಡಿ, ಸಮಾಜದಲ್ಲಿ ನೋಡಿದ್ದನ್ನೇ ಮಕ್ಕಳು ಕಲಿಯುತ್ತಾರೆ. ಸಮಾಜದೊಂದಿಗೆ ಮಕ್ಕಳು ಬೆರೆಯುವ ರೀತಿಯಲ್ಲಿ, ಮಕ್ಕಳ ಸರ್ವತೋಮುಖ ಬೆಳವಣಿಗೆ ಮೇಲೆ ಪೋಷಕರ ಮಾರ್ಕ್ಸ್ ಕಾರ್ಡ್ ಸಿಗುತ್ತದೆ. ಹಾಗಾಗಿ ಉತ್ತಮ ಸಮಾಜ ನಿರ್ಮಾಣ ಮಾಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದರು.

> ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಸಂಸ್ಥೆಯ ದಟ್ಟಗಳ್ಳಿ ಕ್ಯಾಂಪಸ್‌ನ ವಿದ್ಯಾರ್ಥಿಗಳು ತಮ್ಮ ಜಾನಪದ ಪ್ರತಿಭೆಯನ್ನು ಅನಾವರಣಗೊಳಿಸಿದರು. ಹೆಸರಾಂತ ಜನಪದ ಕಲಾ ತಂಡವಾದ 'ರಘುಲೀಲಾ ಸ್ಕೂಲ್ ಆಫ್ ಮ್ಯೂಸಿಕ್' ನಿರ್ದೇಶನದಲ್ಲಿ ಸಿಬಿಎಸ್‌ಇ ಗ್ರೇಡ್ 1 ಟೂ 8 ಪಠ್ಯಕ್ರಮದ ವಿದ್ಯಾರ್ಥಿಗಳು 'ಜನಪದ ಸಂಗಮ' ಕಾರ್ಯಕ್ರಮವನ್ನು ಪ್ರದರ್ಶಿಸಿ, ಎಲ್ಲರ ಮೆಚ್ಚುಗೆ ಗಳಿಸಿದರು.

ಮಕ್ಕಳಿಗೆ ಸರಿ–ತಪ್ಪುಗಳ ಅರ್ಥೈಸಿಕೊಳ್ಳಲು ಸಾಧ್ಯವಿಲ್ಲ ತಾವು ಏನು ಮಾಡಿದರೂ ಅದನ್ನು ಪೋಷಕರ ಬಳಿ ಬಂದು ಹೇಳುತ್ತಾರೆ. ಪೋಷಕರಾದ ನಾವು ಮಕ್ಕಳಿಗೆ ಸಮಸ್ಯೆಗಳನ್ನು ಬಗೆಹರಿಸಲು ಕಲಿಸಬೇಕು. ಬದಲಾಗಿ ಅವರ ಸಮಸ್ಯೆಗಳಿಗೆ ಮೂಗು ತೂರಿಸಬಾರದು. ಇದು ಹೀಗೆ ಮುಂದುವರಿದರೆ ಮುಂದಿನ ದಿನಗಳಲ್ಲಿ ಅವರ ಎಲ್ಲಾ ಸಮಸ್ಯೆಗಳಿಗೆ ನಿಮ್ಮನ್ನೇ ಹಿಂಬಾಲಿಸುತ್ತಾರೆ. ಪೋಷಕರಾದವರು ಆ ತಪ್ಪು ಮಾಡಬೇಡಿ ಎಂದರು.

ಎಷ್ಟೇ ಉತ್ತಮ ಪೊಲೀಸ್ ಠಾಣೆ ಇದ್ದರೂ, ಉತ್ತಮ ಆಸ್ಪತ್ರೆಯಿದ್ದರೂ ಮಕ್ಕಳನ್ನು ಅಲ್ಲಿ ಬಿಡುವುದಿಲ್ಲ. ಆದರೆ ಶಾಲೆಗಳಲ್ಲಿ ಶಿಕ್ಷಕರ ಬಳಿಯಲ್ಲಿ ಬಿಟ್ಟು ನಿರಾಳರಾಗುತ್ತೀರಿ. ಶಿಕ್ಷಕ ವೃತ್ತಿಗೆ, ಶಿಕ್ಷಣಕ್ಕೆ ಮಾತ್ರ ಮಕ್ಕಳನ್ನು ತಿದ್ದುವ, ಉತ್ತಮ ಪ್ರಜೆಯನ್ನಾಗಿ ಮಾಡುವ ಶಕ್ತಿ ಇರುವುದು. ಶಿಕ್ಷಕರಿಗೆ ಪೋಷಕರು ಬೆಂಬಲವಾಗಿದ್ದುಕೊಂಡು ಮಕ್ಕಳ ಭವಿಷ್ಯ ರೂಪಿಸುವಲ್ಲಿ ಸಹಕರಿಸಬೇಕು ಎಂದು ತಿಳಿಸಿದರು.

ಇದೇ ವೇಳೆ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಡಾ. ಹಾಸನ ರಘು ಅವರಿಗೆ 'ನೈಪುಣ್ಯ ಗೌರವ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ನೈಪುಣ್ಯ ಗ್ರೂಪ್ ಆಫ್ ಇನ್ಸ್ಟಿಟ್ಯೂಷನ್ಸ್ ಅಧ್ಯಕ್ಷ ಆರ್.ರಘು (ರಘು ಕೌಟಿಲ್ಯ), ಕಾರ್ಯದರ್ಶಿ ಆರ್.ಕೌಟಿಲ್ಯ, ಪ್ರಾಂಶುಪಾಲರಾದ ಮಹೇಂದ್ರ, ಉಪ ಪ್ರಾಂಶುಪಾಲರಾದ ಶಾಲಿನಿ ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಆಂಧ್ರ ಕಿಂಗ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಐ ಆ್ಯಮ್ ಗಾಡ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಧುರಂದರ್ (ಹಿ)	4 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಮಸ್ತಿ ಪೊಲೀಸ್ (ತ)	4 ಪ್ರದರ್ಶನಗಳು
ಗಾಯಿತ್ರಿ	
ಅಖಂಡ–2 (ಕ)	4 ಪ್ರದರ್ಶನಗಳು
ರಾಜಕಮಲ್	
ತೇರೇ ಇಷ್ಕ್ ಮೇ (ತ)	4 ಪ್ರದರ್ಶನಗಳು
ಸಂಗಂ	
ಧುರಂದರ್ (ಹಿ)	3 ಪ್ರದರ್ಶನಗಳು
ಲಿಡೋ	
ಮಾಸ್ ಯಾತ್ರಾ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಧರ್ಮಂ (ಕ)	4 ಪ್ರದರ್ಶನಗಳು

ವಿಜಯ ವಿಠಲ ವಿದ್ಯಾಶಾಲೆಯಲ್ಲಿ 'ಫನ್ ಫೇರ್' ಕಾರ್ಯಕ್ರಮ



ಮೈಸೂರಿನ ವಿಜಯ ವಿಠಲ ವಿದ್ಯಾಶಾಲೆಯಲ್ಲಿ ಏರ್ಪಡಿಸಿದ್ದ 'ಫನ್ ಫೇರ್' ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು.

ಮೈಸೂರು, ಡಿ.4– ಮೈಸೂರಿನ ವಿಜಯ ವಿಠಲ ವಿದ್ಯಾಶಾಲೆಯಲ್ಲಿ ಇಂದು 'ಫನ್ ಫೇರ್(ಮೋಜಿನ ಮೇಳ)' ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ವಿದ್ಯಾರ್ಥಿಗಳ ವೈವಿಧ್ಯಮಯ ಮಳಿಗೆಗಳು, ಮನರಂಜನಾ ಆಟಗಳು, ಪ್ರದರ್ಶನಗಳು ಮತ್ತು ಸೃಜನಾತ್ಮಕ ಮಾದರಿಗಳು ಎಲ್ಲರ ಗಮನ ಸೆಳೆದವು. ಕಾರ್ಯಕ್ರಮದ ನಾವೀನ್ಯತೆ, ತಂಡದ ಸಮನ್ವಯತೆ ಹಾಗೂ ಹುರುಪಿನ ಚಟುವಟಿಕೆಯನ್ನು ಗಣ್ಯರು ಶ್ಲಾಘಿಸಿದರು. ಶಿಕ್ಷಕರು, ಪೋಷಕರು ಹಾಗೂ ಸಂದರ್ಶಕರು ಮೋಜಿನ ಮೇಳವನ್ನು ಸಂಭ್ರಮಿಸಿದರು. ಅನುಭವಾತ್ಮಕ ಕಲಿಕೆ ಮತ್ತು ಸಮಗ್ರ ಅಭಿವೃದ್ಧಿಯ ಬದ್ಧತೆ ಬಗ್ಗೆ ಅರಿವು ಮೂಡಿಸಿದ ಕಾರ್ಯಕ್ರಮ ವಿಶೇಷವಾಗಿತ್ತು.

ಈ ವಿಶೇಷ ಕಾರ್ಯಕ್ರಮವನ್ನು ರೋಟರಿ ಮೈಸೂರು ಅಧ್ಯಕ್ಷ ರೋ.ಡಿ.ರವಿಶಂಕರ್ ಉದ್ಘಾಟಿಸಿದರು. ಉಪಾಧ್ಯಕ್ಷ ರೋ.ಎಂ.ಎನ್.ವೆಂಕಟೇಶ್, ವಿಜಯ ವಿಠಲ ವಿದ್ಯಾ ಸಂಸ್ಥೆಗಳ ಅಧ್ಯಕ್ಷ ಆರ್.ವಾಸುದೇವಭಟ್, ಸಂಸ್ಥೆಯ ಗೌರವ ಕಾರ್ಯದರ್ಶಿ ಸಿ.ಎ.ವಿಶ್ವನಾಥ, ವಿಜಯ ವಿಠಲ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಹೆಚ್.ಸತ್ಯಪ್ರಸಾದ್, ವಿದ್ಯಾಶಾಲೆಯ ಪ್ರಾಂಶುಪಾಲೆ ಶ್ರೀಮತಿ ಎಸ್.ಎ.ವೀಣಾ ಮತ್ತಿತರರು ಉಪಸ್ಥಿತರಿದ್ದರು.

ಎಸ್‌ಐಆರ್ ಕರ್ತವ್ಯಕ್ಕೆ ಹೆಚ್ಚುವರಿ ಸಿಬ್ಬಂದಿ ನಿಯೋಜನೆ

ರಾಜ್ಯಗಳಿಗೆ ಸುಪ್ರೀಂ ನಿರ್ದೇಶನ; ಒತ್ತಡ ಕಡಿಮೆ ಮಾಡಲು ಆದೇಶ

ನವದೆಹಲಿ, ಡಿ.4– ವಿವಿಧ ರಾಜ್ಯಗಳಲ್ಲಿ ಮತದಾರರ ಪಟ್ಟಿಗಳ ವಿಶೇಷ ತೀವ್ರ ಪರಿಷ್ಕರಣೆಯಲ್ಲಿ ಕೆಲಸ ಮಾಡುವಾಗ ಬಿಎಲ್‌ಒ ಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸಲು ಸುಪ್ರೀಂಕೋರ್ಟ್ ಗುರುವಾರ ಹಲವಾರು ನಿರ್ದೇಶನಗಳನ್ನು ನೀಡಿದೆ.

ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿ ಜೋಯ್ಮಲ್ಯ ಬಾಗ್ಚಿ ನೇತೃತ್ವದ ಸುಪ್ರೀಂಕೋರ್ಟ್‌ನ ದ್ವಿಸದಸ್ಯ ಪೀಠ ತನ್ನ ಆದೇಶದಲ್ಲಿ, ಪರಿಣಾಮ ಎದುರಿಸುತ್ತಿರುವ ರಾಜ್ಯಗಳು ಎಸ್‌ಐಆರ್ ಕರ್ತವ್ಯಕ್ಕಾಗಿ ಹೆಚ್ಚುವರಿ ಸಿಬ್ಬಂದಿಯನ್ನು ನಿಯೋಜಿಸಬೇಕು ಎಂದು ನಿರ್ದೇಶಿಸಿದೆ.

ಯಾವುದೇ ವ್ಯಕ್ತಿಗೆ ವಿನಾಯಿತಿ ಪಡೆಯಲು ನಿರ್ದಿಷ್ಟ ಕಾರಣವಿದ್ದಾಗ ರಾಜ್ಯ ಸರ್ಕಾರ ಅಂತಹ ವಿನಂತಿಗಳನ್ನು ಪ್ರತಿ ಪ್ರಕರಣದಲ್ಲಿಯೂ ಪ್ರತ್ಯೇಕವಾಗಿ ಪರಿಗಣಿಸಬೇಕು. ಬೇರೆ ಯಾವುದೇ ಪರಿಹಾರವನ್ನು ನಿಭಾಯಿಸದಿದ್ದರೆ, ನೊಂದ ವ್ಯಕ್ತಿಯು ನ್ಯಾಯಾಲಯವನ್ನು ಸಂಪರ್ಕಿಸಬಹುದು ಎಂದು ಸುಪ್ರೀಂಕೋರ್ಟ್ ಆದೇಶಿಸಿದೆ.

ಭಾರತೀಯ ಚುನಾವಣಾ ಆಯೋಗದ (ಇಸಿಐ) ವಿರುದ್ಧ ರಾಜಕೀಯ ಪಕ್ಷ ತಮಿಳಿಗ ವೆಟ್ರಿ ಕಳಗಂ (ಟಿವಿಕೆ) ಸಲ್ಲಿಸಿದ ಅರ್ಜಿಯನ್ನು ಆಲಿಸಿದ ನಂತರ, ಬಿಎಲ್‌ಒಗಳ ಸ್ಥಿತಿ, ಕೆಲಸದ ಒತ್ತಡವನ್ನು ಉಲ್ಲೇಖಿಸಿ ಆತ್ಮಹತ್ಯೆಗೆ ಶರಣಾಗಿರುವುದನ್ನು ಗಮನಿಸಿರುವ ನ್ಯಾಯಾಲಯ ಈ ಆದೇಶ ನೀಡಿದೆ.

ಗುರುವಾರದ ವಿಚಾರಣೆಯು ತಮಿಳುನಾಡು, ಪಶ್ಚಿಮ ಬಂಗಾಳ, ಉತ್ತರ ಪ್ರದೇಶ ಮತ್ತು ಕೇರಳ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ಎಸ್‌ಐಆರ್ ಪ್ರಕ್ರಿಯೆಯನ್ನು ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಗಳ ಗುಂಪಿನ ಭಾಗವಾಗಿತ್ತು.

ವಿಚಾರಣೆಯ ಸಮಯದಲ್ಲಿ ಟಿವಿಕೆ ಪರವಾಗಿ ಹಾಜರಾದ ಹಿರಿಯ ವಕೀಲ ಗೋಪಾಲ್ ಶಂಕರನಾರಾಯಣನ್, 35 ರಿಂದ 40 ಬಿಎಲ್‌ಒಗಳು ಆತ್ಮಹತ್ಯೆಯಿಂದ ಸಾವನ್ನಪ್ಪಿದ್ದಾರೆ ಎಂದು ವಾದಿಸಿದರು. ಇವರೆಲ್ಲರೂ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಶಿಕ್ಷಕರಾಗಿದ್ದಾರೆ.

ಗಡುವನ್ನು ಪೂರೈಸದಿದ್ದರೆ 2 ವರ್ಷಗಳ ಕಾಲ ಜೈಲು ಶಿಕ್ಷೆ ವಿಧಿಸಲಾಗುವುದು ಎಂದು ಅನೇಕರಿಗೆ ನೋಟಿಸ್‌ಗಳು ಬರುತ್ತಿವೆ ಎಂದು ಅವರು ಸುಪ್ರೀಂಕೋರ್ಟ್‌ಗೆ ತಿಳಿಸಿದರು. ಉತ್ತರ ಪ್ರದೇಶದಲ್ಲಿ ಬಿಎಲ್‌ಒಗಳ ವಿರುದ್ಧ 50 ಎಫ್‌ಐಆರ್‌ಗಳು ದಾಖಲಾಗಿವೆ ಅವರು (ಭಾರತೀಯ ಚುನಾವಣಾ ಆಯೋಗ) ಇದರ ಬಗ್ಗೆ ಹೆಮ್ಮೆ ಪಡುತ್ತಿದ್ದಾರೆ. ಒಬ್ಬ ಹುಡುಗ ತನ್ನ ಮದುವೆಗೆ ಹಾಜರಾಗಲು ಬಯಸಿದ್ದ. ಅವನಿಗೆ ಅವಕಾಶ ನಿರಾಕರಿಸಲಾಯಿತು ಮತ್ತು ಅವನು ಆತ್ಮಹತ್ಯೆ ಮಾಡಿಕೊಂಡ ಎಂದು ವಕೀಲರು ಉನ್ನತ ನ್ಯಾಯಾಲಯದ ಮುಂದೆ ವಾದಿಸಿದರು.


ಪೀಕ್ ಕ್ಯಾಪ್ ವಿತರಣೆ



ಮೈಸೂರಿನಲ್ಲಿ ಗುರುವಾರ ದಕ್ಷಿಣ ವಲಯ ಡಿಐಜಿ ಡಾ.ಎಂ.ಬಿ.ಬೋರಲಿಂಗಯ್ಯ ಅವರು ಪೊಲೀಸ್ ಸಿಬ್ಬಂದಿಗೆ ಹೊಸ ಮಾದರಿಯ ಪೀಕ್ ಕ್ಯಾಪ್ ಅನ್ನು ವಿತರಿಸಿದರು. ಈ ವೇಳೆ ಜಿಲ್ಲಾ ಪೊಲೀಸ್ ಅಧೀಕ್ಷಕ ಎನ್.ವಿಷ್ಣುವರ್ಧನ ಉಪಸ್ಥಿತರಿದ್ದರು.



Iron shop earlier running smoothly is now vacant. Interested parties may take over and continue operations. #164, MIG-1, Group-1, Near Bank of Baroda, Hootagalli, Mysore – 570018. Contact: 8971765852



INVITING

All Parents and Students of Class 12 / II PUC

the biggest platform for **CAREER CLARITY** what after +2?

CAREER uttsav — Connecting you to your future

06 Dec '25, Saturday
Timing 9:00AM – 5:00PM
JAGANNATHA CENTER FOR ART & CULTURE
Vijayanagar, Mysore

Presenting Partner: SAPTHAGIRI NPS UNIVERSITY
Co - Presenting Partners: ICFAI UNIVERSITY | RV UNIVERSITY

MEET NEW PEOPLE | LEARN NEW THINGS | MAKE RIGHT CHOICES

NextGen Skill Partner upGrad School of Technology — FREE IGNITE Internship Challenge (Worth ₹9999/-)

#why visit!
- Grab a FREE copy of the book "Careers After +2" (worth Rs 699/-)
- FREE Psychometric Test with 30 page Report (worth Rs 3099/-)
- Seek Clarity at 6+ Career Seminars / Panel Discussion with Industry Experts
- Meet & Interact with 30+ Top Universities/ Institutions/ Colleges

Exclusive Session: How To Score Well In Board Exams? Planning, Practice & Performance — CA Sripal Jain, Founder, Career Uttsav

University Partners: ALLIANCE UNIVERSITY | Dayananda Sagar University | REVA UNIVERSITY | VIT Vellore Institute of Technology
Knowledge Partners: EIMR | EAST POINT GROUP OF INSTITUTIONS | MANIPAL | Trisha CLASSES
NextGen Skill Partner: upGrad School of Technology | Overseas Medical Education Partner: American University of Antigua, MANIPAL University College Malaysia | Mock Test Partner: ALLEN | Career Assessment Partner: Career kaffe

FREE ENTRY — To Register Give a Missed Call @ 08045888799
Scan for Registration | An Initiative by K2 LEARNING | In Association with ies

www.careeruttsav.in

SITES FOR SALE
30X40
Starts @ 25 Lakhs
Bogadi Road
Call: 99458 57017

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ಮೈಸೂರು ಸಿಟಿ. ಹೆಬ್ಬಾಳ ಬಡಾವಣೆ, ಮೋರ್ ಹತ್ತಿರ, 1ನೇ ಹಂತ, 7ನೇ ಮುಖ್ಯರಸ್ತೆ, ಮನೆ ನಂ. 971, ವಯಸ್ಸು ಸುಮಾರು 66 ವರ್ಷ ವಯಸ್ಸಿನ ಸದಾಶಿವಣ್ಣ ಎನ್. ಎಂ. ರವರ ಮಗನಾದ ಎನ್. ಎಸ್. ವಿಶ್ವನಾಥ್ ರವರು ಈ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು, ಈ ಸ್ವತ್ತಿನ ಮಾಲೀಕರಾದ ಟಿ.ಎಫ್. ವಿಜಯಬಾಬು ಬಿನ್ ಟಿ. ಪುರುಷೋತ್ತಮ, ಸಿ–130, ನೋಟು ಮುದ್ರಣ ನಗರ, ಮೈಸೂರು 570003 ರವರಿಂದ ಷೆಡ್ಯೂಲ್ ಸ್ವತ್ತನ್ನು ನೋಂದಣಿ ಕ್ರಯಕ್ಕೆ ರವರಿಂದ ಈ ಕೆಳಗೆ ನಮೂದು ಮಾಡಿರುವ ಷೆಡ್ಯೂಲ್ ಸ್ವತ್ತನ್ನು ಖರೀದಿ ಮಾಡಲು ತೀರ್ಮಾನಿಸಿದ್ದು, ಸದರಿ ಷೆಡ್ಯೂಲ್ ಸ್ವತ್ತಿನ ಬಗ್ಗೆ ಸಾರ್ವಜನಿಕರಲ್ಲಿ ತಿಳಿಸುವುದೇನೆಂದರೆ, ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ವಿಧವಾದ ಹಕ್ಕು, ಅಧಿಕಾರ, ಮಾಲೀಕತ್ವ, ಹಿತಾಸಕ್ತಿ, ತಕರಾರುಗಳು ಇದ್ದ ಪಕ್ಷದಲ್ಲಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಸೂಕ್ತ ದಾಖಲೆಗಳೊಂದಿಗೆ ಈ ಪ್ರಕಟಣೆ ಪ್ರಕಟವಾದ 7 ದಿನಗಳೊಳಗಾಗಿ ನನ್ನ ಕಛೇರಿಗೆ ಖುದ್ದು ಬಂದು ಆಕ್ಷೇಪಣೆಯನ್ನು ಸಲ್ಲಿಸುವುದು.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ನಾಗವಾಲ ಗ್ರಾಮ ಪಂಚಾಯಿತ ವ್ಯಾಪ್ತಿಗೆ ಸೇರಿದ, ಹುಯಿಲಾಳು ಗ್ರಾಮ, ಜಿ.ಎಸ್.ಸಿ. ಕೋಡ್ ನಂ. ಪಿ.ಆರ್.ಒ.880005610824, ಸ್ವತ್ತಿನ ಸಂಖ್ಯೆ : 152200405128023433, ಸದರಿ ಸ್ವತ್ತಿನ ಸಂಖ್ಯೆ: ಗ್ರಾಮ ಪಂಚಾಯಿತ ದಾಖಲೆಗಳ ಪ್ರಕಾರ ಎಂ.6060/30/29, ಪೂರ್ವ ಪಶ್ಚಿಮ 9 ಮೀಟರ್‌ಗಳು, ಉತ್ತರದಕ್ಷಿಣ 12 ಮೀಟರ್‌ಗಳುಳ್ಳ ಒಟ್ಟು ವಿಸ್ತೀರ್ಣ 108 ಚದರ ಮೀಟರ್‌ಗಳಾಗಿರುತ್ತವೆ. ಸರ್ವೆ ನಂ. 56/3 ರಲ್ಲಿ ಒಟ್ಟು 2 ಎಕರೆ 37.5 ಗುಂಟಾ ದಲ್ಲಿ ರಚಿಸಿರುವ ನಿವೇಶನವಾಗಿದ್ದು, ನಿತ್ಯಾನಂದ ಸಾಗರ ಲೇಔಟ್ ಫೇಸ್ 1–ಎ ಎಂದು ರಚಿಸಿರುವ ಬಡಾವಣೆಯಾಗಿರುತ್ತದೆ.

ಟಿ.ಜೆ ರಘು ಬಿಎ.ಎಲ್., ಎಲ್.ಎಲ್.ಬಿ,
ವಕೀಲರು, ಕಛೇರಿ ಸಂಖ್ಯೆ: 01, 2ನೇ ಮಹಡಿ,
ಹೊಸ ರಾಮಮಂದಿರ, 3ನೇ ಅಡ್ಡರಸ್ತೆ,
ಜಯನಗರ, ಮೈಸೂರು –570009
ಮೊ ನಂ. 9945236899

ದಿನಾಂಕ: 04–12–2025 ಸ್ಥಳ: ಮೈಸೂರು

HOUSE FOR SALE IN GATED- COMMUNITY
As Per Your Requirement
Architect Designed Near St, Joseph School, Mysore
20x40 @ 38.8 lakhs
30x50 @ 72.5 lakhs
8123387555
7259348777

ಹೊಸ ಲೇಔಟ್ಸ್ ಆರಂಭವಾಗಿದೆ
- T.N ಪುರ ರಸ್ತೆ – ಸಪ್ತಮಾತೃಕ, ಪ್ರಶಾಂತ ಛಾಯ ಹೌಸಿಂಗ್ ಪ್ರಾಜೆಕ್ಟ್ ಪಕ್ಕ 14–25 ಲಕ್ಷ
- ಬನ್ನೂರು ರಸ್ತೆ – ಮಾನಸಿ ನಗರ ಹಿಂಬಾಗ ವಿದ್ಯಾವಿಕಾಸ್ ಕಾಲೇಜ್ ಎದುರು 25–49 ಲಕ್ಷ
- ಬೋಗಾದಿ ರಸ್ತೆ – ಹೊಸ ಕ್ರಿಕೆಟ್ ಸ್ಟೇಡಿಯಂ ಜಬ್ಬಿ ಹುಂಡಿ ಹಿಂಬಾಗ 29 ಲಕ್ಷ
- 30X50 ಮರಟಿಕ್ಯಾತನಹಳ್ಳಿ 42 ಲಕ್ಷ

Brokers Excuse
81230 75038

G9 projects Designing your Dreams | Vee2 Developers
POORVA SHELTERS PHASE 1, 2, & 3
Affordable plots, peaceful living
20×30 | 30×40 & 20×40 | 30×50
Near to Marvel PU College Lalithadripura Ring road Mysuru
8055-004-400





COMMERCIAL BUILDING FOR SALE
@ Nanjumalige
30x35. Contact:
Mob: 9480988340





PROPERTIES FOR SALE
Ready for Registration
Prime Locations
43x93
East Facing Ashokapuram Railway Station 100 Mtr Near Bedarakanappa Temple.
30 Gunta
Siddaiahna Hundi
H D Kote Main Road
Residential Converted
9 GUNTAS
100 ft Road Prime Location
Kergalli Main Road
Residential Converted
(Brokers Excuse)
9008111454



ಶ್ರೀ ಗೌರೀಶಂಕರ ಟ್ರಾವೆಲ್ಸ್
12–12–2025 (7 ದಿನ): ಅಯೋಧ್ಯೆ, ಕಾಶಿ, ದೆಹಲಿ, ಆಗ್ರಾ, ಮಥುರಾ, ಪ್ರಯಾಗ್‌ರಾಜ್, ಗಯಾ.
17–1–2026 (4 ದಿನ): ಭುವನೇಶ್ವರ್, ಪುರಿಜಗನ್ನಾಥ್, ಕೊಣಾರ್ಕ್
7–2–2026 (4 ದಿನ): ಭೀಮಾಶಂಕರ, ಶಿರಡಿ, ತ್ರಯ್ಯಂಬಕೇಶ್ವರ, ಘೃಷ್ಣೇಶ್ವರ್, ನಾಸಿಕ್.
(ವಿಮಾನ, AC ಬಸ್, ಊಟ, ರೂಂ)
Mob: 9448499538

ಬೇಕಾಗಿದ್ದಾರೆ
ಪ್ರತಿಷ್ಠಿತ ಕಂಪನಿಯಲ್ಲಿ ಕೆಲಸ ಮಾಡಲು ಸೂಪರ್‌ವೈಸರ್ (Supervisor) ಬೇಕಾಗಿದ್ದಾರೆ. ವಿದ್ಯಾರ್ಹತೆ: ಐ.ಟಿ.ಐ. ಅಥವಾ ಯಾವುದೇ ಡಿಗ್ರಿ, ಸಂಪರ್ಕಿಸಿ:
Mob: 96062-76769



Vidyavardhaka Sangha (R)
VIDYAVARDHAKA POLYTECHNIC
Vidyavardhaka Engineering College Campus,
3rd Stage, Gokulam, Mysore-570002 | Telefax: 0821-2419190
Email: vvpmysore@gmail.com | Website: www.vvpolytechnic.ac.in

Date: 05-12-2025

APPOINTMENT NOTIFICATION
Lecturers in the Dept. of CS & ME
Qualification: BE in CS & ME with minimum First Class.
Please submit the application addressed to the Principal along with the copies of Certificates, Resume & Passport size photo within 7 days from the date of publication. Salary as per AICTE scale.

Sd/- Hon. President — Sd/- Hon. Secretary

WANTED IT PROFESSIONAL
(Part-Time / Full-Time)
With Good Experience and Knowledge to Manage.
Servers, firewall, Networking, CCTV and Overall IT Infrastructure Support
Email Resume at- aravindan.S@apdpl.in
8971422339

ಕೆಲಸಕ್ಕೆ ಬೇಕಾಗಿದ್ದಾರೆ
ಹೆರಿಟೇಜ್ ನಗರ, ಹಡಜನ ಸರ್ಕಲ್, ದೇವಲಾಪುರ ರಸ್ತೆ, ಮೈಸೂರು ಇಲ್ಲಿರುವ ಸಿಮೆಂಟ್ ಮತ್ತು ಸ್ಟೀಲ್ ಅಂಗಡಿ ವ್ಯಾಪಾರ ನೋಡಿಕೊಳ್ಳಲ್ಲು ಮಹಿಳೆಯೊಬ್ಬರು ಕೆಲಸಕ್ಕೆ ಬೇಕಾಗಿದ್ದಾರೆ. ವಿದ್ಯಾರ್ಹತೆ: ಪಿ.ಯು.ಸಿ ಹಾಗೂ ಒಬ್ಬ ಪುರುಷ ಅಂಗಡಿ ಸಹಾಯಕ ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
8899774477
9845834679

ಗ್ರಾಹಕರು / ವಿತರಕರು / ವರ್ತಕರು / ಸಾರ್ವಜನಿಕರ ಗಮನಕ್ಕೆ

ನನ್ನ ಕಕ್ಷೀದಾರರಾದ A.ಹೈದರ್, ಲೇಟ್ M.A. ಅಬ್ದುಲ್ ರವೂಫ್‌ರವರ ಪುತ್ರರು, ಹರೇ ಕೃಷ್ಣ ಬೀಡಿಗಳು ಎಂಬ ಬೀಡಿ ತಯಾರಿಕಾ ಸಂಸ್ಥೆಯ ಅಧಿಕೃತ ಮಾಲೀಕರಾಗಿರುತ್ತಾರೆ. ಸದರಿ ಸಂಸ್ಥೆಯು ಸುಮಾರು 40 ವರ್ಷದ ಹಳೆಯ ಸಂಸ್ಥೆ. ಮೊದಲು ಇದನ್ನು ಅವರ ತಂದೆಯಾದ ದಿವಂಗತ **M.A.** ಅಬ್ದುಲ್ ರವೂಫ್ ರವರು ನಡೆಸುತ್ತಿದ್ದರು. ಅವರು ಅಗಲಿದ ನಂತರ ಸಂಸ್ಥೆಯನ್ನು ನನ್ನ ಕಕ್ಷೀದಾರರು ಮುಂದುವರೆಸಿ ನಡೆಸುತ್ತಿದ್ದಾರೆ. ಸದರಿ ಬೀಡಿಯ **TRADE MARK** ಕೇವಲ ನನ್ನ ಕಕ್ಷೀದಾರರದೇ ಆಗಿದ್ದು, ಅದು **Trade Mark Registry &** ಯಲ್ಲಿ ನೋಂದಾಯಿತವಾಗಿದೆ. ನೋಂದಣಿ ಸಂಖ್ಯೆ: **3778761, Class No. 34** ಅಡಿ. ಇತ್ತೀಚೆಗೆ ಮಾರುಕಟ್ಟೆಯಲ್ಲಿ ಹರೇ ಕೃಷ್ಣ ಬೀಡಿಗಳು ಎಂಬ ಹೆಸರಿನಲ್ಲಿ ಹಾಗು ಲೇಬಲ್ ಡಿಸೈನ್ ಕಾಪಿ ಮಾಡಿ ನಕಲಿ ಸಂಸ್ಥೆಗಳು ಕಾಣಿಸಿಕೊಂಡಿದ್ದು, ಅದೇ ಹೆಸರನ್ನು ಹಾಗು ಲೇಬಲ್ ಡಿಸೈನನ್ನು ದುರುಪಯೋಗಪಡಿಸಿಕೊಂಡು ನಕಲಿ ಬೀಡಿ ಉತ್ಪಾದನೆ ಮತ್ತು ವ್ಯಾಪಾರ ನಡೆಸುತ್ತಿರುವುದು ನನ್ನ ಕಕ್ಷೀದಾರರ ಗಮನಕ್ಕೆ ಬಂದಿದೆ. ಈ ರೀತಿಯ ಚಟುವಟಿಕೆಗಳು ಸ್ಪಷ್ಟವಾದ ಶಿಕ್ಷಾರ್ಹ ಅಪರಾಧ. ಇಂತಹ ವ್ಯಕ್ತಿಗಳು ಅಥವಾ ಸಂಸ್ಥೆಗಳ ವಿರುದ್ಧ ಕಾನೂನು ಕ್ರಮ ಹಾಗೂ ಕ್ರಿಮಿನಲ್ ಕೇಸ್ ದಾಖಲಿಸಲು ನನ್ನ ಕಕ್ಷೀದಾರರು ಸಂಪೂರ್ಣ ಹಕ್ಕು ಹೊಂದಿರುತ್ತಾರೆ. ಜೊತೆಗೆ, ನನ್ನ ಕಕ್ಷೀದಾರರ ಸಂಸ್ಥೆಗೆ ಉಂಟಾಗಿರುವ ಎಲ್ಲ ರೀತಿಯ ನಷ್ಟವನ್ನು ಪರಿಹರಿಸುವ ಜವಾಬ್ದಾರಿ ಕೂಡ ಅವರದ್ದೇ ಆಗಿರುತ್ತದೆ.

Sd/- C.K VENKATESH, B.Sc.,LL.B
Advocate, KAR-491/1990
14, Kanakadasa Marga, Ishwaryanagar, 'N' Block,
Near BARC (Old RMP) Quarters,
Kuvempunagar, MYSORE-570023
Mob: 9972711996

WANTED
1. OFFICE IN CHARGE
2. FIELD SUPERVISOR CUM MARKETING
For a reputed Land Developer's office
Contact:
91415 55998

